BUDGET ESTIMATES FOR 1967-68—DEMAND FOR GRANTS

DEMAND NOS. 10, 14, 16, 20, 24 and 44

(*Debate Continued*).

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರತಕ್ಕ ಸಾಮಾನ್ಯ ಆಡಳಿತ, ವ್ಯವಸಾಯ ಹಾಗೂ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಈ ಬಡ್ಜೆಟ್ಟನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮುಖ್ಯವಾಗಿ ಈ ದೇಶದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದು 4ನೇ ಪಂಚವಾರ್ಷಿಕ ಯೋಜನೆಗೆ ಕಾಲಿಡುತ್ತಿರುವ ಈ ಕಾಲದಲ್ಲಿ ಇಲಾಖೆಗಳು ಬೆಳೆಯುತ್ತಿವೆ ಮತ್ತು ಅದೇ ರೀತಿ ಕೆಲಸಗಳೂ ಹೆಚ್ಚಾಗುತ್ತಿವೆ. ಆದಕ್ಕೆ ತಕ್ಕಂತೆ ಅಧಿಕಾರಿಗಳ ಬೆಳವಣಿಗೆಯೂ ಕೂಡ ಆಗುತ್ತಾ ಇರುವುದು ಸಹಜವಾದದ್ದೇ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಹಣದ ಕೊರತೆ, ಆಹಾರದ ಅಭಾವದಿಂದಾಗಿ ಶೇಕಡ ಹತ್ತರಷ್ಟು ಮಿತವ್ಯಯ ಗೊಳಿಸಬೇಕೆಂದು ಈಗತಾನೆ ನಮ್ಮ ರಾಜ್ಯಸರ್ಕಾರದವರು ಕೈಕೊಂಡಿರತಕ್ಕ ನಿರ್ಣಯವನ್ನು ನೋಡಿದ್ದೇವೆ. ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಲಾಗಿರತಕ್ಕ ಅನೇಕ ಅಧಿಕಾರಿಗಳ ಸಂಖ್ಯೆ ಏನಿದೆ ಅದು ಹೆಚ್ಚಾಗುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ, ಈ ಅಧಿಕಾರಿಗಳ ಸಂಖ್ಯೆ ಬಹಳ ಜಾಗ್ರತೆಯಾಗಿ ಮತ್ತು ಬಹಳ ಸಂಖ್ಯೆಯಲ್ಲಿ ಬೆಳೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅದನ್ನು ಎಷ್ಟು ಪರಮಾವಧಿವರೆಗೆ ಕಡಿಮೆ ಮಾಡಬೇಕೋ ಅಷ್ಟನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ. ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ ಮೈಸೂರು ರಾಜ್ಯದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ ಅಂತ ಒಪ್ಪಿಕೊಂಡರೂ ಈಚೀಚೆಗೆ ಡೈರೆಕ್ಟ್ ರಿಕ್ರೂಟ್ ಮೆಂಟ್ ಅಥವಾ ಇನ್‌ಡೈರೆಕ್ಟ್ ಆಗಿ ಪ್ರಮೋಷನ್‌ನಲ್ಲಿ ಬಂದಿರತಕ್ಕವರಲ್ಲಿ ಅನೇಕರು ನಮ್ಮ ತಾಲ್ಲೂಕು ಮಟ್ಟದಲ್ಲಿ ಮತ್ತು ಸಬ್‌ಡಿವಿಜನ್ ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ರೈತರು ಹಾಗೂ ಇತರರ ಅಹವಾಲನ್ನು ಜಾಗ್ರತೆಯಾಗಿ ತೀರ್ಮಾನ ಮಾಡುತ್ತಿಲ್ಲ ಎಂದು ಜನರಿಂದ ಹೆಚ್ಚಿನ ಕೂಗು ಇದೆ. ಇದಕ್ಕೆ ಕಾರಣ ಆ ಅಧಿಕಾರಿಗಳು ತೀರ್ಮಾನವನ್ನು ತೆಗೆದುಕೊಳ್ಳದೆ ಮೇಲ್ಮಟ್ಟ ಅಧಿಕಾರಿಗಳ ತೀರ್ಮಾನಕ್ಕೆ ಆದನ್ನು ಹಾಗೆಯೇ ಇಡುತ್ತಾ ಇರುವ ಪ್ರಮೇಯ ಅಥವಾ ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ ಇಡುತ್ತಾ ಇರುವ ಪ್ರಮೇಯ ಇವತ್ತು ಬೆಳೆಯುತ್ತಾ ಇದೆ. ಸಾಮಾನ್ಯವಾಗಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕಿನ ಅಧಿಕಾರಿಗಳು ರೈತರಿಗೆ ಆಗಬೇಕಾದ, ಒಂದು ಕೊಡಬೇಕಾ ದಂತಹ ತೀರ್ಮಾನವನ್ನು ಕೊಡದೇ ಪದೇ ಪದೇ ಅವರು ಈ ಆಫೀಸುಗಳಿಗೆ ತಿರುಗತಕ್ಕ ಮನೋ ಭಿಪ್ರಾಯ ಹೆಚ್ಚಾಗುತ್ತಾ ಇದೆ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಹಾಗೂ ಅವರ ಕೆಳಗೆ ಇರತಕ್ಕ ಅಧಿಕಾರಿಗಳು ಕೆಳಮಟ್ಟದ ಆಫೀಸುಗಳಿಗೆ ಸರ್‌ಪ್ರೈಸ್ ಇನ್‌ಸ್ಪೆಕ್ಷನ್ ಮಾಡಬೇಕಾದ ಪ್ರಮೇಯ ಹೆಚ್ಚಾಗುತ್ತಾ ಇದೆ.

[MR. DEPUTY SPEAKER in the Chair]

ಆದ್ದರಿಂದ ಸರ್‌ಪ್ರೈಸ್ ಇನ್‌ಸ್ಪೆಕ್ಷನ್ ಮಾಡಬೇಕೆಂದು ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ರೆವಿನ್ಯೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯ ವಿಷಯ ಎಂದರೆ ಸೀನಿಯಾರಿಟಿ ಲಿಸ್ಟ್ ಬಗ್ಗೆ ಜಾಗ್ರತೆ ತೀರ್ಮಾನವನ್ನು ತೆಗೆದುಕೊಳ್ಳದೆ, ಅಧಿಕಾರಿಗಳಲ್ಲಿ ಬಹಳ ಜಿಜ್ಞಾಸೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಮೈಸೂರು ರಾಜ್ಯಕ್ಕೆ ಹೈದರಾಬಾದು ಕರ್ನಾಟಕ, ಬೊಂಬಾಯಿ ಕರ್ನಾಟಕ ಪ್ರಾಂತ್ಯಗಳು ಸೇರಿರುವುದರಿಂದ ಅದು ತಡವಾಗುತ್ತಾ ಇರುವುದು ಸಹಜ. ಮಾನ್ಯ ಮುಖ್ಯ ಮಂತ್ರಿ ಗಳಲ್ಲಿ ಇವತ್ತಿನ ದಿವಸ ನಾನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ನಾನು ಇದನ್ನು ಅನೇಕ ಸಾರಿ ಇಲ್ಲಿ ಅವಕಾಶ ದೊರಕಿದಾಗಲೆಲ್ಲಾ ಹೇಳಿದ್ದೇನೆ; ಸಿ.ಸಿ.ಎ. ರೂಲ್ಸ್ ಏನಿದೆ ಅದನ್ನು ಅಮೆಂಡ್‌ಮಾಡಿ ಜಾಗ್ರತೆಯಾಗಿ ಯಾವ ಅಧಿಕಾರಿ ತಪ್ಪಿತಸ್ಥನೋ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅದು ಈಗ ಬಹಳ ವಿಳಂಬವಾಗುತ್ತಾ ಇದೆ. ಯಾವುದಾದರೂ ಒಬ್ಬ ಅಧಿಕಾರಿ ಅವನು ತಪ್ಪಿತಸ್ಥನೇ ಅಲ್ಲವೇ, ಆತನ ಮೇಲೆ ಕ್ರಮ ತೆಗೆದುಕೊಳ್ಳ ಬೇಕೇ, ಬೇಡವೆ ಎಂಬುದಕ್ಕೆ, ಆ ವಿಷಯ ಜಾಗ್ರತೆ ವಿಲೇವಾರಿಯಾಗುವುದಕ್ಕೆ ಸಿ.ಸಿ.ಎ. ರೂಲ್ಸ್‌ನಲ್ಲಿ

ಸಂಬಂಧಪಟ್ಟ ತಿದ್ದುಪಡಿಯನ್ನು ಮಾಡಲು ಜಾಗ್ರತೆ ಕ್ರಮತೆಗೆದುಕೊಳ್ಳಬೇಕೆಂದು ಈ ಮಾನ್ಯ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಿಂದೆ ಬಡ್ಜೆಟ್ ಮೇಲೆ ಮಾತನಾಡುವ ಕಾಲದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ, ಇದೇ ಸಭೆಯಲ್ಲಿ ತಾವು ಡಿವಿಜನಲ್ ಕಮಿಷನರು ಮತ್ತು ಸಬ್‌ಡಿವಿಜನ್ ಆಫೀಸುಗಳನ್ನು ರದ್ದು ಮಾಡುವ ವಿಷಯದಲ್ಲಿ ಪ್ರಸ್ತಾಪಮಾಡಿದ್ದೀರಿ. ಈ ಆಫೀಸುಗಳ ಅವಶ್ಯಕತೆ ಇಲ್ಲ ಎಂದು ನಾನು ಹೇಳಲಿಚ್ಛಿಸುತ್ತೇನೆ. ಡಿವಿಜನಲ್ ಕಮಿಷನರ ಆಫೀಸು ಮತ್ತು ಸಬ್ ಡಿವಿಜನ್ ಆಫೀಸುಗಳು ಪೋಸ್ಟ್ ಆಫೀಸಿನ ರೀತಿಯಲ್ಲಿವೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಮಾನ್ಯ ರೆವಿನ್ಯೂ ಮಿನಿಸ್ಟರು ಈ ವಿಷಯವನ್ನು ಪರ್ಯಾಲೋಚನೆ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ಮಿತವ್ಯಯ ಸಾಧಿಸಬೇಕಾದರೆ ಇವತ್ತಿನ ದಿವಸ ಡಿವಿಜನಲ್ ಕಮಿಷನರ್ ಆಫೀಸಿನಲ್ಲಿರತಕ್ಕ ಇಬ್ಬರು ಗೆಜೆಟೆಡ್ ಅಧಿಕಾರಿಗಳು, ಅದಕ್ಕೆ ಸಂಬಂಧಪಟ್ಟ ಆಫೀಸು, ಮ್ಯಾನೇಜರು, ಸಿಬ್ಬಂದಿ ಇದನ್ನೆಲ್ಲಾ ಲೆಕ್ಕಾ ಹಾಕಿದರೆ ಅದಷ್ಟು ಜಾಗ್ರತೆ ಒಂದು ತೀರ್ಮಾನವನ್ನು ತೆಗೆದುಕೊಂಡು ಈ ಆಫೀಸನ್ನು ರದ್ದು ಮಾಡುವುದು ಒಳ್ಳೆಯದು; ಏಕೆಂದರೆ ಅವರಿಗೆ ಇರತಕ್ಕ ಅಧಿಕಾರ ಸಣ್ಣಪುಟ್ಟ ಅಪೀಲುಗಳನ್ನು ತೀರ್ಮಾನ ಮಾಡುವುದು ಅಥವಾ ಸಬ್‌ಡಿವಿಜನ್ ಮಟ್ಟದಲ್ಲಿ ತೀರ್ಮಾನ ಕೈಕೊಳ್ಳತಕ್ಕ ಅಧಿಕಾರ, ಆದ್ದರಿಂದ ಈ ಆಫೀಸು ಹೋಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ, ಸರ್ಕಾರದವರು ಈ ವಿಷಯ ವನ್ನು ತೀವ್ರವಾಗಿ ಆಲೋಚನೆ ಮಾಡಿ ಮಿತವ್ಯಯವನ್ನು ಸಾಧಿಸಲು ಇದನ್ನು ರದ್ದುಪಡಿಸುವುದು ಒಳ್ಳೆಯದೆಂದು ಹೇಳುತ್ತೇನೆ.

ಇವೊತ್ತಿನ ದಿವಸ ವ್ಯವಸಾಯದ ಕ್ಷೇತ್ರದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು ನಾಲ್ಕು ಕೋಟಿಯಷ್ಟು ಖರ್ಚಾಗುತ್ತಿದ್ದುದು ಈಗ 8,73,19,000 ರೂಪಾಯಿಗಳಷ್ಟು ವ್ಯವಸಾಯದ ಇಲಾಖೆಗಾಗಿಯೇ ಖರ್ಚು ಮಾಡುತ್ತಿರುವುದು ಬಹಳ ಶ್ಲಾಘನೀಯವಾದುದು. ವ್ಯವಸಾಯ ಮಾಡುತ್ತಿರುವ ರೈತರಿಗೆ ಎಲ್ಲ ಅನುಕೂಲಗಳನ್ನೂ ಕೊಡುವುದಕ್ಕಾಗಿ ಇಲಾಖೆಯ ಮುಖೇನ ಇವೊತ್ತು ಶಕ್ತಿಮಾನ್ ಜೋಳದ ಬೀಜ, ಮೆಕ್ಕೆ ಜೋಳ ಹಾಗೂ ತಾಯ್‌ಚುಂಗ್ ಭತ್ತದ ಬೀಜಗಳು ಹಾಗೂ ಇಂಪ್ರೂವ್ಡ್ ವೆರೈಟೀಸ್ ಎಂದು ಹೇಳಿ ಏನು ಬೀಜಗಳನ್ನು ಕೊಡುತ್ತಿದ್ದಾರೆ ಅದು ಜನರಿಗೆ ಬಹಳ ಅನುಕೂಲಗಳನ್ನು ಕೊಡುತ್ತಿದೆ ಎಂದು ಈಚೆಗೆ ಜನರಲ್ಲಿ ಒಂದು ರೀತಿಯಾದ ಉತ್ಸಾಹ ಬರುತ್ತಿದೆ ಮತ್ತು ಇದರಿಂದಾಗಿ ಪ್ರತಿಯೊಬ್ಬರೂ ನಾನು ಬೆಳೆಯಬೇಕು ತಾನು ಹೆಚ್ಚಾಗಿ ಬೆಳೆ ಮಾಡಬೇಕು ಎನ್ನುವ ಆಸೆ ಬಂದಿದೆ. ಇದಕ್ಕಾಗಿ ಸರ್ಕಾರದವರು ಶಕ್ತಿಮಾನ್ ಜೋಳ ಹಾಗೂ ಇನ್ನಿತರ ಬೀಜ ಗಳನ್ನು ರೈತರಿಗೆ ಸರಿಯಾಗಿ ಸಕಾಲದಲ್ಲಿ ಹಂಚುವ ಏರ್ಪಾಡು ಮಾಡಬೇಕು. ಅದರಲ್ಲೂ ನಮ್ಮ ಬೆಂಗಳೂರು ಜಿಲ್ಲೆಗೆ ಸೇರಿರುವ ನಮ್ಮ ತಾಲ್ಲೂಕಿನಲ್ಲಿ ಸರಕಾರ ಹಂಚುತ್ತಿರುವ ಬೀಜಗಳ ಪ್ರಮಾಣ ಕಡಿಮೆ ಎನ್ನುವ ಭಾವನೆ ಬಂದಿದೆ. ಇದನ್ನು ಇನ್ನೂ ಹೆಚ್ಚುಮಾಡಬೇಕೆಂದು ಸರಕಾರಕ್ಕೆ ಈ ಮೂಲಕ ಸೂಚನೆ ಕೊಡಬಯಸುತ್ತೇನೆ.

2-30 P. M.

ಇನ್ನು ವ್ಯವಸಾಯದ ಇಲಾಖೆಯನ್ನು ನೋಡಿದರೆ ಕೆಲವು ಕಡೆಗಳಲ್ಲಿ ಸಬ್‌ಡಿವಿಜನ್ನುಗಳೆಂದು ಮಾಡಿ ಅಲ್ಲಿಗೆ ಒಬ್ಬರು ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರು ಎನ್ನುವವರನ್ನು ಪೋಸ್ಟು ಮಾಡಿ ದ್ದಾರೆ. ಆದರೆ ಇವರನ್ನು ಎಲ್ಲ ಜನರಿಗೂ ಅನುಕೂಲವಾಗುವ ರೀತಿಯಲ್ಲಿ ಇವರ ಹೆಡ್‌ಕ್ವಾರ್ಟರ್ಸ್ ಇಡಬೇಕು. ಈಗೇನೋ ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬರು ಡೆಪ್ಯೂಟೀ ಡೈರೆಕ್ಟರ್ ಎಂದು ನೇಮಿಸಿದ್ದಾರೆ. ಸರಕಾರದವರು ಎರಡು ಮೂರು ತಾಲ್ಲೂಕುಗಳನ್ನು ಸೇರಿಸಿ ಒಂದು ಸಬ್‌ಡಿವಿಜನ್ ಎಂದು ಮಾಡಿದ್ದಾರೆ. ಅಲ್ಲಿಗೆ ಒಬ್ಬರು ಡಿಸ್ಟ್ರಿಕ್ಟ್ ಅಗ್ರಿಕಲ್‌ಚರು ಅಧಿಕಾರಿಗಳೆಂದು ಮಾಡಿದ್ದಾರೆ. ನಮ್ಮ ಬೆಂಗಳೂರು ಜಿಲ್ಲೆಯಲ್ಲಿರುವ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಒಂದು ಸಬ್ ಡಿವಿಜನ್ ಎಂದು ಮಾಡಿ ಅಲ್ಲೇ ಹೆಡ್‌ಕ್ವಾರ್ಟರ್ಸ್ ಮಾಡಿದ್ದಾರೆ. ಈ ಸಬ್ ಡಿವಿಸನ್ನಿಗೆ ಹೊಸಕೋಟೆ ಇನ್ನೂ ಕೆಲವು ತಾಲ್ಲೂಕುಗಳು ಬರುತ್ತವೆ. ಇವರ ಹೆಡ್‌ಕ್ವಾರ್ಟರ್ಸನ್ನು ಬೆಂಗಳೂರು ಜಿಲ್ಲೆಯಲ್ಲಿರುವ ಬೆಂಗಳೂರಿನಲ್ಲೇ ಮಾಡಿದರೆ ಎಲ್ಲ ತಾಲ್ಲೂಕುಗಳ ಜನರಿಗೂ ಅನುಕೂಲವಾಗುತ್ತದೆ. ಆ ರೀತಿ ಮಾಡುತ್ತಾರೆಂದು ಸರಕಾರಕ್ಕೆ ಸೂಚನೆ ಕೊಡಬಯಸುತ್ತೇನೆ. ಇದನ್ನು ನಾನು ಆಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ ಮತ್ತು ಇಲಾಖೆಯವರೂ ಇದನ್ನು ಪರಿಸೀಲಿಸಿ ಮಾಡು ತ್ತಾರೆಂದು ಆಶಿಸುತ್ತೇನೆ, ಹೀಗೆ ಮಾಡಿದರೆ ಹೊಸಕೋಟೆ, ಆನೇಕಲ್, ದೊಡ್ಡಬಳ್ಳಾಪುರದ ತಾಲ್ಲೂಕಿನ ಜನರಿಗೆಲ್ಲಾ ಅನುಕೂಲವಾಗುತ್ತದೆ. ಆದುದರಿಂದ ದೊಡ್ಡಬಳ್ಳಾಪುರದಲ್ಲಿರುವ ಸಬ್ ಡಿವಿಜನನ್ನು ಬೆಂಗಳೂರಿನಲ್ಲೇ ಇಡುವಂತೆ ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡು ತ್ತೇನೆ.

(ಶ್ರೀ ಎನ್. ಚಿಕ್ಕೇಗೌಡ)

ಇವೊತ್ತಿನ ದಿವಸ ವ್ಯವಸಾಯದ ಇಲಾಖೆ ಅಧಿಕಾರಿಗಳಲ್ಲಿ ಒಂದು ದೊಡ್ಡ ಜಿಜ್ಞಾಸೆ ಬಂದಿದೆ. ಇಲ್ಲಿರುವ ಅಧಿಕಾರಿಗಳಲ್ಲಿ ನಮಗೆ ಪ್ರಮೋಷನ್ ಸಿಕ್ಕಲಿಲ್ಲ ನಮ್ಮ ಸೀನಿಯಾರಿಟಿ ಸರಿಯಾಗಿಲ್ಲ ಎನ್ನುವ ವ್ಯವಹಾರಗಳು ಈ ಇಲಾಖೆಯಲ್ಲಿರುವಷ್ಟು ಬೇರೆಲ್ಲೂ ಇಲ್ಲ. ಇದರಿಂದ ಇಲ್ಲಿನ ಅಧಿಕಾರಿಗಳ ಮನಸ್ಸಿನಲ್ಲಿ ಬಹಳ ಖೇದವುಂಟಾಗಿದೆ. ಆದುದರಿಂದ ಇಲ್ಲಿ ಪ್ರಮೋಷನ್ ಇತ್ಯಾದಿಗಳ ಬಗ್ಗೆ ಆಗಿರುವ ಅನ್ಯಾಯಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಕೋರುತ್ತೇನೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಅನುಕೂಲವಾಗುವಂತೆ ವ್ಯವಸಾಯ ಇಲಾಖೆಯ ಅಧಿಕಾರಿಗಳು ಕೆಲಸ ಮಾಡಬೇಕು. ಅಲ್ಲದೆ ಈ ವ್ಯವಸಾಯ ಇಲಾಖೆಯಲ್ಲಿ ಗ್ರಾಮ ಸೇವಕರು ಎಂದು ಕೆಲವರು ಎಲ್. ಎ. ಜಿ. ಡಿಪ್ಲೊಮಾ ಪಡೆದುಕೊಂಡವರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರನ್ನು ಈಚೆಗೆ ವಿಲೇಜು ಎಕ್ಸ್‌ಟೆನ್‌ಷನ್ ಆಫೀಸರುಗಳು ಎಂದು ನೇಮಕ ಮಾಡಿದ್ದಾರೆ. ಇವರ ಮೇಲೆ ಗ್ರಾಮ ಸೇವಕರನ್ನು ಪ್ರಮೋಟು ಮಾಡಿ ಎಕ್‌ಟೆನ್‌ಷನ್ ಆಫೀಸರು ಎಂದು ಮಾಡಿರುವುದು ಕೆಲವು ಕಡೆಗಳಲ್ಲಿ ಸರಿಯಾಗಿಲ್ಲ, ಗ್ರಾಜುಯೇಟುಗಳಾಗಿರುವವರಿಗೆ ಇದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಸರಿಯಾದ ಮಾಹಿತಿ ಪಡೆದು ಇವನ್ನೆಲ್ಲಾ ಸರಿಪಡಿಸಬೇಕು. ಇದರಲ್ಲಿ ಸೀನಿಯಾರಿಟಿ, ಸರ್ವಿಸ್ಸು ಇತ್ಯಾದಿಗಳನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ಇದರ ಲೋಪದೋಷಗಳನ್ನು ಸರಿಪಡಿಸಬೇಕು. ಈಗ ಮಾಡಿರುವುದು ನ್ಯಾಯವಲ್ಲ. ಸಂಬಂಧಪಟ್ಟ ಇಲಾಖೆಯವರು ಇದನ್ನು ಗಮನಕ್ಕೆ ತೆಗೆದುಕೊಂಡು ಸರಿಪಡಿಸಬೇಕು.

ಈ ದೇಶದಲ್ಲಿ ರೀಸರ್ಚ್ ಫಾರಂಗಳಿವೆ. ಇಲ್ಲಿಂದ ಸುಧಾರಿತ ಬೀಜಗಳನ್ನು ತಂದು ರೈತರಿಗೆ ಹಂಚುತ್ತಾರೆ. ಉತ್ತಮವಾದ ತಳಿಯ ಬೀಜಗಳನ್ನು ತಂದು ಹಂಚುವುದೇನೋ ಸರಿ ಹೀಗೆ ರೈತರಿಗೆ ಬೀಜಗಳನ್ನು ಕೊಡುವಾಗ ತಜ್ಞರ ಸಲಹೆಯನ್ನೂ ಕೊಟ್ಟು ಯಾವ ಯಾವ ಕಾಲದಲ್ಲಿ ಎಂತಹ ಬೀಜಗಳನ್ನು ಹಾಕಬೇಕು ಎಂದು ನೋಡಿ ಅಲ್ಲಿನ ಹವಾಮಾನಕ್ಕೆ ಅನುಸಾರವಾಗಿ ಸಹಾಯ ಮಾಡಿದರೆ ರೈತರಿಗೂ ಅನುಕೂಲವಾಗುತ್ತದೆ. ವ್ಯವಸಾಯ ಇಲಾಖೆಯವರು ಆದಷ್ಟು ಜಾಗ್ರತೆ ಉತ್ಪತ್ತಿ ಬರುವಂತಹ ಬೀಜಗಳನ್ನು ರೈತರಿಗೆ ಹಂಚುವ ವ್ಯವಸ್ಥೆ ಮಾಡಬೇಕು. ಈಚೆಗೆ ಸರಕಾರ ತಾಯ್‌ಚುಂಗ್ 65 ಮಾದರಿ ಬೀಜ ಎಂದೂ ತಾಯ್‌ಚುಂಗ್ ನೇಟೀವ್ ಒಂದು, ಐ. ಆರ್ 8 ಎಂದು ಈ ರೀತಿ ಹೆಚ್ಚು ಇಳುವರಿ ಬರುವ ಬೀಜಗಳನ್ನು ರೈತರಿಗೆ ಹಂಚುವ ವ್ಯವಸ್ಥೆ ಮಾಡಿದ್ದಾರೆ. ಇದೇ ರೀತಿ ಸರಕಾರ ಇಂಪ್ರೂವ್‌ಡ್ ವೆರೈಟೀ ಸೀಡ್ಸ್‌ಗಳನ್ನು ಹಂಚುವ ವ್ಯವಸ್ಥೆ ಮಾಡಿ ಯಾವ ಯಾವ ಕಾಲದಲ್ಲಿ ಯಾವ ರೀತಿಯಾದ ಬೀಜಗಳನ್ನು ಉಪಯೋಗಿಸಬೇಕು, ಬೇಸಿಗೆಗೆ ಅನುಕೂಲವಾದ ಬೀಜಗಳಾವುವು ? ಮುಂಗಾರಿಗೆ ಹೊಂದಿಕೊಳ್ಳುವ ಬೀಜಗಳಾವುವು ಇತ್ಯಾದಿಗಳ ಬಗ್ಗೆ ಜನರಿಗೆ ತಿಳುವಳಿಕೆ ಕೊಟ್ಟು ಹೆಚ್ಚು ಉತ್ಪತ್ತಿ ಬರುವಂತೆ ಸೀಡ್ಸ್ ಮಲ್ಟಿಪ್ಲಿಕೇಷನ್ ಕೆಲಸಗಳನ್ನು ಮಾಡಬೇಕು. ಇದರಿಂದ ದೇಶದಲ್ಲಿ ಹೆಚ್ಚು ಉತ್ಪನ್ನ ಮಾಡಲೂ ಅವಕಾಶವಾಗುತ್ತದೆ.

ಇನ್ನು ವ್ಯವಸಾಯದ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ರೈತರ ಸಂಪರ್ಕವನ್ನು ಸರಿಯಾಗಿ ಪಡೆದಿಲ್ಲ. ಅವರು ಇನ್ನೂ ಅಧಿಕಾರಿಗಳಂತೆಯೇ ಇದ್ದಾರೆ. ನಾನು ಅಮೆರಿಕಾ ದೇಶಕ್ಕೆ ಹೋಗಿದ್ದಾಗ ಅಲ್ಲಿ ಒಬ್ಬರು ವಿಲೇಜು ಎಕ್ಸ್‌ಟೆನ್‌ಷನ್ ಆಫೀಸರ ಬಳಿ ಇಳಿದುಕೊಡಿದ್ದೆ. ನನಗೆ ಅವರು ಅಧಿಕಾರಿಗಳು ಎನ್ನುವುದೇ ಮೊದಲು ತಿಳಿದಿರಲಿಲ್ಲ. ಅಲ್ಲಿ ರೈತರೂ ಒಂದೇ ರೀತಿ ಇದ್ದಾರೆ ಅಧಿಕಾರಿಗಳೂ ಒಂದೇ ರೀತಿ ಇದ್ದಾರೆ. ಯಾರಲ್ಲಿಯೂ ಭೇದಭಾವನೆಗಳೇ ಇರುವುದಿಲ್ಲ. ಈ ರೀತಿ ನಮ್ಮ ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳ ಮನೋಭಾವನೆಯೂ ಬದಲಾವಣೆಯಾಗಬೇಕು, ಹಾಗೂ ಮನೋ ವಿಕಾಸವಾಗಬೇಕು ಎಂದು ಮಾನ್ಯ ಸಚಿವರಿಗೆ ಈ ಸಭೆಯ ಮೂಲಕ ಹೇಳಲು ಇಷ್ಟಪಡುತ್ತೇನೆ.

ಇಲ್ಲಿ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರೀಸ್‌ಗಳಿವೆ. ಇದರಿಂದ ರಾಜ್ಯದಲ್ಲಿರುವ ಮಣ್ಣನ್ನು ತಜ್ಞರು ಪರಿಶೀಲಿಸಿ ಎಲ್ಲೆಲ್ಲಿ ಯಾವ ರೀತಿಯಾದ ಬೆಳೆಗಳನ್ನು ಉತ್ಪತ್ತಿ ಮಾಡಬಹುದು ಎಂಬುದರ ಬಗ್ಗೆ ಸೂಚನೆಗಳನ್ನು ಕೊಡುತ್ತಾರೆ. ಇಂತಹ ಸೂಚನೆಗನ್ನು ರೈತರಿಗೆ ಸಕಾಲದಲ್ಲಿ ಕೊಟ್ಟು ಉತ್ತಮವಾದ ಬೀಜಗಳನ್ನು ಹಂಚಿದರೆ ಹೆಚ್ಚಿಗೆ ರೈತರು ಇದರ ಉಪಾಯವನ್ನು ಪಡೆದು ಉತ್ಪತ್ತಿಯನ್ನು ಹೆಚ್ಚು ಮಾಡಲು ಅವಕಾಶ ಸಿಕ್ಕುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ಅಲ್ಲಲ್ಲಿ ಕಾಂಟೂರು ಬಂಡಿಂಗ್ ಕೆಲಸಗಳು ಚೆನ್ನಾಗಿ ನಡೆಯುತ್ತಿದೆ. ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಕಡೆ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಮಾಡಿರುವ

ಕೆಲಸಗಳು ಬಹಳ ಶ್ಲಾಘನೀಯವಾದವುಗಳು. ಇವೊತ್ತಿನ ದಿವಸ ಕೆಲವು ಕಡೆ ನಿಂತಿರತಕ್ಕ ಬೆಳೆಗಳು ಈ ಕಾಂಟೂರ್‌ಬಂಡಿಂಗ್ ಕೆಲಸಗಳಿಂದಾಗಿ ನಿಂತಿವೆ. ರಿಲೀಫ್ ವರ್ಕ್ಸ್‌ಗಳೆಂದು ಅಲ್ಲಲ್ಲಿ ಮಳೆಬಾರದಿದ್ದಾಗ ನಮ್ಮ ಸಂಸ್ಥಾನದವರು ಮಾಡುತ್ತಿದ್ದಾರೆ. ಇಂತಹ ಕಾಂಟೂರು ಬಂಡಿಂಗ್ ಕೆಲಸಗಳನ್ನೂ ಇನ್ನೂ ಹೆಚ್ಚು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ರೈತರ ಮಕ್ಕಳಿಗೆ ಅನುಕೂಲವಾಗುವಂತೆ ಬೇಕಾದಷ್ಟು ಮೆಡಿಕಲ್ ಕಾಲೇಜುಗಳು ಹಾಗೂ ಇಜನೀಯರಿಂಗು ಕಾಲೇಜುಗಳು ಎಂದು ತೆರೆಯುತ್ತಿದ್ದಾರೆ. ಇದರಂತೆ ರೈತರ ಮಕ್ಕಳಿಗೆ ಅನುಕೂಲವಾಗುವಂತೆ ಅಗ್ರಿಕಲ್‌ಚರಲ್ ಸ್ಕೂಲ್ಸ್ ಎಂದು ಹಿಂದೆ ಇದ್ದಂತೆ ಜಿಲ್ಲೆಗೊಂದು ತೆರೆದರೆ ರೈತರ ಮಕ್ಕಳು ವ್ಯವಸಾಯದ ಬಗ್ಗೆ ತರಬೇತಿ ಹೊಂದಿ ಹಳ್ಳಿಗಳಲ್ಲೇ ನಿಂತು ಕೆಲಸ ಮಾಡಲು ಅವಕಾಶಗಳು ಸಿಗುತ್ತವೆ ಮತ್ತು ಇದರಿಂದ ಅನೇಕ ಡಿಪ್ಲೊಮಾ ಹೋಲ್ಡರುಗಳು ಬರಲೂ ಅವಕಾಶವಾಗುತ್ತದೆ. ಆರೀತಿ ಅಗ್ರಿಕಲ್‌ಚರಲ್ ಸ್ಕೂಲುಗಳನ್ನು ಸರಕಾರ ಪ್ರತಿಯೊಂದು ಜಿಲ್ಲೆಯಲ್ಲೂ ತೆರೆಯಬೇಕೆಂದು ಸೂಚಿಸುತ್ತೇನೆ.

ಇನ್ನು ವ್ಯವಸಾಯದ ಇಲಾಖೆಯವರು ಗೊಬ್ಬರವನ್ನು ಸಹಕಾರ ಸಂಘಗಳ ಮೂಲಕ ಹಂಚುತ್ತಿದ್ದಾರೆ. ಇದರಲ್ಲಿ ಕೆಲವು ನ್ಯೂನತೆಗಳು ಇವೆ. ನಾನೂ ಕೂಡ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿರತಕ್ಕವನಾದುದರಿಂದ ಅಲ್ಲಿರುವ ಕೆಲವು ಲೋಪದೋಷಗಳನ್ನು ನೋಡಿದ್ದೇನೆ. ಸಹಕಾರಸಂಘಗಳಲ್ಲಿ ಗೊಬ್ಬರ ಕೆಲವು ವೇಳೆ ಬ್ಲಾಕ್‌ಮಾರ್ಕೆಟ್ಟಾಗಿ ಹೋಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಮಾನ್ಯ ಸದಸ್ಯರು ಇಲ್ಲಿಸಿಟ್ ಡಿಸ್ಟಿಲೇಷನ್‌ಗಾಗಿ ಇದನ್ನು ಉಪಯೋಗಿಸುತ್ತಿದ್ದಾರೆಂದೂ ಹೇಳಿದರು. ಇದನ್ನು ತಪ್ಪಿಸುವುದಕ್ಕಾಗಿ ಒಂದು ಕಾನೂನನ್ನು ಕೂಡ ಇಲ್ಲಿ ಪಾಸುಮಾಡಲಾಗಿದೆ. ಆದುದರಿಂದ ಇದರ ಬಗ್ಗೆ ಇಲ್ಲಿ ಹೆಚ್ಚು ಹೇಳುವುದಿಲ್ಲ. ಸಂಘಗಳ ಮೂಲಕ ಗೊಬ್ಬರವನ್ನು ಹಂಚುವಾಗ ಇನ್ನೂ ಬಹಳ ಎಚ್ಚರಿಕೆ ವಹಿಸಿ ಸಹಕಾರ ಬ್ಲ್ಯಾಕ್ ಮಾರ್ಕೆಟ್ ಆಗುವುದನ್ನು ತಪ್ಪಿಸಲು ತೀವ್ರವಾದ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮಿಕ್ಸೆಡ್ ಫರ್ಟಿಲೈಸರುಗಳೆಂದು ಅನೇಕ ಸಂಘ ಸಂಸ್ಥೆಗಳ ಮೂಲಕ ಕೊಡುತ್ತಿದ್ದಾರೆ. ಇದರಲ್ಲಿ ಸೂಪರ್ ಫಾಸ್‌ಫೇಟ್ ಇಲ್ಲ. ಬೇರೆ ಏನನ್ನೊ ಮಿಕ್ಸ್ ಮಾಡಿ ಹಂಚುತ್ತಿರುವುದು ಕಂಡುಬಂದಿದೆ. ಇದರಲ್ಲಿ ನೈಟ್ರೊಜನ್ ಕಂಟೆಂಟ್ಸ್ ಇಲ್ಲ, ಫಾಸ್‌ಫರಸ್ ಕಂಟೆಂಟು ಇಲ್ಲ ಎಂದು ಇನ್ನೇನನ್ನೋ ಮಿಕ್ಸ್ ಮಾಡಿ ಹಂಚುತ್ತಿದ್ದಾರೆ. ಇದರಲ್ಲಿ ಇಷ್ಟು ಪರ್ಸೆಂಟು ನೈಟ್ರೊಜನ್ ಇರಬೇಕೆಂದೂ ಹೇಳುತ್ತಾರೆ. ಆದರೆ ಇಲಾಖೆಯವರು ಸಂಬಂಧಪಟ್ಟಂಥ ತಜ್ಞರು ಸರ್ಟಿಫೈ ಮಾಡಿರುವುದನ್ನು ಸರಿಯಾಗಿ ನೋಡದೆ ಬರೀ ಮಣ್ಣಿನ ಅಥವಾ ಬೂದಿ ರೂಪದಲ್ಲಿರುವಂಥ ಪೊಟಾಷನ್ನು to make up the bulk ಎಂದು ಹೇಳುವ ಹಾಗೆ ರೈತರಿಗೆ ಕೊಟ್ಟು ಮೋಸ ಮಾಡಿರುವ ಪ್ರಸಂಗ ಬಹಳವಾಗಿದೆ. ಇನ್ನು ಮಿಕ್ಚರ್ಸ್ ವಿಷಯದಲ್ಲಿ ಸಂಬಂಧಪಟ್ಟ ಇಲಾಖೆಯವರು ತೀವ್ರವಾದ ಗಮನವನ್ನು ತೆಗೆದುಕೊಳ್ಳ ಬೇಕು. ಏಕೆಂದರೆ ರೈತರಿಗೆ ಇದು ಗೊತ್ತಿಲ್ಲ. ಬೇರೆಯೊಬ್ಬರು ಈ ಕೆಲಸವನ್ನು ಮಾಡುವುದಕ್ಕೆ ಹೋದರೆ ಬೆಳೆ ಖಂಡಿತವಾಗಿ ಹಾಳಾಗಿ ಹೋಗುತ್ತದೆ. ಅದರ ವಿಷಯದಲ್ಲಿ ಕೂಡಲೇ ಸರ್ಕಾರ ದವರು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಕ್ರಿಮಿನಾಶಕ ಔಷಧಿಗಳಿಗಾಗಿ ಶೇಕಡ 50ರಷ್ಟನ್ನು ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ. ರೈತರಿಗೆ ಈ ಬಾಬಿಗೆ ಇನ್ನೂ ಹೆಚ್ಚಿಗೆ ಹಣವನ್ನು ಕೊಡಬೇಕು. ಇತ್ತೀಚೆಗೆ ಬತ್ತದ ಬೆಳೆಗೆ ರೋಗ ಅಥವಾ ಕ್ರಿಮಿಕೀಟಾದಿಗಳು ಬಂದರೆ ಅವನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ರೈತರು ತುಂಬಾ ನಷ್ಟ ಹೊಂದಬೇಕಾಗುತ್ತದೆ. ಬೆಳೆ ವಿಪರೀತವಾಗಿ ನಷ್ಟವಾಗುತ್ತದೆ. ಈಗ ಬೆಂಗಳೂರು ಜಿಲ್ಲೆಯಲ್ಲಿ ರಾಗಿ ಮತ್ತು ಬತ್ತವನ್ನು ಸುತ್ತು ಮುತ್ತಲೂ ಹೆಚ್ಚು ಬೆಳೆಯುತ್ತಾರೆ. ಅದಕ್ಕಾಗಿ ಬೆಳೆಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಸೇಕಡ 75ರಷ್ಟು ಏರಿಯಲ್ ಸ್ಪ್ರೇಯಿಂಗ್‌ಗೆ ಸಬ್ಸಿಡಿ ಕೊಡುತ್ತಾರೆ. ಉಳಿದ ಸೇಕಡ 25ರಷ್ಟನ್ನು ಏರಿಯಲ್ ಸ್ಪ್ರೇಯಿಂಗ್‌ಗಾಗಿ ರಾಜ್ಯ ಸರ್ಕಾರದವರು ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಟ್ರಾಕ್ಟರ್ಸ್ ಮತ್ತು ಅದಕ್ಕೆ ಸಂಬಂಧಪಟ್ಟ ಸ್ಪೇರ್ ಪಾರ್ಟ್ಸ್ ವಿಷಯ. ಕೆಲವು ಕಂಪೆನಿಯವರು ಈ ಸ್ಪೇರ್ ಪಾರ್ಟ್ಸನ್ನು ಮಾರುವ ಸಂದರ್ಭದಲ್ಲಿ ಹಣವನ್ನು ದುಬಾರಿಯಾಗಿ ಚಾರ್ಜ್ ಮಾಡುತ್ತಾರೆ. ಅವುಗಳ ಸರ್ವಿಸಿಂಗ್ ಮತ್ತು ರಿಪೇರಿ ಸಂದರ್ಭದಲ್ಲಿ ಕೊಡುವ ಕಿರುಕುಳ ಬಹಳ ಜಾಸ್ತಿಯಾಗಿದೆ. ಟ್ರಾಕ್ಟರ್ಸ್ ಹೊಂದಿರತಕ್ಕವರು ಅನೇಕರು ಇದ್ದಾರೆ. ಅವರಿಗೆ ಕಂಪೆನಿ ಯವರು ಕೊಡತಕ್ಕ ಹೆಚ್ಚಿನ ಕಿರುಕುಳವೆಂದರೆ ಅವುಗಳ ಬಗ್ಗೆ ದುಬಾರಿಯಾಗಿ ಹಣ ಚಾರ್ಜು ಮಾಡು ವುದು. ಅದಕ್ಕೆ ಆಗುವ ಖರ್ಚನ್ನು ಬಡ ರೈತರ ಮೇಲೆ ಹಾಕುವುದನ್ನು ಕೂಡಲೇ ತಪ್ಪಿಸಬೇಕು.

(ಶ್ರೀ ಎನ್. ಚಿಕ್ಕೇಗೌಡ)

ಅಂತಹ ಕಂಪೆನಿಗಳವರ ಮೇಲೆ ಸರ್ಕಾರದವರು ಬಿಗಿಯಾದ ಹತೋಟಿ ಹೊಂದಿರಬೇಕೆಂದು ಹೇಳುತ್ತೇನೆ. ರೈತರಿಗೆ ಟ್ರಾಕ್ಟರ್‌ಸನ್ನು ಕೊಟ್ಟ ಮೇಲೆ ಅದಕ್ಕಾಗುವ ರಿಪೇರಿ ಚಾರ್ಜು ಜಾಸ್ತಿ ಎಂದರೆ ಹೇಗೆ ? ಸ್ಪೇರ್ ಪಾರ್ಟ್ಸ್ ಸಿಗುವುದಿಲ್ಲವೆಂದು ಹೇಳಿದ್ದಾರೆ. ಅನೇಕರು ಆ ಟ್ರಾಕ್ಟರುಗಳನ್ನು ರಿಪೇರಿ ಮಾಡಿಸುವುದಕ್ಕೆ ದುಡ್ಡು ಇಲ್ಲದೆ ಅವನ್ನು ಮಾರಿಕೊಂಡು ಮುಳುಗಿ ಹೋಗಿದ್ದಾರೆ. ಈ ವಿಷಯವನ್ನೂ ಸಹ ಅನೇಕ ಸಾರಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ರೈತರು ಸಾಮಾನ್ಯವಾಗಿ ಕಂಪೆನಿಯವರಲ್ಲಿ ಟ್ರಾಕ್ಟರ್ಸ್ ರಿಪೇರಿಗಾಗಿ ಹೋದರೆ ರೈತರಿಗೆ ಅವರು ಕೊಡುವ ಜವಾಬು ಏನೆಂದರೆ, ಈ ಟ್ರಾಕ್ಟರ್ ಏತಕ್ಕೆ, ರಿಪೇರಿ ಖರ್ಚು ಬಹಳ ಜಾಸ್ತಿಯಾಗುತ್ತದೆಂದು ವಿಪರೀತವಾಗಿ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದನ್ನು ಕೂಡಲೇ ತಪ್ಪಿಸಬೇಕೆಂದು ಹೇಳುತ್ತೇನೆ. ಪವರ್ ಟಿಲ್ಲರ್ಸ್ ಸರಬರಾಯಿ ವಿಷಯದಲ್ಲಿ ಮಧ್ಯಮ ವರ್ಗದವರಿಗೆ ಅದರಲ್ಲಿಯೂ ಬಡ ರೈತರಿಗೆ ಸುಲಭವಾಗಿ ಸಿಗಬೇಕೆಂದೂ ಅದಕ್ಕೆ ತಕ್ಕ ವ್ಯವಸ್ಥೆ ಕೂಡಲೇ ಮಾಡಬೇಕೆಂದು ಅನೇಕ ಸಾರಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳಿದ್ದೇನೆ. ಆದರೂ ಅದು ಇದುವರೆಗೂ ಫಲಕಾರಿಯಾಗಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಜಾಪನೀಸ್ ಕೊಲ್ಯಾಬೊರೇಟರ್‌ಗಳ ಜೊತೆಯಲ್ಲಿ ಅದನ್ನು ವಿಚಾರ ಮಾಡಿ ಮಾಡುತ್ತೇನೆಂದು ಹೇಳಿದರು. ಅದರ ಬಗ್ಗೆ ಸರ್ಕಾರದವರು ಅದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ಸುತ್ತಮುತ್ತಲೂ ಬೋರ್‌ವೆಲ್‌ಗಳಿವೆ. ಇನ್ನು ಕೆಲವು ಕಡೆಗಳಲ್ಲಿ ಆ ಬಾವಿಗಳನ್ನು ತೆಗೆಯುವುದಕ್ಕಾಗಿ ಈಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದ ರೈತರಿಗೆ 3 ಸಾವಿರದಿಂದ 5 ಸಾವಿರದವರೆಗೂ ಹಣವನ್ನು ಸಾಲವಾಗಿ ಕೊಡುತ್ತಾರೆ. ಎಲ್ಲಿ ಬಂಜರು ಭೂಮಿ ಎಲ್ಲಿ ನೀರು ಸಿಗುತ್ತದೆಂಬುದನ್ನು ಕಂಡು ಹಿಡಿಯಲು ಬೇಕಾದ ಸುಮಾರು 5 ಸಾವಿರ ರೂಪಾಯಿಗಳಷ್ಟು ಸಾಲವನ್ನು ಪಡೆದಿದ್ದರೂ ಕಾರಣಾಂತರಗಳಿಂದ ರೈತನಾದವನು ಆ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲ. ಎಷ್ಟೇ ಪ್ರಯತ್ನಪಟ್ಟರೂ ಕೆಲವು ಕಡೆಗಳಲ್ಲಿ ಬಾವಿಗಳಲ್ಲಿ ನೀರು ಬರುವುದಿಲ್ಲ. ಪಂಜಾಬಿನಲ್ಲಿ ಮಾತ್ರ ರೈತರು ಬೋರ್‌ವೆಲ್‌ಗಳನ್ನು ಖುಷ್ಕಿ ಜಮೀನು ವ್ಯವಸಾಯ ಮಾಡುವಾಗಲೂ ಉಪಯೋಗಿಸುತ್ತಾರೆ. ಆದರೆ ಮೈನ್ಸ್ ಮತ್ತು ಜಿಯಾಲಜಿ ಇಲಾಖೆಯಲ್ಲಿರತಕ್ಕ ಬೋರ್‌ವೆಲ್ ಸ್ಕೀಂ ಏನಿದೆ ಅದರಿಂದ ನೀರು ನಿಜವಾಗಿ ಎಲ್ಲಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಒಂದು ವಾಟರ್ ಟ್ಯಾಪ್ ಇಂಜಿನಿಯರಿಂಗ್ ಸೆಕ್ಷನ್ ಆಫ್ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್ ಎಂದಿದೆ. ಇವತ್ತಿನ ದಿವಸ ಆ ವಿಷಯವನ್ನು ಸಂಬಂಧಪಟ್ಟ ವ್ಯವಸಾಯ ಮಂತ್ರಿಗಳು ರೈತರಿಗೆ ತಿಳುವಳಿಕೆ ಹೇಳಿ ಎಲ್ಲೆಲ್ಲಿ ಭೂಮಿಯಲ್ಲಿ ನೀರು ಸಿಗುತ್ತದೆ, ಅದಕ್ಕೆ ಸರಿಯಾದ ಸ್ಟ್ರಾಟ ಎಲ್ಲೆಲ್ಲಿದೆ ಎಂಬ ಬಗ್ಗೆ ಹೆಚ್ಚಿಗೆ ಮಾಹಿತಿಗಳನ್ನು ಒದಗಿಸಿಕೊಟ್ಟು ಬೋರ್‌ವೆಲ್ಸ್ ಮೂಲಕ ರೈತರಿಗೆ ವ್ಯವಸಾಯಕ್ಕೆ ಅನುಕೂಲವಾಗುಂತೆ ಯಥೇಚ್ಛವಾಗಿ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

ಇನ್ನು ಬೆಂಗಳೂರು ಸುತ್ತಮುತ್ತಲೂ ಹಣ್ಣು ಮತ್ತು ತರಕಾರಿಗಳನ್ನು ಅನೇಕರು ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಹೊಸಕೋಟೆ, ದೇವನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳ ಅನೇಕ ಗ್ರಾಮಗಳಲ್ಲಿ ಅವನ್ನು ಬೆಳೆಯುತ್ತಿದ್ದಾರೆ ಹಾಗೂ ಅಲ್ಲದೇ ಅವನ್ನು ಮಾರಾಟ ಮಾಡುತ್ತಿದ್ದಾರೆ. ಆದರೆ ಈಗ ಡಿಸ್ಟ್ರಿಕ್ಟ್‌ವೈಜ್ ಅವನ್ನು ಬೆಳೆದು ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಆದರೆ ಅವನ್ನು ಬೆಳೆದಂಥ ರೈತರಿಗೆ ಒಳ್ಳೆಯ ಬೆಲೆ ಸಿಗುವುದಿಲ್ಲ. ಪೀಕ್ ಸೀಸನ್ನಿನಲ್ಲಿ ಹೆಚ್ಚು ಅವನ್ನು ಬೆಳೆಯುತ್ತಾರೆ. ಫ್ರೂಟ್ ಕ್ಯಾನಿಂಗ್ ಮತ್ತು ಅವರ ಪ್ರೋಸೆಸಿಂಗಿಗೆ ಬೇಕಾದ ಸೌಲಭ್ಯಗಳನ್ನು ಪರಸ್ಪರ ಸಹಕಾರ ಸಂಘಗಳ ಮೂಲಕ ಒದಗಿಸಿ ಕೊಡಬೇಕು. ಮಾರ್ಕೆಟ್ಟಿನಲ್ಲಿ ಅವನ್ನು ಮಾರಾಟ ಮಾಡಲು ಬರತಕ್ಕ ರೈತರಿಗೆ ಸರಿಯಾಗಿ ಬೆಲೆ ಸಿಗದೆ ಬಹಳ ಅನ್ಯಾಯವಾಗಿದೆ. ಸಾಗಾಣಿಕೆ ವ್ಯವಸ್ಥೆಯೂ ಸರಿಯಾಗಿಲ್ಲ. ರೈತರು ಅವನ್ನು ಮಾರುವುದರಿಂದ ಅಷ್ಟಾಗಿ ಅನುಕೂಲ ಪಡೆಯುವ ರೀತಿಯಲ್ಲಿಲ್ಲ. ಆದ್ದರಿಂದ ರೈತರು ಬೆಳೆದಂಥ ಹಣ್ಣು ಮತ್ತು ತರಕಾರಿಗಳಿಗೆ ಮಾರ್ಕೆಟ್ಟಿನಲ್ಲಿ ಸರಿಯಾದ ಬೆಲೆ ಸಿಗುವವರೆಗೆ ಕೋಲ್ಡ್ ಸ್ಟೋರೇಜ್ ಪ್ಲಾಂಟ್, ಫ್ರೂಟ್ ಕ್ಯಾನಿಂಗ್, ವಗೈರೆ ವ್ಯವಸ್ಥೆಗಳನ್ನು ಸಹಕಾರ ಸಂಘಗಳ ಮುಖಾಂತರ ಕೂಡಲೇ ಮಾಡಿಸಿಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಕೈಗಾರಿಕೆಗಳನ್ನು ಬೆಂಗಳೂರು ಸುತ್ತಮುತ್ತಲೂ ವಿಕೇಂದ್ರೀಕರಣ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಒಪ್ಪಿಕೊಂಡಿದ್ದಾರೆ. ಇದರಿಂದ ಮೈಸೂರಿನ ಜನತೆಗೆ ಬಹಳ ಅನ್ಯಾಯವಾಗುತ್ತಿರುವುದು ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರೂ ಬರೆದಿದ್ದಾರೆ. ಆದರೆ ನಮ್ಮ ಸರ್ಕಾರದವರು

ಒಂದು ಸರ್ಕ್ಯುಲೇಷನ್ ಬೇರೆ ಆ ವಿಚಾರದಲ್ಲಿ ಕೊಟ್ಟಿದ್ದಾರೆ. ಅದರೂ ಎಚ್.ಎಂ.ಟಿ. ಎಚ್.ಎ.ಎಲ್. ಮತ್ತು ಬಿ.ಇ.ಎಲ್.ಗಳಲ್ಲಿ ಏನೋ ಒಂದು ರೀತಿಯಲ್ಲಿ ಕಾನ್‌ಸ್ಪಿರೆಸಿ ನಡೆದು ಅಲ್ಲಿ ವಿಶೇಷವಾಗಿ ಕೇರಳದವರೇ ಸೇರಿಕೊಂಡು ಕೆಲಸ ಮಾಡುತ್ತಿದ್ದಾರೆ. ನಮ್ಮನೆ ಎಂಪ್ಲಾಯ್‌ಮೆಂಟ್ ಎಕ್ಸ್ಚೇಂಜ್ ತೋರಿಸಿ ಅದರ ಮೂಲಕ ಉದ್ಯೋಗಗಳನ್ನು ಕಲ್ಪಿಸುತ್ತಿದ್ದೇವೆಂದು ಹೇಳುತ್ತಾರೆ. ಅಲ್ಲಿ ಮೈಸೂರು ರೆಪ್ರಸೆಂಟೇಷನ್ ನಿಲ್ ಎಂದೇ ಹೇಳಬಹುದು. ಮೈಸೂರಿನವರು ಕೇವಲ ಸೇಕಡ 8ರಷ್ಟು ಸಹ ಆ ಕಾರ್ಖಾನೆಗಳಲ್ಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ಮಾತ್ರ ಇಷ್ಟೊಂದು ಅನುಕೂಲ ಗಳನ್ನು ಕೊಟ್ಟು ನಮ್ಮ ರೈತರಿಗೆ ಕೊಡತಕ್ಕ ಭೂಮಿಯನ್ನೂ ಅವರಿಗೂ ಕೊಡುವುದಲ್ಲದೆ ಅವರ ಮಕ್ಕಳಿಗೂ ಕೊಡುತ್ತಿದ್ದಾರೆ. ಮೈಸೂರಿನವರೆಗೂ ಅಲ್ಲಿ ಕೆಲಸಗಳನ್ನು ಕೊಡುತ್ತಿದ್ದೇವೆ ಎನ್ನು ವುದು ಬರೀ ಪುಸ್ತಕದಲ್ಲದೆಯೇ ವಿನಹ ಅದಕ್ಕೆ ಸಂಬಂಧಪಟ್ಟ ಹಾಗೆ ಮಾಡಿರತಕ್ಕ ಕಾನೂನು ಇದು ವರೆಗೂ ಕಾರ್ಯಗತವಾಗಿಲ್ಲ. ಆದ್ದರಿಂದ ಆ ಕಾರ್ಖಾನೆಗಳಲ್ಲಿ ಮೈಸೂರಿನವರಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳ ಮೇಲೆ ನಾನು ಮಾತನಾಡುವಾಗ ಕೆಲವು ವಿಷಯ ಗಳನ್ನು ತಮ್ಮ ಮೂಲಕ ಸರ್ಕಾರದವರ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಕಳೆದ ಸಾಲಿನಲ್ಲಿ ಉಂಟಾದ ಅನಾವೃಷ್ಟಿಯ ದೆಸೆಯಿಂದ ದೇಶದಲ್ಲಿ ಜನ ಆಹಾರ ಆಹಾರವೆಂದು ಕಂಗೆಟ್ಟಿದ್ದಾಗ ತೋಟಗಾರಿಕೆ ಇಲಾಖೆಯವರು ದೇಶದ ನಾನಾ ಭಾಗಗಳಿಂದ ಬೇಕಾದಷ್ಟು ತರಕಾರಿ ಬೀಜಗಳನ್ನು ತರಿಸಿ ನನ್ನ ಕ್ಷೇತ್ರದ ರೈತರೆಲ್ಲರಿಗೂ ಹಂಚಿದ್ದಾರೆ. ಹಾಗೆಯೇ ಬೆಂಗಳೂರು ಪಟ್ಟಣದಲ್ಲಿ ಎಲ್ಲೆಲ್ಲಿ ಹೂಗಳನ್ನು ಬೆಳೆಯುತ್ತಿದ್ದರೋ ಅಲ್ಲೆಲ್ಲಾ ತರಕಾರಿ ಬೆಳೆದು ಅವು ಜನರಿಗೆ ಸುಲಭವಾಗಿ ಸಿಗು ವಂತೆ ಮಾಡಿದ್ದಾರೆ. ಆದ್ದರಿಂದ ತೋಟಗಾರಿಕೆ ಇಲಾಖೆಗೂ ಹಾಗೂ ಸರ್ಕಾರಕ್ಕೂ ನಾನು ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಈ ದಿವಸ ರೈತನ ಆರ್ಥಿಕಸ್ಥಿತಿ ಉತ್ತಮ ವಾಗಬೇಕು ಮತ್ತು ಹೆಚ್ಚಿಗೆ ಆಹಾರ ಬೆಳೆಯಬೇಕು ಎನ್ನುವ ದೃಷ್ಟಿ ಯಾರಿಗೆ ಇದೆಯೆಂದರೆ ತೋಟ ಗಾರಿಕೆ ಇಲಾಖೆಗೆ ಮಾತ್ರ. ಆದರೆ ಈ ಇಲಾಖೆಗೆ ಸರ್ಕಾರದಿಂದ ಹಾಗೂ ಇತರ ಸಂಬಂಧಪಟ್ಟ ಇಲಾಖೆಗಳಿಂದ ಪೂರ್ಣ ಸಹಕಾರ ದೊರೆಯಲಿಲ್ಲವೆಂದು ನನ್ನ ಒಂದು ಅನುಭವವನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಅರಣ್ಯದಲ್ಲಿ ನೀರಿನ ವಸತಿ ಇದ್ದು ಪಾಳು ಬಿದ್ದಿರುವ ಪ್ರದೇಶಗಳಲ್ಲಿಯೂ ತೋಟಗಾರಿಕೆ ಇಲಾಖೆಯವರು ಹಣವನ್ನು ಖರ್ಚುಮಾಡಿ ಗಿಡ ಗಳನ್ನು ಬೆಳೆಯುತ್ತೇವೆಂದು ಹೇಳಿದರೂ ಅರಣ್ಯ ಇಲಾಖೆಯವರು ತಿರಸ್ಕಾರ ಮಾಡಿದ್ದಾರೆ. ಉದಾ ಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ದೇವಸಿ-ಬೈಲು ಎಂಬ ಬೇಚರಾಕ್ ಪ್ರದೇಶವಿದೆ. ಅಲ್ಲಿ ತೋಟಗಾರಿಕೆ ಇಲಾಖೆಯವರು ಕೋಕೊ ಪ್ಲಾಂಟೇಷ ನ್ನನ್ನು ಮಾಡುವವರಿದ್ದಾರೆ. ಅಲ್ಲಿನ ಸದರಿ ಇಲಾಖೆಯವರಿಗೆ ಅರಣ್ಯ ಇಲಾಖೆಯವರು ಸಾಕಷ್ಟು ಜಮೀನುಗಳನ್ನು ಸಹ ಕೊಟ್ಟಿಲ್ಲ. ಸೆಂಟ್ ಬೆಳೆಯುತ್ತೇವೆ ಎನ್ನುವವರಿಗೆ ಬೇಕಾದಷ್ಟು ದರಖಾಸ್ತು ಮೂಲಕ ಜಮೀನು ಕೊಡುತ್ತಾರೆಯೇ ವಿನಹ ಅನ್ನ ಬೆಳೆಯುತ್ತೇವೆ ಎನ್ನುವವರಿಗೆ ಜಮೀನು ಕೊಡದೆ ವ್ಯವಸಾಯ ಇಲಾಖೆ ಕಡೆಗಾಣಿಸುತ್ತಿದೆ. ಇದು ಖಂಡಿತ ಸರಿಯಲ್ಲ.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಈ ಇಲಾಖೆ ಯಾವ ರೀತಿ ಇದೆಯೆಂದರೆ ಮಾರ್ವಾಡಿ ಇದ್ದಹಾಗೆ ಇದೆ. ನಮ್ಮಲ್ಲಿ ಸ್ಕೀಂ ಇದೆ, ಹಣವಿದೆ, ರೈತನಾದವನು ಬಂದು ಏನು ಬೇಕಾದರೂ ಪಡೆದು ಆಹಾರ ಬೆಳೆಯಬಹುದು ಎಂದು ಸುಮ್ಮನೆ ಬಾಯಲ್ಲಿ ಹೇಳತಕ್ಕ ಮನೋಭಾವ ಖಂಡಿತ ಸರಿಯಾದುದಲ್ಲ. ನಾನಾದರೂ ಹೇಳುತ್ತೇನೆ, ಕೆಲವು ಅಧಿಕಾರಿಗಳು ತಾಲ್ಲೂಕುಗಳಿಗೆ ಬರುತ್ತಾರೆ. ಟಿ.ಬಿ.ಯಲ್ಲಿ ಕೂತು ಏನೋ ಕೆಲವು ಅಂಕಿ ಅಂಶಗಳನ್ನು ಸಂಗ್ರಹಿಸಿಕೊಳ್ಳುತ್ತಾ ರೆಯೇ ವಿನಹ ಇನ್ನೇನೂ ಇಲ್ಲ. ರೈತರಿಗೆ ಉತ್ತಮವಾದಂಥ ಬೀಜಗಳನ್ನು ಕೊಡದೆ, ಕ್ರಿಮಿನಾಶಕ ವಸ್ತುಗಳನ್ನು ಕೊಡದೆ, ಗೊಬ್ಬರವನ್ನೂ ಸಾಕಷ್ಟು ಕೊಡದೆ, ಅವರಿಗೆ ಅನುಕೂಲವಾಗಿದೆಯೇ ಅಥವಾ ಅನಾನುಕೂಲವಾಗಿದೆಯೇ ಎಂಬುದನ್ನು ಯಾವುದನ್ನೂ ಅವರು ವಿಮರ್ಶೆಮಾಡುತ್ತಿಲ್ಲ. ಕಳೆದಸಾರಿ ರಾಮನಗರ ತಾಲ್ಲೂಕಿನಲ್ಲಿ ಬಿತ್ತನೆ ಬೀಜ ಕೊಡಬೇಕೆಂದು ರೈತರು ಕೇಳಿದಾಗ ಕೊಡಲೇ ಇಲ್ಲ. ರೈತನಿಗೆ ಕಷ್ಟವಾದಾಗ ಅವನನ್ನು ವಿಚಾರಮಾಡುವುದೇ ಇಲ್ಲ. ಕೆಲವು ಅಧಿಕಾರಿ ಗಳು ರೈತರಿಗೆ ಇಷ್ಟಿಷ್ಟು ಕೊಟ್ಟಿದ್ದೇವೆಂದು ಕೇವಲ ಅಂಕಿಅಂಶಗಳನ್ನು ತಂದು ಸರ್ಕಾರಕ್ಕೆ ಕೊಡುತ್ತಾರೆಯೇ ವಿನಹ ಮತ್ತೇನೂ ಇಲ್ಲ. ಆದರೆ ಈ ದಿವಸ ಹೆಚ್ಚು ಆಹಾರ ಬೆಳೆಯಬೇಕೆಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಆದರೆ ರೈತರ ಜಮೀನಿನ ಹತ್ತಿರ ಹೋಗಿ ಅವರಿಗೆ ಏನೇನು ಕಷ್ಟಗಳಿವೆ, ಯಾವರೀತಿಯಲ್ಲಿ ಸಹಾಯಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಬಗ್ಗೆ ತೀವ್ರವಾಗಿ ಸರ್ಕಾರದವರು ಗಮನ ಕೊಡುತ್ತಾ ಇಲ್ಲ.

(ಶ್ರೀ ಸಿ. ಆರ್. ರಂಗೇಗೌಡ)

ಇನ್ನು ಬೆಂಗಳೂರು ಪಟ್ಟಣದಲ್ಲಿ ಕೈಗಾರಿಕೆಗಳನ್ನು ನಡೆಸಬೇಕಾದರೆ ಹೊರಗಡೆಯಿಂದ ಬಂದಂಥ ಕೈಗಾರಿಕೋದ್ಯಮಿಗಳಿಗೆ ವಸತಿ, ನೀರು, ಕಟ್ಟಡ—ಹೀಗೆ ಪ್ರತಿಯೊಂದು ಸೌಲಭ್ಯವನ್ನೂ ಕೊಡುತ್ತಾರೆ. ಆದರೆ ಅನ್ನ ಬೆಳೆಯುವ ರೈತರಿಗೆ ಇವರು ಕೊಡುವ ಸೌಲಭ್ಯ ಹೇಗಿದೆಯೆಂದರೆ, ಭೂಮಿ ಬೇಕಾದರೆ ಒಂದು ಇಲಾಖೆಗೆ ಹೋಗಬೇಕು, ನೀರಾವರಿ ಸೌಲಭ್ಯ ಬೇಕೆಂದರೆ, ಇನ್ನೊಂದು ಇಲಾಖೆಗೆ ಹೋಗಬೇಕು, ಗೊಬ್ಬರ ಬೇಕು ಅಂದರೆ ಮತ್ತೊಂದು ಇಲಾಖೆಗೆ ಹೋಗಬೇಕು ಎಂಬುದಾಗಿ ಅವರನ್ನು ನಾನಾ ಇಲಾಖೆಗಳಿಗೆ ಕಳುಹಿಸುತ್ತಾರೆ. ಇದು ಅವರ ಗತಿಯಾಗಿದೆ! ಅಷ್ಟು ಅಲೆದರೇನಾದರೂ ಅವು ಸಿಕ್ಕುತ್ತವೆಯೇ ಎಂದರೆ ಅದೂ ಇಲ್ಲ, ಸಿಕ್ಕಿದರೆ ಸಿಕ್ಕಿದವು, ಇಲ್ಲದಿದ್ದರಿಲ್ಲ. ಹೀಗಾಗಿ ಈ ದಿವಸ ರೈತರ ಕಣ್ಣಲ್ಲಿ ರಕ್ತಬೀಳುತ್ತಿದೆ. ಆಕಾಶ ಮಳೆಯನ್ನು ಸುರಿಸಬೇಕು, ಭೂಮಿ ಬೆಳೆಯನ್ನು ಬೆಳೆಯಬೇಕು ಇಷ್ಟರವಿನಾ ರೈತರಿಗೆ ಬೇರೆಯಾರೂ ರಕ್ಷಕರೇ ಇಲ್ಲ ಎನ್ನುವಂಥ ಪರಿಸ್ಥಿತಿಯುಂಟಾಗಿದೆ. ಇಲ್ಲಿರತಕ್ಕ ಕೆಲವರಿಗೆ ಆ ರೈತನ ಪೂರ್ಣ ಚಿತ್ರ ಗೊತ್ತಿಲ್ಲವೆಂದು ಕಾಣುತ್ತಿದೆ. ಆ ರೈತ ಬೆಳೆಯತಕ್ಕ ಧಾನ್ಯಗಳಿಗೆ ಇಲ್ಲಿ ಸರ್ಕಾರದವರು ಯಾವ ನೀತಿಯ ಮೇಲೆ, ಇಲ್ಲ ಶುಳಿಕ್ಕು ಬೆಲೆಯನ್ನು ನಿಗದಿ ಮಾಡುತ್ತಿದ್ದಾರೋ ಅದು ನನಗೆ ಅರ್ಥವಾಗುತ್ತಿಲ್ಲ. ಯಾವುದಾದರೊಂದು ಕಾರ್ಖಾನೆಯಲ್ಲಿ ಉತ್ಪತ್ತಿಯಾಗತಕ್ಕ ವಸ್ತುಗಳ ಬೆಲೆಯನ್ನು ನಿಗದಿಮಾಡತಕ್ಕ ಕಾಲದಲ್ಲಿ ಅಲ್ಲಿ 24 ಗಂಟೆಗಳಕಾಲ ಆ ಕಾರ್ಖಾನೆಯಲ್ಲಿ ಕೆಲಸ ನಡೆಯುತ್ತಿರುವುದು. ಅಲ್ಲಿ ಎಷ್ಟು ಜನರು ಕೂಲಿ ಮಾಡುತ್ತಿದ್ದಾರೆ, ಅವರ ಕೂಲಿ ಹಾಗೂ ಆ ಮಾಲೀಕನ ಸಂಬಳ ಮತ್ತು ಅಲ್ಲಿ ಉಪಯೋಗಿಸತಕ್ಕ ಕಚ್ಚಾಮಾಲಿನ ಬೆಲೆ ಹಾಗೂ ಇನ್ನುಳಿದ ವಿಶಿಷ್ಟ ವೆಚ್ಚಗಳನ್ನೂ ಲೆಕ್ಕಮಾಡಿ ಅಲ್ಲಿ ಉತ್ಪತ್ತಿಯಾಗತಕ್ಕ ವಸ್ತುಗಳ ಬೆಲೆಯನ್ನು ನಿಗದಿಮಾಡಲಾಗುತ್ತಿದೆ. ಆದರೆ ರೈತನು ಬೆಳೆಯತಕ್ಕ ಧಾನ್ಯಗಳ ಬೆಲೆಯನ್ನು ಹಾಗೇ ನಿರ್ಧರಮಾಡುತ್ತಿದ್ದಾರೆಯೇ ಎಂದರೆ ಅಲ್ಲಿ ಹಾಗೆ ಮಾಡುವುದಿಲ್ಲ. ರೈತನ ಕಸುಬಿನಲ್ಲಿ ಮಳೆ ಬರಬೇಕು, ಅಲ್ಲಿ ಬೆಳೆಯಾಗಬೇಕು. ಹಾಗೆ ಬರತಕ್ಕ ಉತ್ಪನ್ನದ ಬೆಲೆಯನ್ನು ಸರ್ಕಾರದವರು ಹೇಗೆ ನಿರ್ಧರಮಾಡುತ್ತಾರೆ? ಆ ರೈತನಿಗೆ ಅಷ್ಟು ದವಸವನ್ನು ಉತ್ಪನ್ನ ಮಾಡುವುದಕ್ಕೆ ಅತನಿಗೇನು ಖರ್ಚಾಗಿದೆ ಎಂಬುದನ್ನು ಸರ್ಕಾರದವರು ಲೆಕ್ಕಕ್ಕೇ ಹಿಡಿಯುವುದಿಲ್ಲ. ಆದರೆ ನಾನು ಒಂದು ಸಂದರ್ಭದಲ್ಲಿ ಆ ರಿವಿಜನ್ ಆಫ್ ಸೆಟಲ್‌ಮೆಂಟ್ ಲೆಕ್ಕಗಳಲ್ಲಿ ಸರ್ಕಾರದವರು ಏನು ಲೆಕ್ಕ ಮಾಡಿದ್ದಾರೆಂಬುದನ್ನು ನೋಡಿದ್ದೆನು. ಅದರಲ್ಲಿ ಇವರಿಗೆ ಆ ರೈತನ ಪೂರ್ಣ ಚಿತ್ರ ಸಿಕ್ಕಿಲ್ಲ. ಒಂದು ಕುಟುಂಬದಲ್ಲಿ 5 ಜನರಿದ್ದರೆ ಅಂಥಾ ಕುಟುಂಬಕ್ಕೆ 5 ಎಕರೆ ಜಮೀನಾದರೆ ಸಾಕೆಂದು ಅಲ್ಲಿ ತಿಳಿಸಲಾಗಿದೆ. ಇನ್ನು ವ್ಯವಸಾಯದ ಬಾಬಿನಲ್ಲಿ ಕೂಲಿಮಾಡತಕ್ಕ ಆಳಿಗೆ ದಿನಕ್ಕೆ ಒಂದು ರೂಪಾಯಿ ನಂತೆ ಕೂಲಿಯನ್ನು ನಿಗದಿ ಮಾಡಿದ್ದಾರೆ. ಆ ಕೂಲಿಯ ಲೆಕ್ಕವನ್ನು ಹಿಡಿದು ನೋಡಿದರೆ ಒಂದು ವರ್ಷಕ್ಕೆ ಐದು ಜನರಿರುವ ಒಂದು ಕುಟುಂಬಕ್ಕೆ ಅದು 1,800 ರೂಪಾಯಿ ಕೂಲಿ ಕೊಡಬೇಕಾಗುತ್ತೆ. ಒಂದು ವರ್ಷದಲ್ಲಿ ರೈತ ವ್ಯವಸಾಯ ಮಾಡಬೇಕಾದರೆ ಅವನಲ್ಲಿ ಒಂದು ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ಒಂದು ಜೊತೆ ಎತ್ತಿರಬೇಕು, 500 ರೂಪಾಯಿಗಳ ಬೆಲೆಬಾಳತಕ್ಕ ಒಂದು ಗಾಡಿ ಇರಬೇಕು. ಗೊಬ್ಬರಕ್ಕೆ ಅವನು 250 ರೂಪಾಯಿಗಳನ್ನು ಕೊಡಬೇಕು. ಇತರೇ ಚಿಲ್ಲರೆಖರ್ಚುಗಳಿಗೆಲ್ಲಾ 220 ರೂಪಾಯಿಗಳು ಬೇಕು. ಅತನ ಮಕ್ಕಳ ವಿದ್ಯಾಭ್ಯಾಸಕ್ಕೆ 200 ರೂಪಾಯಿಗಳು ಬೇಕು. ಹೀಗೆ ಅವನ ಸಾಲಿಯಾನ ಖರ್ಚು 4,000 ರೂಪಾಯಿ. ಅಷ್ಟೇ ಅಲ್ಲದೇ ಅವನಿಗೆ ಕೊಡತಕ್ಕ 5 ಎಕ್ರೆ ಭೂಮಿಯಲ್ಲಿ ಒಂದು ಎಕರೆಯನ್ನು ದನಗಳ ಮೇವಿಗಾಗಿ ಇಟ್ಟುಕೊಳ್ಳಬೇಕು. ಇನ್ನು ಉಳಿಯತಕ್ಕ 4 ಎಕ್ರೆಗಳಲ್ಲಿ ಅವನು ರಾಗಿಯನ್ನು ಬೆಳೆದಗೆ ಎಕರೆಗೆ 10 ಪಲ್ಲದಂತೆ 4 ಎಕರೆಗಳಿಗೆ 40 ಪಲ್ಲ ರಾಗಿಯನ್ನು ಇಲ್ಲವೇ ಬತ್ತವನ್ನು ಬೆಳೆದರೆ—ಒಂದು ಪಲ್ಲ ರಾಗಿಗೆ ಇರತಕ್ಕ ಬೆಲೆ ಸರ್ಕಾರದ ರೇಟ್ 40 ರೂಪಾಯಿ. ಅವನು ಬೇರೆ ಮಾರಾಟ ಮಾಡಿಕೊಂಡರೆ ಅತನಿಗೆ ಪಲ್ಲಕ್ಕೆ 100 ರೂಪಾಯಿ ಬಂದರೆ 40 ಪಲ್ಲಕ್ಕೆ 4,000 ರೂಪಾಯಿಗಳು ಅತನ ಒಂದು ವರ್ಷದ ಉತ್ಪತ್ತಿಯಾಯಿತು. ನಾಲ್ಕು ಸಾವಿರ ಉತ್ಪತ್ತಿಯಾದರೆ ಅತನ ಒಂದು ವರ್ಷದ ಖರ್ಚು ಅಂದರೆ ಜೀವನಕ್ಕೆ 2,000 ರೂ.ಗಳು ಹೋದರೆ ಇನ್ನು ಅತನ ಇತರೇ ಖರ್ಚುಗೂ 4,000 ರೂಪಾಯಿಗಳಿಗೂ ಮೇಲಾಗುತ್ತದೆ. ಅಂದರೆ ಅತನಿಗೆ ವರ್ಷಕ್ಕೆ 2,000 ರೂಪಾಯಿಗಳ ನಷ್ಟವಾಗುತ್ತದೆ. ಹೀಗಾದರೆ ಆ ರೈತನು ಇನ್ನೆಲ್ಲಿ ಉದ್ಧಾರವಾಗುತ್ತಾನೆ? ಹೀಗೆ ಆ ಬಡ ರೈತನ ಚಿತ್ರವಿದೆ. ಇದು ಅನೇಕರಿಗೆ ಗೊತ್ತಿಲ್ಲ. ಹೀಗಾಗಿ ಅವನು ಈ ದಿವಸ ಪಡಬಾರದ ಕಷ್ಟವನ್ನು ಪಡುತ್ತಿದ್ದಾನೆ. ಈ ದಿವಸ ಆ ರೈತನಿಗೆ ಈ ಸರ್ಕಾರದವರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಆದುದರಿಂದ ರೈತನು ಬೆಳೆಯತಕ್ಕ ದವಸದ ಬೆಲೆಯನ್ನು ಇನ್ನು ಮೇಲೆ ರೈತನೇ ನಿಗದಿಮಾಡಬೇಕು. ಆ ಧಾರಣೆ ಕೊಳ್ಳತಕ್ಕವರಿಗೆ ಜಾಸ್ತಿಯಾಯಿತು ಎನ್ನುವುದಾದರೆ ಸರ್ಕಾರದವರು ಆ ರೇಟಿನಲ್ಲಿ ಅದನ್ನು ಕೊಂಡು ತಾವು ಅದನ್ನು ಸಬ್ಸಿಡೈಜ್ ಮಾಡಿ ಕಡಮೆ ದರದಲ್ಲಿ ಕೊಳ್ಳತಕ್ಕವರಿಗೆ ಮಾರಾಟ

ಮಾಡಬೇಕೆಂದು ನಾನು ಹೇಳುತ್ತೇನೆ. ಒಂದು ಸಂಸಾರದಲ್ಲಿರತಕ್ಕ ರೈತನ ಮನೆಮಕ್ಕಳೆಲ್ಲಾ ವರ್ಷ ದುಡಿದರೂ ಅವರಿಗೆ ಜೀವನಕ್ಕೆ ಸಾಲುವುದಿಲ್ಲ. ನೌಕರಿಗಳಲ್ಲಿ ಇರತಕ್ಕ ಒಬ್ಬ ವ್ಯಕ್ತಿಯನ್ನು ತೆಗೆದುಕೊಂಡರೆ ಒಬ್ಬ ದುಡಿದು ಮನೆಮಂದಿಯೆಲ್ಲಾ ಜೀವನ ಮಾಡುತ್ತಾರೆ. ರೈತನ ವಿಷಯದಲ್ಲಿ ಹೀಗಾಗುವುದಿಲ್ಲ. ರೈತನು ಈ ದಿವಸ ಬೇಸತ್ತು ಹೋಗಿದ್ದಾನೆ. ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಅವನಲ್ಲಿ ಇಷ್ಟು ಉತ್ಸಾಹವಿಲ್ಲ. ಆದುದರಿಂದಲೇ ನಾವೀದಿವಸ ಭಿಕ್ಷಾ ಪಾತ್ರೆಯನ್ನು ಹಿಡಿದು ದೇಶ ದೇಶಗಳನ್ನು ಅಲೆಯತಕ್ಕ ಸ್ಥಿತಿಯುಂಟಾಗಿದೆ. ಇದನ್ನು ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಿದರೆ ರೈತನ ನಿಜ ಚಿತ್ರವನ್ನು ತಿಳಿದುಕೊಂಡರೆ ತಾವು ಮಾಡತಕ್ಕ ಭಿಕ್ಷಾಟನೆಯನ್ನು ತಪ್ಪಿಸುವುದಕ್ಕೆ ಅವಕಾಶವಿದೆ. ಸರ್ಕಾರದವರು ಹಾಗೆ ಮಾಡದೆ ಇರುವುದರಿಂದ ರೈತನು ಈ ದಿವಸ ಬರಿ ಕಮರ್ಷಿಯಲ್ ಕ್ರಾಪುಗಳನ್ನು ಬೆಳೆಯುತ್ತಿದ್ದಾರೆ. ರಾಗಿ ಬೆಳೆಯನ್ನು ಬೆಳೆಯುವುದಕ್ಕೆ ಭೂಮಿ ಬಹಳ ಉತ್ಕೃಷ್ಟವಾಗಿದ್ದರೂ ಜನರು ಅಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿಲ್ಲ. ಏಕೆಂದರೆ ಬತ್ತ ರಾಗಿ ಬೆಳೆಯುವುದರಲ್ಲಿ ಈ ದಿವಸ ಏನೇನೂ ಸುಖವಿಲ್ಲ. ನಾವು ಈ ದಿವಸ ಬಟಾಣಿಯನ್ನು ಬೆಳೆದರೆ ಬರತಕ್ಕ ಆದಾಯ ರಾಗಿ ಬತ್ತವನ್ನು ಬೆಳೆದರೆ ಬರುವುದಿಲ್ಲ; ಆದಕಾರಣ ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಏನೇನು ಸಹಾಯ ಸಹಕಾರಗಳನ್ನು ನೀಡಬೇಕೋ ಅವುಗಳನ್ನೆಲ್ಲಾ ನೀಡಬೇಕೆಂದು ಹೇಳುತ್ತೇನೆ.

ಇನ್ನು ದೇಶದಲ್ಲಿ ಒಂದು ಕಡೆ ಜನ ಸಂಖ್ಯೆ ಹೆಚ್ಚುತ್ತಿರುವುದರಿಂದ ಅದನ್ನು ತಡಗಟ್ಟಬೇಕೆಂದು ಹೇಳುತ್ತಿದ್ದಾರೆ. ಸಾಲದಕ್ಕೆ ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಬೇರೆ ದಿನ ದಿನಕ್ಕೂ ಏರುತ್ತಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಒಂದು ದೈವದತ್ತವಾದ ಅನುಕೂಲವನ್ನು ದೇವರು ಒದಗಿಸಿದ್ದಾನೆ. ಅದು ಯಾವುದೆಂದರೆ ರೇಷ್ಮೆ ಬೆಳೆ, ಹಾಗೂ ರೇಷ್ಮೆ ವ್ಯವಸಾಯ. ಈ ದಿವಸ ಈ ಕಸುಬನ್ನು ಅವಲಂಬಿಸಿರತಕ್ಕ ಜನರ ಸಂಖ್ಯೆ 16—17 ಲಕ್ಷಕ್ಕೂ ಜಾಸ್ತಿ ಇದೆ. ಚಿನ್ನದ ಗಣಿಯಲ್ಲಾದರೋ ದಿನ ದಿನಕ್ಕೂ ದೊರೆಯತಕ್ಕ ಚಿನ್ನದ ಪ್ರಮಾಣ ಕಡಿಮೆಯಾಗಬಹುದು. ಆದರೆ ಇದರಲ್ಲಿ ಅಂಥಾ ಅನಾನುಕೂಲಗಳಿಲ್ಲ. ದೇಶದಲ್ಲಿ ಎಲ್ಲಿಯವರೆಗೂ ರೇಷ್ಮೆ ಬಟ್ಟೆಗಳನ್ನು ಉಡತಕ್ಕ ಜನರು ಇರುತ್ತಾರೋ ಅಷ್ಟು ದಿನಗಳವರೆಗೂ ಇದನ್ನು ಮುಂದುವರಿಸುವುದಕ್ಕೆ ಅವಕಾಶವಿದೆ. ಇದಕ್ಕೆ ಕೇಂದ್ರ ಸರ್ಕಾರದವರು ಸಾಕಷ್ಟು ಉತ್ತೇಜನ ಕೊಡುತ್ತೇವೆಂದು ಹೇಳುತ್ತಿದ್ದರು. ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಈಗಲಾದರೂ ಸರ್ಕಾರದವರು ಕಣ್ಣು ತೆರೆದು ಅವರು ಕೊಡತಕ್ಕ ಶೇ. 75 ರಷ್ಟು ಹಣದ ಜೊತೆಗೆ ತಾವು ಹಾಕಬೇಕಾದ ಶೇ. 25 ರಷ್ಟನ್ನು ಹಾಕಿ ಈ ರೇಷ್ಮೆ ವ್ಯವಸಾಯವನ್ನು ಮುಂದಕ್ಕೆ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಒಳ್ಳೆಯ ರೇಷ್ಮೆ ಸೀಡ್ ಫಾರಂಗಳಿಲ್ಲ. ಸರಿಯಾದ ರೇಷ್ಮೆ ಹುಳುಗಳು ನಮ್ಮಲ್ಲಿ ಸಿಗುತ್ತಿಲ್ಲ. ಆದುದರಿಂದ ಸರ್ಕಾರದವರು ಒಳ್ಳೆಯ ತಳಿ ರೇಷ್ಮೆ ಗೂಡುಗಳನ್ನು ಒದಗಿಸಬೇಕು. ಇದರಿಂದ ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸಲು ಬಹಳ ಸಹಾಯ ಮಾಡಿದಂತಾಗುವುದು. ಇದರಿಂದ ಸರ್ಕಾರದವರ ಮೇಲೆ ಬಿದ್ದಿರತಕ್ಕ ನಿರುದ್ಯೋಗಿಗಳ ಒತ್ತಡ ಬಹಳ ಕಡಮೆಯಾದಂತಾಗುವುದು. ನಾನು ನಮ್ಮ ತಾಲ್ಲೂಕಿನಲ್ಲಿ ರೇಷ್ಮೆ ಫಾರಂಗೆ ಉತ್ತಮವಾದ ಜಮೀನಿತ್ತು. ಅದಕ್ಕೆ ಅಕ್ವಿಸಿಷನ್ ರಿಕಾರ್ಡು ನಡೆದು 3 ವರ್ಷಗಳ ಮೇಲಾಯಿತು. ಅದರ ಬಗ್ಗೆ ಇನ್ನೂ ಯಾವ ತೀರ್ಮಾನವನ್ನೂ ಮಾಡಿಲ್ಲ. ಆದುದರಿಂದ ಈ ವಿಷಯವನ್ನು ಸರ್ಕಾರದವರು ಬೇಗ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ರೇಷ್ಮೆ ಬೆಳೆಗಾರರಿಗೆ ಬಾವಿಗಳ ಅನುಕೂಲ ಬಹಳ ಕಡಮೆ. ಒಂದು ತಾಲ್ಲೂಕಿಗೆ 3—4 ಇದ್ದರೆ ಹೆಚ್ಚಾಯಿತು. ಆದುದರಿಂದ ಈ ಬಾಬನ್ನು ಸರ್ಕಾರದವರು ತಮ್ಮ ಕಡೆಗೆ ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿಗೂ ರೇಷ್ಮೆ ಬೆಳೆ ಬೆಳೆಯುವ ಒಬ್ಬೊಬ್ಬ ರೈತನಿಗೂ ಒಂದೊಂದು ಬಾವಿಯನ್ನೂ ಮತ್ತು ಪ್ರತಿ ತಾಲ್ಲೂಕಿನಲ್ಲೂ ಒಬ್ಬೊಬ್ಬ ರೈತನಿಗೆ ಒಂದೊಂದು ರೇರಿಂಗ್ ಹೌಸನ್ನೂ ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರ ಸ್ಥಿತಿಗತಿಗಳು ಬಹಳ ಉತ್ತಮವಾಗುತ್ತವೆ. ಅದಕ್ಕಾಗಿ ಸರ್ಕಾರದವರು ಈ ಬೆಳೆಗೆ ಸಂಪೂರ್ಣ ಸಹಾಯ ಸಹಕಾರಗಳನ್ನು ಒದಗಿಸಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಚನ್ನಯ್ಯ (ಮುಳುಬಾಗಿಲು).—ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದವರು ಈ ಕಾರ್ಖಾನೆಗಳನ್ನು ಯಾವ ರೀತಿ ನಡೆಸುತ್ತಾ ಯಾವ ಸ್ಥಿತಿಯಲ್ಲಿ ಅವುಗಳನ್ನು ಉತ್ತಮಗೊಳಿಸುತ್ತಿದ್ದಾರೆ, ಅವುಗಳನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ, ಅವುಗಳನ್ನು ನಡೆಸತಕ್ಕವರಿಗೆ ಯಾವ ರೀತಿಯ ಉತ್ತೇಜನ ಕೊಡುತ್ತಿದ್ದಾರೆ, ಇವುಗಳನ್ನು ಹೇಗೆ ಮುಂದುವರಿಸಿಕೊಂಡು ಬರುತ್ತಿದ್ದಾರೆ ಎಂಬ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

(ಶ್ರೀ ಟಿ. ಚನ್ನಯ್ಯ)

ಈ ದಿವಸ ಬೆಂಗಳೂರಿನ ಸುತ್ತಮುತ್ತಲೂ ಅನೇಕ ಜನ ರೈತರು ದ್ರಾಕ್ಷಿ ಹಣ್ಣನ್ನು ಬೆಳೆಯುತ್ತಿದ್ದಾರೆ. ಹೀಗೆ ಸಾವಿರಾರು ಎಕರೆಗಳಲ್ಲಿ ಈ ದ್ರಾಕ್ಷಿ ವ್ಯವಸಾಯ ನಡೆಯುತ್ತಿದೆ. ಈ ದಿವಸ ಇಲ್ಲಿ ಬೆಳೆಯತಕ್ಕ ದ್ರಾಕ್ಷಿ ಹಣ್ಣಿಗೆ ನಮ್ಮ ಮೈಸೂರಿನಲ್ಲಿ ಸರಿಯಾದ ಬೆಲೆ ಸಿಕ್ಕದೆ ಇರುವ ಕಾರಣ ಇದನ್ನು ಮದ್ರಾಸ್ ಮತ್ತು ಆಂಧ್ರರಾಜ್ಯಗಳಿಗೆ ರವಾನೆ ಮಾಡಲಾಗುತ್ತಿದೆ. ಈ ದಿವಸ ಒಂದು ಸಕ್ಕರೆ ಕಾರ್ಖಾನೆಯ ಸುತ್ತಮುತ್ತಲೂ ಹೇಗೆ ಕಬ್ಬನ್ನು ಬೆಳೆಸಿ ಅದನ್ನು ಆ ಫ್ಯಾಕ್ಟರಿಗೆ ಒದಗಿಸಲಾಗುತ್ತಿದೆಯೋ ಹಾಗೇ ಬೆಂಗಳೂರು ಸುತ್ತಮುತ್ತಲೂ 3-4 ಮೈಲಿಗಳ ಫಾಸಲೆಯಲ್ಲಿ ಬೆಳೆಯತಕ್ಕ ದ್ರಾಕ್ಷಿ ವ್ಯವಸಾಯಗಾರರ ಅಭಿವೃದ್ಧಿಗಾಗಿ ಬೆಂಗಳೂರಿನಲ್ಲಿ ಒಂದು ವೈನ್‌ತಯಾರಿಸತಕ್ಕ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂದು ಸುಮಾರು 7-8-10 ವರ್ಷಗಳಿಂದ ಸರ್ಕಾರಕ್ಕೆ ಮನವಿಗಳ ಮೇಲೆ ಮನವಿಗಳನ್ನು ಸಲ್ಲಿಸುತ್ತಿದ್ದರೂ ಸರ್ಕಾರದವರು ಆ ಕಡೆಗೆ ತಮ್ಮ ಗಮನವನ್ನು ಕೊಟ್ಟಂತೆ ಕಾಣುತ್ತಿಲ್ಲ. ಈ ವಿಚಾರದಲ್ಲಿ ಕೆಲವು ಅಸೋಸಿಯೇಷನ್ನಿನ ಮುಖಂಡರು ಮನವಿಗಳನ್ನು ಸಲ್ಲಿಸಿದ್ದಾರೆ; ಸರ್ಕಾರದ ಗಮನವನ್ನು ಅವರು ಸೆಳೆದಿದ್ದಾರೆ. ಇದನ್ನು ಸರ್ಕಾರದವರು ಮಾಡದಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ.

3-00 P.M.

ಮಾನ್ಯ ಮುಖ್ಯ ಮಂತ್ರಿಗಳು ಡೀಸೆಂಟ್ರಲೈಸೇಷನ್ ತತ್ವವನ್ನು ಒಪ್ಪಿಕೊಂಡು ಬಿಟ್ಟಿದ್ದೇವೆ ಎಂದು ಹೇಳಿದರು. ಬೆಂಗಳೂರಿನಲ್ಲಿ ಈಗಾಗಲೇ ದೊಡ್ಡ ದೊಡ್ಡ ಕೈಗಾರಿಕೆಗಳು ಸ್ಥಾಪನೆ ಆಗಿವೆ. ಇದೂ ಅಲ್ಲದೆ ಇದರ ಪರಿಣಾಮವಾಗಿ ಜನಸಂಖ್ಯೆ ಜಾಸ್ತಿಯಾಗಿದೆ. ಬೆಂಗಳೂರು ವಿಪರೀತ ಬೆಳೆಯುತ್ತಿದೆ. ಅದುದರಿಂದ ಈ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಆಯಾಯ ಜಾಗದಲ್ಲಿರತಕ್ಕಂಥ ಜನಗಳಿಗೆ ಅಲ್ಲಿ ಕೆಲಸಗಳು ಸಿಕ್ಕಿ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಸರ್ಕಾರದವರೂ ಕೂಡ ಈ ತತ್ವವನ್ನು ಒಪ್ಪಿಕೊಂಡಿದ್ದಾರೆ. ಅದುದರಿಂದ ಸರ್ಕಾರದವರು ಕೈಗಾರಿಕೆಯಲ್ಲಿ ಪ್ರವೀಣರಾದವರನ್ನು ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಕಳುಹಿಸಿ ಅಲ್ಲಿ ಸರಿಯಾಗಿ ಸರ್ವೆ ನಡೆಸಿ ಯಾವ ಜಾಗದಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸುವುದು ಅನುಕೂಲ ಎನ್ನುವ ಸಲಹೆಗಳನ್ನು ಕೊಟ್ಟು ಅವರಿಗೆ ತಿಳಿಸಬೇಕು. ಅದೇರೀತಿಯಾಗಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಕೂಡ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಅದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡು ಈ ರೀತಿ ಪ್ರಯತ್ನ ಪಡುತ್ತೇವೆ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಕೈಗಾರಿಕೆಗಳಿಗೆ ಜನಗಳು ಸಲಹೆಗಳನ್ನು ಕೊಡುತ್ತಾರೋ ಅದನ್ನೂ ಸಹ ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಕೈಗಾರಿಕೆಯವರು ಕೊಟ್ಟ ಸಲಹೆಗಳಿಗೆ ಅಷ್ಟು ಸರ್ಕಾರ ಬೆಲೆ ಕೊಡುತ್ತಾ ಇಲ್ಲವೆಂದು ಕಾಣುತ್ತದೆ. ಅದಕ್ಕಾಗಿ ನಾನು ಕೇಳುವುದು ದೊಡ್ಡ ದೊಡ್ಡ ಟೌನ್‌ಗಳಲ್ಲಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಉದಾಹರಣೆಗೆ ತೆಗೆದುಕೊಂಡರೆ, ಕೋಲಾರ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಯಾವ ಕೈಗಾರಿಕೆಯೂ ಇಲ್ಲ. ಯಾವ ಪ್ರಗತಿಯೂ ಇಲ್ಲ. ಹಿಂದಿನಂತೆ ಅದು ಒಂದು ದೊಡ್ಡ ಹಳ್ಳಿ ಇದ್ದಂತೆ ಕಾಣುತ್ತದೆ. ಅದೇ ರೀತಿ ಚಿಕ್ಕಬಳ್ಳಾಪುರ ಚಿಂತಾಮಣಿ, ಮುಳಬಾಗಿಲು ಇನ್ನೂ ಇತರ ಊರುಗಳು ಇವೆ. ಅದುದರಿಂದ ದೊಡ್ಡ ದೊಡ್ಡ ಊರುಗಳಲ್ಲಿ ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲೂ ಇನ್ನುಮುಂದೆ ಕೈಗಾರಿಕೆಗಳನ್ನು ಸ್ಥಾಪಿಸುವುದು ಒಳ್ಳೆಯದು; ಎಂದು ನಾನು ಸಲಹೆ ಮಾಡುತ್ತೇನೆ. ಪಂಜಾಬಿನಲ್ಲಿ ದಿವಂಗತ ಕೈರಾನ್‌ನವರು ಮತ್ತು ಮದ್ರಾಸ್‌ನಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀಮಾನ್ ವೆಂಕಟರಾಮನ್‌ರವರು ಅವರು ಇದ್ದರು. ಅವರು ಅಧಿಕಾರ ಸ್ಥಾನದಲ್ಲಿ ಇದ್ದಾಗ ಕೈಗಾರಿಕಾ ವಿಚಾರದಲ್ಲಿ ಸಂಬಂಧಪಟ್ಟ ರಾಜ್ಯಗಳಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದು ಆ ಜನಗಳಿಗೆ ಎಷ್ಟು ಉಪಯೋಗ ಆಗಿದೆ ಎನ್ನುವ ವಿಚಾರವೂ ಗೊತ್ತಿದೆ. ನಮ್ಮ ಮುಂದೆ ಅಂತಹ ಒಳ್ಳೆಯ ನಿದರ್ಶನಗಳೂ ಬೇಕಾದಷ್ಟು ಇವೆ. ಅದುದರಿಂದ ಅದೇ ರೀತಿಯಾಗಿ ನಮ್ಮ ಸರ್ಕಾರದವರೂ ಕೂಡ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ರಾಜ್ಯಸರ್ಕಾರದವರು ಹೊರಗಡೆಯವರಿಗೆ ಕೈಗಾರಿಕೆ ಉದ್ದಿಮೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದೇ ರೀತಿಯಲ್ಲಿ ಮೈಸೂರು ರಾಜ್ಯದ ಉದ್ದಿಮೆಗಾರರಿಗೆ ಸೌಲಭ್ಯಗಳನ್ನೂ ಮತ್ತು ಸವಲತ್ತುಗಳನ್ನೂ ಒದಗಿಸಿಕೊಡಬೇಕು. ಏಕೆಂದರೆ ಕೆಲವು ಸಲ ವಿದ್ಯುಚ್ಛಕ್ತಿ ಸಿಕ್ಕಿದರೆ ಭೂಮಿ ಸಿಕ್ಕುವುದಿಲ್ಲ. ಭೂಮಿ ಸಿಕ್ಕಿದರೆ ನೀರು ಸಿಕ್ಕುವುದಿಲ್ಲ. ಹೀಗೆ ಒಂದಲ್ಲ ಒಂದು ವಿಧದಲ್ಲಿ ಅವರಿಗೆ ತೊಂದರೆಯಾಗುತ್ತದೆ. ಅದ್ದರಿಂದ ಹೊರಗಡೆಯವರಿಗೆ ಹೇಗೆ

ಎಲ್ಲಾ ಸೌಕರ್ಯಗಳನ್ನು ಕೊಡುತ್ತೇವೆ ಎಂದು ಹೇಳುತ್ತೀರೋ ಆ ರೀತಿ ಮೈಸೂರಿನ ಉದ್ಯಮೆಗಾರರಿಗೂ ಜಮೀನು, ಎಲೆಕ್ಟ್ರಿಸಿಟಿ ಮತ್ತು ನೀರು ವಗೈರೆ ಎಲ್ಲವನ್ನೂ ತಕ್ಷಣವೇ ಒದಗಿಸಿಕೊಟ್ಟರೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬರುತ್ತಾರೆ. ಈರೀತಿ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟು ಉದ್ಯಮೆಗಾರರ ತೊಂದರೆಗಳನ್ನು ನಿವಾರಣೆ ಮಾಡಬೇಕು. ಸಾಕಾದಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಇರುವುದರಿಂದ ಅದನ್ನು ಮೈಸೂರು ರಾಜ್ಯದ ಉದ್ಯಮೆಗಾರರಿಗೆ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು. ಮತ್ತು ಇಲ್ಲಿ ಉತ್ಪತ್ತಿ ಆಗುವ ವಿದ್ಯುಚ್ಛಕ್ತಿಯನ್ನು ಸಾಧ್ಯವಾದಷ್ಟುಮಟ್ಟಿಗೆ ನಮ್ಮ ರಾಜ್ಯದಲ್ಲೇ ಉಪಯೋಗಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸಬೇಕು. ವಿದ್ಯುಚ್ಛಕ್ತಿಯನ್ನು ನೆರೆರಾಜ್ಯಗಳವರಿಗೆ ಮಾರಿ ದುಡ್ಡು ಸಂಪಾದರೆ ಮಾಡುವುದು ಅಷ್ಟೇನೂ ಜಾಣತನವಲ್ಲ ಎಂದು ಹೇಳುತ್ತೇನೆ. ಸಂಪದಭಿವೃದ್ಧಿಯನ್ನು ಮೇಲ್ಮಟ್ಟಕ್ಕೆ ಹೆಚ್ಚಿಸಿಕೊಂಡಿರತಕ್ಕಂಥ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡೇ ಅವರ ಪ್ರಗತಿಯನ್ನು ಸಾಧಿಸಿಕೊಂಡಿದ್ದು. ಅದುದರಿಂದ ನಮ್ಮ ರಾಜ್ಯವೂ ಸಹ ಅದೇ ರೀತಿಯಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ರಾಜ್ಯದ ಜನತೆಗೆ ಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಮುಂದಾದರೂ ಈ ವಿದ್ಯುಚ್ಛಕ್ತಿಯನ್ನು ಹೊರಗಡೆಯವರಿಗೆ ಮಾರದೆ ನಮ್ಮ ಮೈಸೂರು ರಾಜ್ಯದಲ್ಲೇ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಬೇಕೆಂದು ಸೂಚಿಸುತ್ತೇನೆ.

ಇನ್ನು ವ್ಯವಸಾಯ ವಿಚಾರದಲ್ಲಿ ಹೇಳುವುದಾದರೆ ಬೇಕಾದಷ್ಟು ಆಫೀಸರ್ಸ್ ಈ ಡಿಪಾರ್ಟ್‌ಮೆಂಟಿನಲ್ಲಿ ಇದ್ದಾರೆ. ಆದರೆ ಎಷ್ಟರಮಟ್ಟಿಗೆ ಈ ಆಫೀಸರ್ಸ್ ರೈತನ ಬಳಿಗೆ ಬಂದು ಎಷ್ಟು ಸಹಾಯವನ್ನು ನೀಡಿದ್ದಾರೆ ಎನ್ನತಕ್ಕ ವಿಚಾರವನ್ನು ನೋಡಿದರೆ ನಿಜವಾಗಿಯೂ ಬಹಳ ಶೋಚನೀಯವಾಗಿದೆ. ಅಗ್ರಿಕಲ್ಚರಲ್ ಫೀಲ್ಡ್‌ಮನ್ ಒಬ್ಬ ಮಾತ್ರ ಉಳುವವನ ಹತ್ತಿರ ಯಾವಾಗಲಾದರೂ ಒಂದು ಸಲ ಹೋಗುತ್ತಾನೆ. ಹೋಗಿ ಪೆಸ್ಟಿಸೈಡ್ಸ್ ವಿಚಾರದಲ್ಲಿ ಏನಾದರೂ ಸಲಹೆ ಕೊಡುತ್ತಾನೆಯೇ ಹೊರತು ಬಾಕಿ ಇನ್ನು ಯಾವ ಆಫೀಸರೂ ರೈತನ ಹತ್ತಿರ ಬರುವುದಿಲ್ಲ. ಆದುದರಿಂದ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಮೇಲೆ ನಾವು ಖರ್ಚು ಮಾಡತಕ್ಕ ಹಣವೆಲ್ಲಾ ಬಹಳ ನಿಷ್ಪ್ರಯೋಜನ ಆಗುತ್ತಾ ಇದೆ. ಇಲ್ಲಿರತಕ್ಕಂಥ ಆಫೀಸರಿಗೆ ವ್ಯವಸಾಯಗಾರರ ಜಮೀನಿನ ಹತ್ತಿರ ಹೋಗುವ ಅಭ್ಯಾಸವೇ ಇಲ್ಲ. ಈ ಡಿಪಾರ್ಟ್‌ಮೆಂಟ್ ಎಲ್ಲಾ ಕಡೆಯಲ್ಲೂ ಒಂದು ಸೇಲ್ಸ್ ಡಿಪೋ ಹಾಗೆ ಪರಿವರ್ತನೆ ಆಗಿದೆ. ಮತ್ತು ಗೊಬ್ಬರ ಒಂದು ಮಾರುವುದನ್ನು ಬಿಟ್ಟರೆ ಬೇರೆ ಏನೂ ಯಾವ ಚಟುವಟಿಕೆಯೂ ಕೂಡ ಕಾಣಿಸುವುದಿಲ್ಲ. ಇಷ್ಟು ದೊಡ್ಡ ಡಿಪಾರ್ಟ್‌ಮೆಂಟು ಇಟ್ಟಿರುವುದು ರೈತನಿಗೆ ಸಹಾಯ ಮಾಡಲಿ ಎಂಬ ಉದ್ದೇಶದಿಂದ. ಆದರೆ ಕಾರ್ಯತಃ ಈ ಡಿಪಾರ್ಟ್‌ಮೆಂಟ್ ಸರಿಯಾದ ಕೆಲಸಗಳನ್ನು ಸುತರಾಂ ಮಾಡುತ್ತಾ ಇಲ್ಲ ಎಂದು ಹೇಳಲು ವಿಷಾದವಾಗುತ್ತದೆ. ಅದರ ಪರಿಣಾಮವಾಗಿ ರೈತರಲ್ಲಿ ಬಹಳ ನಿರಾಸೆಯುಂಟಾಗಿದೆ. ಮತ್ತು ಈ ರೀತಿ ಆದಪಕ್ಷದಲ್ಲಿ ಈ ಡಿಪಾರ್ಟ್‌ಮೆಂಟಿಗೆ ವೆಚ್ಚ ಮಾಡುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಈ ಡಿಪಾರ್ಟ್‌ಮೆಂಟ್ ಆಫೀಸರ್ಸ್ ರೈತನ ಹತ್ತಿರ ನೇರವಾಗಿ ಹೋಗಿ ಸಕಾಲದಲ್ಲಿ ಅವನಿಗೆ ಬೇಕಾದ ಸಹಾಯ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಆಸಕ್ತಿ ತೋರಿಸಬೇಕು ಇಲ್ಲದಿದ್ದರೆ ಈ ಡಿಪಾರ್ಟ್‌ಮೆಂಟಿನಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಇನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಯಾವ ವಿಧವಾದ ಪವರ್ ಟಿಲ್ಲರ್ಸ್ ಆಗಲಿ, ಬುಲ್‌ಡೋಜರ್ಸ್ ಆಗಲಿ, ಅಥವಾ ಇನ್ನು ಯಾವ ವಿಧವಾದ ಉಪಕರಣಗಳನ್ನಾಗಲಿ ಬಾಡಿಗೆ ಮೇರಾದರೂ ಕೊಡುವುದಿಕ್ಕೆ ಇಟ್ಟಿರುವುದಿಲ್ಲ. ಈ ವಿಚಾರದಲ್ಲಿ ವ್ಯವಸಾಯ ಇಲಾಖೆ ರೈತರಿಗೆ ಎಷ್ಟುಮಟ್ಟಿಗೆ ಸಹಾಯವಾಗುತ್ತದೆ ಎನ್ನುವುದನ್ನು ಕಂಡುಹಿಡಿಯಬೇಕು. ವ್ಯವಸಾಯ ಇಲಾಖೆಯಿಂದ ಯಾವ ರೈತರಿಗೂ ಉಪಕಾರವಾಗುತ್ತಾ ಇಲ್ಲ. ಇದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಅದಕ್ಕಾಗಿ ಒಂದು ನಿದರ್ಶನ ಕೊಡುವುದು ಉತ್ತಮ ಎಂದು ನನಗೆ ಅನಿಸುತ್ತದೆ.

ಇಲ್ಲಿಗೆ ಸಮೀಪದಲ್ಲಿ ಹೊಸಕೋಟೆ ಹತ್ತಿರ ಬಹಳ ದೊಡ್ಡ ಕೆರೆ ಇದೆ. ಇದರ ಅಚ್ಚುಕಟ್ಟು 2 ಸಾವಿರ ಎಕರೆ. ಈ ಪ್ರದೇಶ ಬೆಂಗಳೂರಿಗೆ 16 ಮೈಲಿ ದೂರದಲ್ಲಿದೆ. ಈ ಕ್ಷೇತ್ರದಿಂದ ಶ್ರೀಮಾನ್ ಎನ್. ಚಿಕ್ಕೆಗೌಡರು ಚುನಾಯಿತರಾಗಿ ಬಂದಿದ್ದಾರೆ. ಕೆರೆಯಲ್ಲಿ ನೀರನ್ನು ಬಿಡುವ ಜವಾಬ್ದಾರಿ ಪಿ. ಡಬ್ಲ್ಯೂ. ಡಿ. ಡಿಪಾರ್ಟ್‌ಮೆಂಟಿಗೆ ಸೇರಿದ್ದು. ಆದರೆ ಅಚ್ಚುಕಟ್ಟಿನಲ್ಲಿ ಬೆಳೆಯತಕ್ಕಂಥ ಬೆಳೆಗೆ ವ್ಯವಸಾಯದ ಇಲಾಖೆ ಜವಾಬ್ದಾರಿ ತೆಗೆದುಕೊಳ್ಳಬೇಕು. ನಾವು ಅದನ್ನು ಅಲ್ಲಿಗೆ ಹೋಗಿ ನೋಡಿದರೆ ಭತ್ತದ ಬೆಳೆ ಬೆಳೆದುದು ಗಾಳಿಯಿಂದ ಅಲ್ಲಾಡಿ ಅಲ್ಲಾಡಿ ಎಲ್ಲಾ ಕೆಳಗೆ ಬೀಳುತ್ತಿದೆ. ಗಾಳಿಯ ದೆಸೆಯಿಂದ ಹೆಚ್ಚಾಗಿ ಭತ್ತ ಎಲ್ಲಾ ಉದುರಿ ಕೊನೆಗೆ ಜೆಳ್ಳಾಗಿ ಹೋಗುತ್ತದೆ. ಅದು ಏಕೆಂದರೆ ಇದು ಅಕಾಲದಲ್ಲಿ ಮಾಡಿದ ಭತ್ತದ ಪರಿಣಾಮವಾಗಿ ಹೀಗೆ ಆಗಿದೆ. ನಾವು ವ್ಯವಸಾಯಕೆ ಮತ್ತು

(ಶ್ರೀ ಟಿ. ಚನ್ನಯ್ಯ)

ಮಾನದ ಕ್ರಮವನ್ನು ಅನುಸರಿಸಬೇಕು. ಮತು ಮಾನದ ಕ್ರಮವನ್ನು ಅನುಸರಿಸದೇ ಅಕಾಲದಲ್ಲಿ ವ್ಯವಸಾಯ ಮಾಡಿದುದರ ಪರಿಣಾಮವಾಗಿ ಹೀಗೆ ಹೊಸಕೋಟೆ ಮತ್ತು ಇತರ ಪಕ್ಕದ ಗ್ರಾಮಗಳ ಅಚ್ಚುಕಟ್ಟುದಾರರು ಬಹಳ ನಷ್ಟವನ್ನು ಅನುಭವಿಸುತ್ತಿದ್ದಾರೆ. ಎಕರೆಗೆ 30-40 ಪಲ್ಲ ಬೆಳೆಯುತ್ತಾ ಇದ್ದ ಭತ್ತ ಈಗ ಅಕಾಲದ ಪರಿಣಾಮವಾಗಿ 3-4 ಪಲ್ಲ ಕೂಡ ಆಗುವುದು ಕಷ್ಟವಾಗಿದೆ. ನಮಗೆ ಇಷ್ಟಬಂದ ಕಾಲದಲ್ಲಿ ನಾವು ಬೆಳೆಯನ್ನು ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಜನವರಿ ಆಖೈರು ಅಥವಾ ಫೆಬ್ರವರಿ ಶುರುವಿನಲ್ಲಿ ಭತ್ತ ಹಾಕಿದರೆ ಮೇ ತಿಂಗಳಿನಲ್ಲಿ ಅದರ ಪೂರ್ಣ ಫಸಲು ಒಂದು ಎಕರೆಗೆ 30-40 ಪಲ್ಲ ಭತ್ತ ಆಗತಕ್ಕಂಥ ಅವಕಾಶ ಇರುತ್ತದೆ. ಈ ದಿವಸ ಹೊಸಕೋಟೆಯ ಹತ್ತಿರ ಇಷ್ಟು ದೊಡ್ಡ ಕೆರೆ ಇದ್ದರೂ ಕೂಡ ಒಂದು ಎಕರೆಗೆ ಮೂರು ನಾಲ್ಕು ಪಲ್ಲ ಭತ್ತ ಆಗುವು ದಿಲ್ಲ. ಅಲ್ಲಿನ ರೈತರು ಮಾರ್ಚಿ ತಿಂಗಳಿನಲ್ಲಿ ಅಕಾಲದಲ್ಲಿ ಭತ್ತ ನೆಟ್ಟಿದ್ದಾರೆ ಎಂದು ಕಾರಣ ಹೇಳು ತ್ತಾರೆ. ಇನ್ನು ಎರಡು ಮೂರು ತಿಂಗಳಿನಲ್ಲಿ ಭತ್ತ ಕೊಯಿಲಿಗೆ ಬರುತ್ತದೆ. ಇಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಭತ್ತ ಆಗುತ್ತದೆ. ಈ ಪ್ರದೇಶ ಇಷ್ಟು ಹತ್ತಿರವಿದ್ದರೂ ಕೂಡ ಅಧಿಕಾರಿಗಳು ಮಂತ್ರಿ ಗಳು ಆ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದರೂ ಕೂಡ ಯಾರೂ ಅಕಾಲದಲ್ಲಿ ಭತ್ತ ನೆಟ್ಟಿದ್ದೀರಿ ಎಂದು ಹೇಳುವುದಕ್ಕೆ ಒಂದು ವಿಚಾರ ಮಾರ್ಗ ಬೇಡವೇ? ಅಗ್ರಿಕಲ್ಚರಲ್ ಡಿಪಾರ್ಟುಮೆಂಟು ಮತ್ತು ಪಿ.ಡಬ್ಲ್ಯೂ.ಡಿ. ಇವೆರಡೂ ಸೇರಿ ರೈತರಿಗೆ ಒಂದು ಸರಿಯಾದ ಸಲಹೆ ಮಾಡತಕ್ಕ ಶಕ್ತಿ ಸಾಮರ್ಥ್ಯ ಇಲ್ಲವೇ ಎಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ.

ಶ್ರೀ ದೇವರಾಜ ಅರಸ್ (ಪಶುಪಾಲನೆ, ಮೀನುಗಾರಿಕೆ, ವಾರ್ತೆ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).—ಸಕಾಲದಲ್ಲಿ ಬೆಳೆ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಮಾನ್ಯ ದಸಸ್ಯರು ಹೇಳಿದರು. ಕ್ರಾಪ್ ಪ್ಯಾಟರ್ನ್ ಯಾವ ಯಾವ ಕಾಲದಲ್ಲಿ ಏನೇನು, ಯಾವ ಭೂಮಿಯಲ್ಲಿ ಏನೇನು ಬೆಳೆಯಬೇಕು, ರೈತರು ಈ ರೀತಿ ಮಾಡಬೇಕು, ಎಂದು ಸರ್ಕಾರ ಕಾನೂನು ಮಾಡಬೇಕೇ? ಹೊಸಕೋಟೆಯ ರೈತರು ಸರ್ಕಾರವನ್ನು ಕೇಳಿ ಅಲ್ಲ ಮಾಡಿದ್ದಾರೆಯೇ?

ಶ್ರೀ ಟಿ. ಚೆನ್ನಯ್ಯ.—ಸರ್ಕಾರ ಒಂದು ನೀತಿ ಹಾಕಬೇಕು, ವ್ಯವಸಾಯ ಇಲಾಖೆಯವರು ಅಕಾಲದಲ್ಲಿ ಭತ್ತದ ಬೆಳೆ ಇಟ್ಟರೆ ಭತ್ತ ಆಗುವುದಿಲ್ಲ ಎಂದು ರೈತರಿಗೆ ಸಲಹೆ ಮಾಡಬೇಕು ಎಂದು ಹೇಳಿದುದು.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಹೊಸಕೋಟೆಯಲ್ಲಿ ನೀರು ಬಿಡುವುದಕ್ಕೆ ಅಲ್ಲಿ ಒಂದು ಕಮಿಟಿ ಇದೆ. ಈ ಪ್ರೊವಿಜನ್ ಇರತಕ್ಕ ಇರಿಗೇಷನ್ ಕಾನೂನನ್ನು ಈ ಮಹಾ ಸಭೆ ಒಪ್ಪಿ ಕೊಂಡಿದೆ. ಕ್ರಾಪ್ ಪ್ಯಾಟರ್ನ್ ಇವರು ಡಿಸೈಡ್ ಮಾಡಬೇಕು ಎಂದು ಇದೆ. ಈ ದೇಶದಲ್ಲಿ ಯಾವ ಕೆರೆಯ ಬಗ್ಗೆ ಇದನ್ನು ಜಾರಿಗೆ ತಂದಿಲ್ಲ ಎಂದು ಹೇಳುತ್ತೇನೆ.

ಶ್ರೀ ಟಿ. ಚೆನ್ನಯ್ಯ.—ವ್ಯವಸಾಯ ಇಲಾಖೆ ಮತ್ತು ಪಿ.ಡಬ್ಲ್ಯೂ.ಡಿ. ಸೇರಿ ಕೋ-ಆರ್ಡಿನೇಷ ನ್ನಿನಲ್ಲಿ ಸಕಾಲದಲ್ಲಿ ಭತ್ತ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು.

ವ್ಯವಸಾಯ ಇಲಾಖೆ ಬಗ್ಗೆ ಇದೊಂದು ನಿಕೃಷ್ಟವಾದ ಇಲಾಖೆ, ಇದರಿಂದ ಯಾವ ಪ್ರಯೋ ಜನವಾಗುವುದಿಲ್ಲ ಎಂದು ಸರ್ಕಾರದಲ್ಲಿ ಮೊದಲನಿಂದಲೂ ಒಂದು ಅಭಿಪ್ರಾಯ ಬಂದ ಹಾಗೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೊಂದು ಕೆಲಸಕ್ಕೆ ಬಾರದ ಇಲಾಖೆಯೆಂದು ಬಹಳ ಉದಾಸೀನದಿಂದ ಈ ಇಲಾಖೆಯನ್ನು ಯಾರಿಗಾದರೂ ಕೊಟ್ಟು ಆಡಳಿತ ನಡೆಸುವಂತೆ ಮಾಡುವುದು ಸರಿಯಿಲ್ಲ. ಈ ಸಾರಿ ಮಾತ್ರ ಮಾನ್ಯ ಮುಖ್ಯ ಮಂತ್ರಿಗಳು ಈ ಇಲಾಖೆಯನ್ನು ತೆಗೆದುಕೊಂಡಿ ದ್ದಾರೆ. ಈ ಇಲಾಖೆಗೆ ಪ್ರಾಮುಖ್ಯತೆ ಕೊಡುವ ಭಾವನೆ ಬರಬೇಕು, ಇದಕ್ಕೆ ಟಾಪ್ ಪ್ರಯಾರಿಟಿ ಕೊಡಬೇಕು ಎಂದು ಇಂಡಿಯಾ ಸರ್ಕಾರ ಹೇಳಿದ್ದಾರೆ. ನಮಗೆ ಸ್ವರಾಜ್ಯ ಬಂದು 20 ವರ್ಷಗ ಳಾದ ಮೇಲೆ ವ್ಯವಸಾಯಕ್ಕೆ ಪ್ರಾಯರಿಟಿ ಕೊಡಬೇಕು ಎಂಬ ಭಾವನೆ ಬಂದಿದೆ. ಈಗ ಅಮೇರಿಕಾ ಮತ್ತು ಬೇರೆ ರಾಷ್ಟ್ರಗಳಿಂದ ಗೋಧಿ ತರಿಸಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವು ದಕ್ಕೆ ಅವಕಾಶ ಕೊಡುವುದು ಏತಕ್ಕೆ? ಇದನ್ನು ತಪ್ಪಿಸುವುದಕ್ಕೆ ಆಗುತ್ತಿರಲಿಲ್ಲವೇ? ವ್ಯವಸಾಯ ಇಲಾಖೆಯನ್ನು ಉದಾಸೀನ ಮಾಡದೇ ಇದ್ದರೆ ಇಂಥ ಸಂದರ್ಭ ಬರುತ್ತಿರಲಿಲ್ಲ. ಈಗ ಇಂಡಿಯಾ ಸರ್ಕಾರ ಹೇಳಿದ ಮೇಲೆ ನಮ್ಮ ರಾಜ್ಯ ಸರ್ಕಾರ ಈ ಇಲಾಖೆಗೆ ಹೆಚ್ಚಿನ ಪ್ರಮಾಣದಲ್ಲಿ ಗಮನ ಕೊಡುತ್ತಿದ್ದಾರೆ. ಸಾಧಾರಣವಾದ ರೀತಿಯಲ್ಲಿ ಗಮನ ಕೊಟ್ಟರೂ ಕೂಡ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ವ್ಯವಸಾಯದಲ್ಲಿರತಕ್ಕಂಥ ಕೂಲಿಕಾರರಿಗೆ ದಿನಕ್ಕೆ ಎರಡು ರೂಪಾಯಿ ಕೂಲಿ ಕೊಡಬೇಕಾಗುತ್ತದೆ. ಸ್ವಂತ ವ್ಯವಸಾಯ ಮಾಡತಕ್ಕವರಿಗೆ ಎಲ್ಲವೂ ಸರಿಯಾಗಿದೆ. ಕೂಲಿ

ಕೊಟ್ಟು ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುವುದಿಲ್ಲ. ಬರಿ ದುಡ್ಡು ಖರ್ಚಾಗುತ್ತದೆ. ಇದರಿಂದ ವ್ಯವಸಾಯ ಮಾಡುವುದು ಇಂದು ಬಹಳ ಕಷ್ಟವಾಗಿದೆ. ಯಾರೂ ಈ ವ್ಯವಸಾಯ ಕೆಲಸ ಮಾಡಲು ತಯಾರಿಲ್ಲ. ಸರಕಾರ ಒಂದು ನೀತಿ ಹಾಕಿಕೊಂಡು ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ವ್ಯವಸಾಯ ಕೈಗಾರಿಕೆ ಮುಖ್ಯ ಎಂದು ಹೇಳುತ್ತೇನೆ. ಈ ಮಾನ್ಯ ಸಭೆಯ ಸದಸ್ಯರು ಈ ರೀತಿ ನಾನಾ ವಿಚಾರ ಮಾಡುತ್ತಿದ್ದಾರೆ. ನಿರುದ್ಯೋಗ ಸಮಸ್ಯೆ ಬಗೆ ಹರಿಸಲು ಈ ಅಗ್ರಿಕಲ್ಚರಲ್ ವ್ಯವಸಾಯ ಇಲಾಖೆ ಎಂದು ಕರೆಯುವುದರ ಬದಲು ಇದನ್ನು ಅಗ್ರಿ ಕಲ್ಚರಲ್ ಇಂಡಸ್ಟ್ರೀಸ್ ಎಂದು ಕರೆಯಬೇಕು. ಇಂದು ಜನರಲ್ಲಿ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡುವ ಹುಚ್ಚು ಬೆಳೆದು ಬಂದಿದೆ. ಇದಕ್ಕೆ ಅಗ್ರಿಕಲ್ಚರ್ ಇಂಡಸ್ಟ್ರೀ ಎಂದು ಕರೆದು ನಿರುದ್ಯೋಗ ಸಮಸ್ಯೆ ಬಗೆಹರಿಸಲು ಮೊದಲು ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಪಾಸು ಆಗತಕ್ಕಂಥವರನ್ನು ಕೆಲಸಕ್ಕೆ ಹೋಗಬೇಕು ಎಂಬ ಆಸೆ ಇರತಕ್ಕಂಥವರನ್ನು ಈ ವ್ಯವಸಾಯ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು, ಶೇಕಡ 80 ಭಾಗ ಜನರು ಈ ಇಂಡಸ್ಟ್ರೀಸ್ ಮೇಲೆ ಉಪಜೀವನ ಮಾಡಲು ಅವಕಾಶವಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಲಕ್ಷಾಂತರ ಎಕರೆ ಜಮೀನು ಇದೆ. ಯಾರೂ ಯಾವುದೇ ಪರೀಕ್ಷೆ ಪಾಸಾಗಿರಲಿ, ಬಿ.ಎ. ಮಾಡಿರಲಿ, ಎಂ.ಎ. ಪಾಸು ಮಾಡಿರಲಿ, ಬಿ. ಇ. ಪಾಸು ಮಾಡಿರಲಿ ಎಂ.ಬಿ.ಬಿ.ಎಸ್. ಪಾಸು ಮಾಡಿರಲಿ ಎಲ್ಲರೂ ಇದರಲ್ಲಿ ಕೆಲಸ ಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕು. ವ್ಯವಸಾಯ ಮಾಡತಕ್ಕಂಥವರು ಅಂದರೆ ದಡ್ಡರು ಎಂಬ ಭಾವನೆ ತೆಗೆದುಹಾಕಿ ಎಲ್ಲರೂ ಕೆಲಸ ಮಾಡುವ ಹಾಗೆ ಆಗಬೇಕು. ವ್ಯವಸಾಯದಲ್ಲಿ ಕೆಲಸ ಮಾಡುವುದು ಅವಮಾನವಲ್ಲ ಎಂದು ತಿಳಿದು ಕೊಳ್ಳಬೇಕು. ಎಸ್ಸೆಸ್ಸೆಲ್ಸೀ ಪಾಸು ಆದವರು ಪಾಸು ಆಗನೇ ಇರುವವರು ಈ ಇಂಡಸ್ಟ್ರೀಸ್‌ನಲ್ಲಿ ಬರ ಬಹುದು. ಎಸ್ಸೆಸ್ಸೆಲ್ಸೀ ಪಾಸು ಆದ ತಕ್ಷಣ ಆಫೀಸಿಗೆ ಹೋಗಿ ಟೇಬಲ್ ಮುಂದೆ ಕುಳಿತುಕೊಂಡು ಪೆನ್ನಿನಿಂದ ಬರೆಯುವುದು ಅಷ್ಟೇ ಅವರ ಕೆಲಸವೇ? ವ್ಯವಸಾಯ ಕೆಲಸ ಅವಮಾನಕರ ಎಂದು ಇದನ್ನು ಯಾರೂ ಮಾಡುವುದಿಲ್ಲ. ಇದನ್ನು ಒಂದು ಇಂಡಸ್ಟ್ರೀ ಎಂದು ಭಾವಿಸಿ ಒಂದು ಪಾಲಿಸಿ ಹಾಕಿಕೊಂಡರೆ ಒಳ್ಳೆಯದಾಗುತ್ತದೆ. ವಿದ್ಯಾವಂತರು ಜಮೀನಿನಲ್ಲಿ ಕಷ್ಟಪಟ್ಟು ಕೆಲಸ ಮಾಡಿ ಹೆಚ್ಚು ಪ್ರಮಾಣದಲ್ಲಿ ಆಹಾರ ಧಾನ್ಯ ಬೆಳೆಯುತಕ್ಕ ಒಂದು ನೀತಿಯನ್ನು ತೀವ್ರವಾಗಿ ಯೋಚನೆ ಮಾಡಿ ಹಾಕಿಕೊಡಬೇಕು. ಇದರಿಂದ ಮುಂದೆ ಪಾಸು ಆಗತಕ್ಕಂಥ ವಿದ್ಯಾವಂತರ ನಿರುದ್ಯೋಗವನ್ನು ಬಗೆಹರಿಸಿದಂತಾಗುತ್ತದೆ. ಇಲ್ಲದಿದ್ದರೆ ಕೇರಳದಲ್ಲಿ ಆಗಿರುವ ಹಾಗೆ ಇಲ್ಲಿಯೂ ಆಗುತ್ತದೆ. ಆದುದ ರಿಂಧ ವಿದ್ಯಾವಂತರು ವ್ಯವಸಾಯ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಯಕ್ಕೆ ಕೈಹಾಕುವ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ಮಾಡುತ್ತೇವೆ.

ಇನ್ನೊಂದು ವಿಚಾರ ಹೇಳುತ್ತೇನೆ. ಈಗ ಅಪಾಯಿಂಟ್‌ಮೆಂಟ್ ಮಾಡುವುದು ಒಂದು ಮನೆ ತನಕ್ಕೆ ಮನಾಪಲಿಯಾಗಿದೆ. ಈ ಮನಾಪಲಿಯನ್ನು ಸರ್ಕಾರ ಬ್ರೇಕ್ ಮಾಡಬೇಕು. ಒಂದು ಮನೆತನದಲ್ಲಿ ಗಂಡ, ಹೆಂಡತಿ, ಮಕ್ಕಳು, ಎಲ್ಲರಿಗೂ ಸರ್ಕಾರದ ಕೆಲಸ ಇರಬೇಕು ಅಂದರೆ ಇದು ನ್ಯಾಯವೇ? ಅವರ ದೂರದ ನೆಂಟರು ಕೂಡ ಸರ್ಕಾರದ ಕೆಲಸದಲ್ಲಿರಬೇಕು ಅಂದರೆ ಹೇಗೆ? ವ್ಯವ ಸಾಯಗಾರರಲ್ಲಿ ಒಬ್ಬನು ಅಕಸ್ಮಾತ್ ಗ್ರಾಜ್ಯುಯೇಟ್ ಆಗುತ್ತಾನೆ, ಆದರೂ ಕೂಡ ಅವನಿಗೆ ಕೆಲಸ ಸಿಕ್ಕುವುದಿಲ್ಲ. ಅಂಥವರು ಕೂಡ ಕೆಲಸವಿಲ್ಲದೆ ತಿರುಗಾಡುತ್ತಾರೆ. ವ್ಯವಸಾಯವನ್ನು ಉದಾಸೀನ ಮಾಡಿದ ಮೂಲಕ ಇಂದು ಕಾಲ ಕೆಟ್ಟುಹೋಗಿದೆ, ಆದುದರಿಂದ ವ್ಯವಸಾಯ ಅಭಿವೃದ್ಧಿ ಪಡಿಸ ಬೇಕಾದರೆ ಅನೇಕ ಸಂಸಾರಗಳು ಜಾಬ್ ಮನಾಪಲಿ ಮಾಡಿಕೊಂಡಿರುವುದನ್ನು ತಪ್ಪಿಸಬೇಕು. ಒಂದು ಸಂಸಾರದಲ್ಲಿ ಒಬ್ಬರ ನೇಮಕವಾಗಿದ್ದರೆ ಅಂಥವನು ಪೆನ್‌ಷನ್ ಆಗುವವರೆಗೆ ಅವರ ಮನೆ ಯಲ್ಲಿ ತಿರುಗಿ ಇನ್ನೊಬ್ಬರಿಗೆ ಜಾಬ್ ಕೊಡಕೂಡದು ಈ ರೀತಿ ಒಂದು ನೀತಿ ಇರಬೇಕು. ಏತಕ್ಕೆ ಕೆಲವರು ಕಾರು ಇಟ್ಟುಕೊಂಡು ಆಫೀಸನಲ್ಲಿ ಕೆಲಸ ಮಾಡಿಕೊಂಡು ಇರಬೇಕು? ನಾವು ರೈತರು ಮಾತ್ರ ಮಣ್ಣು ಕೆಸರಿನಲ್ಲಿ ಉಳುಮೆ ಕೆಲಸ ಮಾಡುವುದು ಹರಕಲು ಬಟ್ಟೆ ಹಾಕುವುದು ರೊಟ್ಟಿ ಖಾರ ತಿಂದುಕೊಂಡು ದುಡಿದು ಕೆಲಸ ಮಾಡಬೇಕು? ಇದರಿಂದ ಅನೇಕರು ನಿರುದ್ಯೋಗಿಗಳಾಗಿ ವ್ಯವ ಸಾಯ ಮಾಡುತ್ತಿಲ್ಲ. ಕುಟುಂಬ ಯೋಜನೆ ಜಾರಿಗೆ ತಂದಿದ್ದಾರೆ. ಇದನ್ನು ಏಕೆ ತಂದರು? ವ್ಯವ ಸಾಯಗಾರನಿಗೆ ಎರಡು ಮೂರು ಮಕ್ಕಳಾದರೆ ಆಮೇಲೆ ಮಕ್ಕಳು ಬೇಡ ಎಂದರೆ ಹೇಗೆ? ಓದಿದ ಮಕ್ಕಳು ತಂದೆಗೆ ವ್ಯವಸಾಯದಲ್ಲ ಸಹಾಯ ಮಾಡುವುದಿಲ್ಲ. ಓದಿದವರೆಲ್ಲ ಹೊರಗೆ ಹೊರಟು ಹೋದರೆ ಮನೆ ಕೆಲಸ ಮಾಡುವುದಕ್ಕೆ ಯಾರು? ಆಗ ವ್ಯವಸಾಯವನ್ನು ಉದಾಸಿನ ಮಾಡಿದ ಹಾಗೆ ಆಗುವುದಿಲ್ಲವೇ? ಹೀಗಾದರೆ ಮುಂದೆ ವ್ಯವಸಾಯವನ್ನೆಲ್ಲಾ ಬಿಡಬೇಕಾಗುತ್ತದೆ. ಬೇರೆ ದೇಶಗಳಲ್ಲಿ ಕುಟುಂಬ ಯೋಜನೆ ಇರಬಹುದು. ನಮ್ಮ ದೇಶದಲ್ಲಿ ನೇಚರಗೇ ಬಿಡುವುದು ಒಳ್ಳೆಯದು. ಕುಟುಂಬ ಯೋಜನೆ, ಸೋಷಿಯಲ್ ವೆಲ್‌ಫೇರ್ ಮತ್ತು ಇನ್ನೂ ಕೆಲವು ಇಲಾಖೆಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಇಲಾಖೆಗಳಲ್ಲಿ ಕೆಲವನ್ನು ತೆಗೆದುಹಾಕುವುದು ಒಳ್ಳೆಯದು.

(ಶ್ರೀ ಟಿ. ಚೆನ್ನಯ್ಯ)

39 ಕೋಟಿ ರೂಪಾಯಿಗಳನ್ನು ಬರಿಸಿ ಸರ್ಕಾರಿ ಉದ್ಯೋಗದಲ್ಲಿರುವ ನೌಕರರಿಗೆ ಖರ್ಚು ಮಾಡುತ್ತಿದ್ದಾರೆ. ಕನಿಷ್ಠ ಪಕ್ಷ 10 ಕೋಟಿ ರೂಪಾಯಿಗಳನ್ನು ಇದರಲ್ಲಿ ಕಡಮೆ ಮಾಡಬೇಕು. ಎಲ್ಲ ಇಲಾಖೆಗಳಿಗೂ ಅನ್ವಯಿಸುವ ಒಂದು ರಿಟ್ರೆಂಚ್‌ಮೆಂಟ್ ಕಮಿಟಿ ಎಂದು ಮಾಡಿ ಅದರಲ್ಲಿ ಈ ಮಾನ್ಯ ಸಭೆಯ ಇಬ್ಬರು ಮೂವರು ಸದಸ್ಯರನ್ನೂ ತಜ್ಞರಾದ ಒಬ್ಬಿಬ್ಬರು ಅಧಿಕಾರಿಗಳನ್ನೂ ನೇಮಕ ಮಾಡಿ ಐದು ಜನರಿರುವ ಒಂದು ಕಮಿಟಿಯನ್ನು ಮಾಡಿ 10 ಕೋಟಿ ರೂಪಾಯಿಗಳಷ್ಟು ವೆಚ್ಚವನ್ನು ಕಡಮೆ ಮಾಡಿದರೆ ಅವಾಗ ಬಡ್ಜೆಟ್ ಸರಿದೂಗಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಂತ್ರಿಗಳನ್ನು ಸ್ವಲ್ಪ ರಿಟ್ರೆಂಚ್ ಮಾಡಿ ಕೊಳ್ಳುವುದಕ್ಕೆ ಹೇಳಿ. ನೌಕರರ ಬಗ್ಗೆ ಮಾತ್ರ ಹೇಳಿದರೆ ಪ್ರಯೋಜನವೇನು ?

ಶ್ರೀ ಟಿ. ಚೆನ್ನಯ್ಯ.—ಸರ್ಕಾರಿ ಇಲಾಖೆಗಳಲ್ಲಿ ಲಂಚರುಷುವತ್ತು ಹೆಚ್ಚಾಗಿದೆ. ಲಂಚ ರುಷುವತ್ತು ತೆಗೆದುಕೊಳ್ಳದೆ ಇರುವವರನ್ನು ನಾವು ಕಂಡು ಹಿಡಿಯಬಹುದು, ಆದರೆ ಲಂಚ ತೆಗೆದು ಕೊಳ್ಳುವವರನ್ನು ಎಣಿಕೆ ಮಾಡುವುದಕ್ಕೇ ಸಾಧ್ಯವಿಲ್ಲ. ಆದುದರಿಂದ ಮೊದಲನೆಯದಾಗಿ ಈ ಲಂಚ ರುಷುವತ್ತು ತೆಗೆದುಕೊಳ್ಳುವುದನ್ನು ಬಹುಮಟ್ಟಿಗೆ ಸರ್ಕಾರದವರು ನಿರ್ಮೂಲ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಸರ್ಕಾರದಲ್ಲಿ ಐ.ಎ.ಎಸ್., ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ. ಅವರಿಗೆ ಟ್ರೇನಿಂಗ್ ಕೊಟ್ಟು ಐದಾರು ವರ್ಷ ಸರ್ವಿಸ್ ಆದ ತಕ್ಷಣ ಜಿಲ್ಲಾಧಿಕಾರಿಗಳಾಗಿ ಮತ್ತು ಎಸ್.ಎಸ್.ಪಿ. ಆಗಿ ನೇಮಕ ಮಾಡುತ್ತಾರೆ. ಇವರಿಗೆ ಯಾವ ತರಹ ಲೋಕವ್ಯವಹಾರವೂ ಚೆನ್ನಾಗಿ ಗೊತ್ತಿರುವುದಿಲ್ಲ, ಜನಗಳ ಕಷ್ಟ ಸುಖಗಳು ಗೊತ್ತಿರುವುದಿಲ್ಲ. ಕನಿಷ್ಠ ಪಕ್ಷ ಹತ್ತು ವರ್ಷ ಸರ್ವಿಸ್ ಆಗುವುದಕ್ಕೆ ಮೊದಲು ಜಿಲ್ಲಾಧಿಕಾರಿಗಳನ್ನಾಗಿ ಮತ್ತು ಎಸ್.ಎಸ್.ಪಿ.ಯನ್ನಾಗಿ ನೇಮಕ ಮಾಡಕೂಡದು ಎಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಆಡಳಿತದಲ್ಲಿ ಹೇಗೆ ಇರಬೇಕು ಎಂದರೆ, ಮಾನ್ಯ ಮಂತ್ರಿಗಳು ಬೇಕಾದಷ್ಟು ಟೂರ್‌ಗಳನ್ನು ಹಾಕಿಕೊಂಡು ಹೋಗುವುದಕ್ಕೆ ಬದಲಾಗಿ ಸೆಕ್ರೆಟೇರಿಯಟಿನಲ್ಲಿಯೇ ಬಹು ಭಾಗವನ್ನು ಕಳೆದು ಎಲೆಕ್ಟ್ರಿಕಲ್ ಅಪರೇಟೆಡ್ ಟೆಲಿಫೋನುಗಳು ಇಂಥವನ್ನು ಮಂತ್ರಿಗಳು ಹಾಕಿಕೊಂಡು ಜಿಲ್ಲಾಧಿಕಾರಿ ಗಳಿಗೆ ಕನೆಕ್ಷನ್ ಕೊಡುವ ಹಾಗೆ ಮಾಡಬೇಕು. ಪ್ರತಿಯೊಂದು ಸಮಾರಂಭಕ್ಕೂ ಮಂತ್ರಿಗಳಾದವರು ಅನೇಕ ಮೈಲುಗಳ ದೂರ ಹೋಗಿ ಬಂದರೆ ಜಿಲ್ಲೆಯಲ್ಲಿರುವ ಎಲ್ಲ ಅಧಿಕಾರಿಗಳ ಕೆಲಸ ಕಾರ್ಯಗಳೂ ಕೆಟ್ಟು ಹೋಗುತ್ತವೆ. ಅಲ್ಲದೆ ಅವರಿಗೆ ಬೇಕಾದಷ್ಟು ಹಣವನ್ನು ಟಿ.ಎ. ಮತ್ತು ಡಿ.ಎ. ರೂಪದಲ್ಲಿ ಕೊಡಬೇಕಾಗುತ್ತದೆ. ಮಂತ್ರಿಗಳಿಗೆ ಮತ್ತು ಈ ಸಭೆಯ ಸದಸ್ಯರಿಗೆ ಸಂಬಳ ಹೆಚ್ಚು ಮಾಡುವ ಒಂದು ಮಸೂದೆಯನ್ನು ತರುತ್ತಾರೆಂದು ಕೇಳಿದೆ. ಮಂತ್ರಿಗಳಿಗೆ ಎರಡು ಸಾವಿರ ರೂಪಾಯಿ ಸಂಬಳ ಕೊಡಿ, ನನಗೆ ಬಹಳ ಸಂತೋಷ. ಅಸೆಂಬ್ಲಿ ಸದಸ್ಯರಿಗೆ 800—900 ರೂಪಾಯಿ ಸಂಬಳ ಕೊಡಿ. ಏಕೆಂದರೆ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಯಾವುದಾದರೂ ಒಂದು ಸೇತುವೆಗೆ 17 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಅಂಥ ಸೇತುವೆಗೆ ಅಗತಕ್ಕ ಖರ್ಚು ನಮ್ಮ ಮಾನ್ಯ ಸಭೆಗೆ ಖರ್ಚಾಗುವುದಿಲ್ಲ. ಈ ರಾಜ್ಯದ ಆಡಳಿತ ನಡೆಸತಕ್ಕ ಅಸೆಂಬ್ಲಿ ಸದಸ್ಯರಿಗೆ ಮತ್ತು ಮಂತ್ರಿಗಳಿಗೆ ಕಡಮೆ ದುಡ್ಡು ಖರ್ಚಾಗಿ, ಕಡಮೆ ಸಂಬಳ ತೆಗೆದುಕೊಳ್ಳಬೇಕು ಎನ್ನುವ ಪದ್ಧತಿ ಬಂದಿದೆ. ಏಕೆ ಅಂಥ ಪ್ರೆಸ್ಟೀಜ್ (prestige) ಮೇಲೆ ನಡೆಯಬೇಕು ? ಹೆಚ್ಚು ಸಂಬಳ ಕೊಟ್ಟು, ಇದ್ದ ಸ್ಥಳದಲ್ಲಿಯೇ, ಸೆಕ್ರೆಟೇರಿಯಟ್‌ನಲ್ಲಿಯೇ ಇದ್ದುಕೊಂಡು, ಹೆಚ್ಚು ಟೂರ್ ಮಾಡದೆ, ಅನೇಕ ಕೆಲಸಕಾರ್ಯಗಳನ್ನು ತಕ್ಷಣ ಫೋನ್ ಮೂಲಕ ಮಾಡಿಕೊಳ್ಳಬಹುದು. ಈ ರೀತಿ ಕೆಲಸ ಮಾಡು ವುದಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಸರ್ಕಾರದಲ್ಲಿ ಬಿಗಿಯಾಗಿ ಆಡಳಿತವನ್ನು ನಡೆಸಬೇಕೆಂದು ನಾನು ಸಲಹೆ ಕೊಡಬೇಕು ಎಂದು ಇದ್ದೇನೆ. ಯಾವತ್ತಿಗೂ ಕೂಡ ಸರ್ಕಾರದಲ್ಲಿ ಬಿಗಿ ಇಲ್ಲದೆ ಇರುವುದರಿಂದ ಲಂಚ ರುಷುವತ್ತುಗಳು ಜಾಸ್ತಿಯಾಗಿದೆ. ಸರ್ಕಾರದಲ್ಲಿ ಮುಖ್ಯಾಧಿಕಾರಿಗಳು ಯಾವಾಗ ಸರಿಯಾಗಿಲ್ಲವೋ ಅವಾಗ ಅವರ ಕೈಕೆಳಗೆ ಕೆಲಸ ಮಾಡುವವರೂ ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ. ಆದುದರಿಂದ ಮೇಲೆ ಸರ್ಕಾರದಲ್ಲಿ ಬಿಗಿಯಾಗಿ, ಕಟ್ಟುನಿಟ್ಟಾಗಿ ಕೈಶುದ್ಧವಾಗಿ, ದಕ್ಷತೆಯಿಂದ ಕೆಲಸ ಮಾಡಿದರೆ ಅವಾಗ ಇಡೀ ಸಂಸ್ಥಾನದಲ್ಲಿ ಯಾವ ತರಹ ಲಂಚ ರುಷುವತ್ತುಗಳಿಗೂ ಅವಕಾಶವಿಲ್ಲದ ಹಾಗೆ ಆಗುತ್ತದೆ. ಮತ್ತು ಕೆಲಸ ಕೂಡ ಜಾಗ್ರತೆಯಾಗಿ ಆಗುತ್ತದೆ. ಅನೇಕ ತಿಂಗಳುಗಟ್ಟಲೆ ಕೆಲಸಗಳು

ನಿಧಾನವಾಗಿ ಅಗುತ್ತಿರುವುದನ್ನು ನೋಡಿ ಜನರು ನೋವು ಪಡುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡದೆ ಸರ್ಕಾರದ ಮಟ್ಟದಲ್ಲಿ, ಆ ಸ್ಥಾನಕ್ಕೆ ಬಂದಮೇಲೆ ಮಾನ್ಯ ಮಂತ್ರಿಗಳು ಇಂಗ್ಲಿಷಿನಲ್ಲಿ ಒಂದು ಗಾದೆ ಹೇಳುವಂತೆ :

> "Man's life is measured not by success but by the amount of service he does to humanity."

ಮಂತ್ರಿಗಳಾದವರು ಪಕ್ಷದ ರಾಜಕೀಯದಲ್ಲಿ ಮತ್ತು ಸ್ವಾರ್ಥಜನಗಳಿಗಾಗಿ ಕಾಲ ಕಳೆದುಕೊಂಡು ಹೋಗುವುದು ಸರಿಯಲ್ಲ. ಸೇವಾ ಮನೋವೃತ್ತಿಯನ್ನು ಹೆಚ್ಚಿನ ರೀತಿಯಲ್ಲಿ ಬೆಳಸಿ ಜನಗಳ ಸೇವೆ ಮಾಡಬೇಕೆಂದು ಸರ್ಕಾರಕ್ಕೆ ಹೇಳಿ ಅಧ್ಯಕ್ಷರು ಮಾತನಾಡಲು ಹೆಚ್ಚು ಅವಕಾಶ ಕೊಟ್ಟದ್ದಕ್ಕೆ ನಾನು ವಂದಿಸುತ್ತೇನೆ.

†ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಸಭಾಧ್ಯಕ್ಷರೇ, ಡಿಮ್ಯಾಂಡ್ 10, 14, 16, 20, 24 ಮತ್ತು 44 ಇವೆಲ್ಲವನ್ನೂ ವಿರೋಧಿಸುತ್ತ ಮುಖ್ಯವಾಗಿ ಕೈಗಾರಿಕೆಗೆ ಸಂಬಂಧಪಟ್ಟಂಥ 24 ಮತ್ತು 44ನೇ ಡಿಮಾಂಡ್ ಮೇಲೆ ನಾನು ಮಾತನಾಡ ಬಯಸುತ್ತೇನೆ. ಇವೆರಡೂ ಡಿಮಾಂಡ್‌ಗಳಿಗೆ 21,85,83,300 ರೂಪಾಯಿಗಳನ್ನು ಸರ್ಕಾರ ಕೇಳಿದೆ. ಇದರಲ್ಲಿ ವರ್ಕಿಂಗ್ ಎಕ್ಸ್‌ಪೆನ್ಸಸ್‌ಗೆ 12,91,76,000 ರೂಪಾಯಿಗಳನ್ನು ಬೇಡಿಕೆಯಲ್ಲಿ ಕೇಳಿದ್ದಾರೆ. ಇದರ ಜೊತೆಗೆ 14 ಕೋಟಿ ರೂಪಾಯಿಗಳಲ್ಲಿ 31,81,000 ರೂಪಾಯಿಗಳನ್ನು ಅಭಿವೃದ್ಧಿ ಕೆಲಸ ಗಳಿಗಾಗಿ ಕೇಳಿದ್ದಾರೆ. ಡೆವಲಪ್‌ಮೆಂಟ್ ಸ್ಕೀಮುಗಳಿಗಾಗಿ 70 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದಾರೆ. ಇದರಲ್ಲಿ 55 ಲಕ್ಷ ರೂಪಾಯಿಗಳು ಕೇವಲ ಸಿಬ್ಬಂದಿ, ಡಿ.ಎ. ಮತ್ತು ಇತರ ಬಾಬುಗಳಿಗೆ ಖರ್ಚಾಗಿ ಅಭಿವೃದ್ಧಿ ಕಾರ್ಯಗಳಿಗೆ ಕೇವಲ 15 ಲಕ್ಷ ರೂಪಾಯಿಗಳು ಮಾತ್ರ ಉಳಿಯು ಹಾಗ 70 ಲಕ್ಷ ರೂಪಾಯಿಗಳು ಡೆವಲಪ್‌ಮೆಂಟ್ ಸ್ಕೀಮುಗಳಿಗಾಗಿ ಹೇಗೆ ವಿನಿಯೋಗವಾಗುತ್ತದೆ ಎಂದು ನಾವು ಯೋಚಿಸಬೇಕಾಗಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಹಿಂದೆ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು. 'Industrialise or perish' ಎಂಬುದಾಗಿ ಒಂದು ತಾರಕ ಮಂತ್ರವನ್ನು ಹೇಳಿದರು. ಅದರಂತೆಯೇ ಅವರ ಕನಸನ್ನು ನನಸು ಮಾಡುವುದಕ್ಕೆ ಪ್ರಯತ್ನಪಟ್ಟು ಅವರ ಜೀವಮಾನದಲ್ಲಿ ಏನನ್ನು ಸಾಧಿಸಿದರೋ ಅದನ್ನು ಈ ಕಾಂಗ್ರೆಸ್ ಸರ್ಕಾರ ನಾಶ ಮಾಡುವುದಕ್ಕೆ ಹೊರಟಿದೆ ಎನ್ನುವುದನ್ನು ಸಮರ್ಥನೀಯ ರೀತಿಯಲ್ಲಿ ತೋರಿಸುವುದಕ್ಕೆ ಪ್ರಯತ್ನಪಡುತ್ತೇನೆ.

10,71,000 ರೂಪಾಯಿಗಳ ಬೇಡಿಕೆಯನ್ನು ಸರ್ಕಾರ ಏನು ಕೇಳುತ್ತಿದೆ ಇದರಲ್ಲಿ ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಅವರ ಸಿಬ್ಬಂದಿಗೆ ವರ್ಷಕ್ಕೆ 3,91,000 ರೂಪಾಯಿಗಳೂ, ವಸ್ತು ಪ್ರದರ್ಶನ ಮತ್ತು ಕಾನ್‌ಫರೆನ್ಸಿಗೆ 6,80,000 ರೂಪಾಯಿ ಗಳನ್ನೂ ತೋರಿಸಿದ್ದಾರೆ, ವಸ್ತು ಪ್ರದರ್ಶನ ಮತ್ತು ಕಾನ್‌ಫರೆನ್ಸ್ ಏನಿದೆ ಅದರಲ್ಲಿ ವಸ್ತು ಪ್ರದರ್ಶನ ಎಂದರೆ ಕಾಂಗ್ರೆಸ್ ವಸ್ತು ಪ್ರದರ್ಶನಗಳೇ ಹೆಚ್ಚಾಗಿ ಅಗುತ್ತಿವೆ. ಆ ಕಾಂಗ್ರೆಸ್ ವಸ್ತು ಪ್ರದರ್ಶನಗಳಿಗೆ ಹೆಚ್ಚು ಹಣದ ಸಹಾಯ ಮಾಡುವುದಕ್ಕೋಸ್ಕರ ಇಷ್ಟು ದುಡ್ಡನ್ನು ಇದರಲ್ಲಿ ಟ್ಟಿದ್ದಾರೆಂದು ನನಗನ್ನಿಸುತ್ತದೆ. ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಒದಗಿಸಿರುವ ಹಣದ ಬ್ರೇಕಪ್ ನೋಡಿದರೆ ಕಚ್ಚಾ ಸಾಮಗ್ರಿಗಳಿಗೆ 7,12,00,000 ರೂಪಾಯಿ, ಆಡಳಿತಕ್ಕೆ 45,06,700 ರೂಪಾಯಿ ಕಾರ್ಮಿಕರ ವೇತನ 1,32,90,125 ರೂಪಾಯಿ, ಇದಕ್ಕೆ ಬಡ್ಡಿ 78,43,600 ರೂಪಾಯಿ ಒಟ್ಟು 1,19,50,200 ರೂಪಾಯಿಗಳು ಖರ್ಚಾಗುವಾಗ ಈ ಹಣವನ್ನು ಯಾವ ರೀತಿ ವಿನಿಯೋಗಿಸುತ್ತಾರೆ ಎಂದು ನೋಡಬೇಕಾಗಿದೆ. ಸರ್ಕಾರಿ ಮತ್ತು ಸರ್ಕಾರದ ಸಹಾಯ ಪಡೆಯುತ್ತಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಸುಮಾರು 40 ಸಾವಿರ, ಸರ್ಕಾರ ಈ ಉದ್ಯಮಗಳಲ್ಲಿ ವರ್ಕಿಂಗ್ ಎಕ್ಸ್‌ಪೆನ್ಸಸ್‌ಗೋಸ್ಕರ 1966ರ ಆರ್ಡರ್ ಪ್ರಕಾರ ಖರ್ಚು ಮಾಡಿರುವುದು 617.46 ಲಕ್ಷ ರೂಪಾಯಿಗಳು. 1965-66ನೆ ಇಸವಿಯೊಳಗೆ ಸರ್ಕಾರ ದವರು ನಡೆಸಿರುವಂಥ ಉದ್ಯೋಗಗಳಲ್ಲಿ ಏನು ಪ್ರತಿಫಲ ಬಂದಿದೆ ಎಂದು ಸಿಂಹಾವಲೋಕನ ಮಾಡಿ ನೋಡಿದರೆ ಗೊತ್ತಾಗುವುದು, ನಾಲ್ಕು ಕಂಪನಿಗಳಿಂದ ಬಂದಿರುವ ನಫೆ 70·81 ಲಕ್ಷ ರೂಪಾಯಿಗಳು. ಆರು ಕಂಪೆನಿಗಳಿಗೆ ಅಗಿರುವ ನಷ್ಟ 151·41 ಲಕ್ಷ ರೂಪಾಯಿ. ಒಟ್ಟು ಸರ್ಕಾರದ ಉದ್ಯಮ ಗಳಿಂದ ದೇಶಕ್ಕಾಗಿರುವ ನಷ್ಟ 81·26 ಲಕ್ಷ ರೂಪಾಯಿ. ಪ್ರಕೃತಿಯ ಸಾಲಿನಲ್ಲಿ ಒಂದು ವಿಚಿತ್ರ ವಾದ ಮಡಿಕೇರಿಯ ಸೆಂಟ್ರಲ್ ವರ್ಕ್‌ಷಾಪ್, ಅದರ ಅಡ್ಮಿನಿಸ್ಟ್ರೇಶನ್ನಿಗೆ ಒಂದು ಲಕ್ಷ ರೂಪಾಯಿ ಯನ್ನು ಖರ್ಚು ಮಾಡಬೇಕೆಂದು ಈ ಬೇಡಿಕೆಯಲ್ಲಿ ಕೇಳಿದ್ದಾರೆ. ಕಾರ್ಮಿಕರಿಗೆ 50 ಸಾವಿರ, ಬಡ್ಡಿ

(ಶ್ರೀ ಎಚ್. ಬಿ. ಜ್ವಾಲನಯ್ಯ)

40 ಸಾವಿರ. ಕಾರ್ಮಿಕರ ವೇತನಕ್ಕಿಂತ ಅಡ್ಮಿನಿಸ್ಟ್ರೇಶನ್‌ನಲ್ಲಿ ಹೇರಳ ಹಣವನ್ನು ಅಳವಡಿಸಲಾಗಿದೆ. ಮೈಸೂರು ದೇಶ, ಕೈಗಾರಿಕೆಯ ಭೂಪಟದಲ್ಲಿ ಮೊದಲನೆಯ ಸ್ಥಾನದಲ್ಲಿತ್ತು, ಈಗ ಕಾಂಗ್ರೆಸ್ಸಿನವರ ಕೈಗೆ ಬಂದು ಹೊಲಸಾಗಿದೆ.

3-30 P.M.

ಇನ್ನು ಸಣ್ಣ ಕೈಗಾರಿಕೆಗಳ ಪೈಕಿ ಮೈಸೂರು ರಾಜ್ಯದಲ್ಲಿ ಕೈಗಾರಿಕಾ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಸಣ್ಣ ಕೈಗಾರಿಕೆಗಳು 5,000, ಅನ್‌ರಿಜಿಸ್ಟರ್ಡ್ 5,000. ಹೀಗೆ ಒಟ್ಟು 10,000. ಒಂದು ಯೂನಿಟ್‌ನಲ್ಲಿ ಸರಾಸರಿ ಐದು ಸಾವಿರ ಎಂದು ತೆಗೆದುಕೊಂಡರೂ ಒಟ್ಟು ಐದು ಕೋಟಿ ರೂಪಾಯಿ ಆಯ್ತು. ಮೈಸೂರು ಸ್ಟೇಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ ಅಸೋಷಿಯೇಷನ್ ಅಂಕಿ ಅಂಶದ ಪ್ರಕಾರ, ಸರ್ಕಾರ 32 ಕೋಟಿ ರೂಪಾಯಿ ಬಂಡವಾಳ ಹಾಕಿ ಕೇವಲ 46 ಸಾವಿರ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಐದು ಕೋಟಿ ಬಂಡವಾಳ ಹಾಕಿ ಒಂದುವರೆ ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದೀರಿ. ಎರಡನೇ ಪ್ಲಾನಿಂಗ್ ಕಮಿಷನ್ನಿನವರು ನೇಮಿಸಿದಂತಹ ವರ್ಕಿಂಗ್ ಗ್ರೂಪ್ ಇಂಡಸ್ಟ್ರಿಯಲ್ ಪಾಲಿಸಿ ರಿಸೊಲ್ಯೂಷನ್ 58-59 ಅದರಲ್ಲಿ ಈ ರೀತಿ ಹೇಳುತ್ತಾರೆ:

"The small scale industries offer a method of ensuring a more equitable distribution of national income and they facilitate effective mobilisation of resources and capital which may otherwise remain unutilised"

ಮಾನ್ಯ ಮುಖ್ಯ ಮಂತ್ರಿಯವರು ವ್ಯವಸಾಯ ಮತ್ತು ಕೈಗಾರಿಕೆಗಳು ಎಂಬ ಎರಡು ಬಹು ಮುಖ್ಯವಾದ ಖಾತೆಯನ್ನು ವಹಿಸಿದ್ದಾರೆ. ಅವರು ಸಣ್ಣ ಕೈಗಾರಿಕೆಗಳು ದೇಶದ ಜೀವನಾಡಿಗಳು ಇತ್ಯಾದಿ ಹೇಳುತ್ತಿದ್ದಾರೆ. ಆದರೆ, ಅದು ಕೃತಿಯಲ್ಲಿ ಮಾತ್ರ ಇಲ್ಲ. ನಾನು ಏನು ಸಹಕಾರ ಸಂಘ ಮತ್ತು ವ್ಯವಸಾಯಕ್ಕೆ ವಿರೋಧವಾಗಿ ಹೇಳುತ್ತಿಲ್ಲ. ವ್ಯವಸಾಯಕ್ಕೆ ಯಾವ ರೀತಿ ಗಮನವನ್ನು ಕೊಡಬೇಕೋ ಅದೇ ರೀತಿ ಸಣ್ಣ ಕೈಗಾರಿಕೆಗಳಿಗೂ ಸರ್ಕಾರದವರು ಕೊಡಬೇಕಾದಷ್ಟು ಗಮನ ಕೊಡುತ್ತಿಲ್ಲವೆಂದು ನಾನು ಈಗ ಅಂಕಿ ಅಂಶಗಳಿಂದ ಹೇಳಬಯಸುತ್ತೇನೆ.

1966-67ರಲ್ಲಿ ಅಗ್ರಿಕಲ್ಚರ್ ಮತ್ತು ಸರ್ವಿಸ್‌ಗೋಸ್ಕರ ಒಂದು ಕೋಟಿ 64 ಲಕ್ಷ ರೂಪಾಯಿ ಖರ್ಚು ಮಾಡಿದೆ. ಅದೇ ವರ್ಷ ಸಣ್ಣ ಕೈಗಾರಿಕೆಗಳಿಗೆ 38,53,400 ರೂಪಾಯಿ ಇದರಲ್ಲಿ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಸರ್ಕಾರಕ್ಕೆ ಕೊಡಬೇಕಾದಂತಹ ಸಾಲವನ್ನು ಷೇರ್ ರೂಪದಲ್ಲಿ ಪರಿವರ್ತಿಸಿದೆ. ಅದನ್ನು ಬಿಟ್ಟರೆ ಕೇವಲ ಎಂಟೂವರೆ ಲಕ್ಷ ರೂಪಾಯಿ ಮಾತ್ರ ಕೈಗಾರಿಕೆಗೆ ಉಪಯೋಗವಾಗಿದೆ.

67-68ರಲ್ಲಿ ಅಗ್ರಿಕಲ್ಚರ್ ಮತ್ತು ಸರ್ವಿಸ್‌ಗೋಸ್ಕರ 77 ಲಕ್ಷ ಅಲಾಟ್ ಮಾಡಿ ಆ ಸಾಲಿನಲ್ಲಿ ಕೇವಲ ಐದು ಲಕ್ಷ ರೂಪಾಯಿ ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕಿಗೆ ಷೇರ್ ಆಗಿ ಪರಿವರ್ತನೆಗೋಸ್ಕರ ಅಲಾಟ್ ಮಾಡಿದ್ದಾರೆ.

ಇನ್ನು ಸಣ್ಣ ಕೈಗಾರಿಕೆಗಳು ಅತ್ಯುತ್ತಮ ಪಾತ್ರವನ್ನು ವಹಿಸಬೇಕಾದಂತಹ ಕೈಗಾರಿಕೆಗಳು. 38 ಕೋಟಿ ರೂಪಾಯಿಗಳಲ್ಲಿ ಸರ್ಕಾರ ಕೇವಲ 5 ಲಕ್ಷ ರೂಪಾಯಿಯನ್ನು ಮೀಸಲಾಗಿಟ್ಟಿರುವಂಥದ್ದು ಶೋಚನೀಯವಾದ ಸಂಗತಿ. ಕಾಟೇಜ್ ಮತ್ತು ಸಣ್ಣ ಕೈಗಾರಿಕೆಗೋಸ್ಕರವಾಗಿ 65 ಲಕ್ಷ ಡಿಮ್ಯಾಂಡಿನಲ್ಲಿ ಇದೆ. ಇದರಲ್ಲಿ 44 ಲಕ್ಷ ರೂಪಾಯಿ ಕೇವಲ ಅಡ್ಮಿನಿಸ್ಟ್ರೇಶನ್ ಮತ್ತು ಡೆಮಾನ್‌ಸ್ಟ್ರೇಷನ್ನಿಗೋಸ್ಕರ ಹೋಗಿಬಿಟ್ಟಿದೆ. ಇನ್ನು 14 ಲಕ್ಷ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್‌ಗಳಿಗೆ ಕೊಡಬೇಕೆಂದು ತೀರ್ಮಾನ ಮಾಡಿದೆ. ಈ ಬೋರ್ಡಿನ ಹೊಲಸು ನಾತ ಈ ಸಭಾಂಗಣದಲ್ಲಿ ಬೀಸಿ ಬೀಸಿ ಸಾಕಾಗಿಬಿಟ್ಟಿದೆ. ಇನ್ನೂ ಇದಕ್ಕೆ ಹೆಚ್ಚು ಹೆಚ್ಚು ಕೊಡುತ್ತಿರುವುದು ಸರ್ಕಾರದ ಅವಿವೇಕವೆಂದು ಹೇಳಬೇಕಾಗುತ್ತದೆ. 1965-66ನೆಯ ಎಸ್ಟಿಮೇಟ್ ಕಮಿಟಿಯಲ್ಲಿ ಶ್ರೀ ಅಪ್ಪಣ್ಣನವರು ಚೇರ್‌ಮನ್ ಆಗಿದ್ದಾಗ ಅವರು ಕೊಟ್ಟಿರುವ ವರದಿಯಲ್ಲಿ ಈ ರೀತಿ ಹೇಳಿದ್ದಾರೆ:

"The officers in charge of Government industries are not giving proper encouragement to small scale industries"

ಅದರಲ್ಲೂ ಸತ್ಯಾಂಶ ಇದ್ದರೂ ಅವರೇ ಇರುವ ಇಲಾಖೆಯಲ್ಲಿ ಇಷ್ಟು ದುಡ್ಡು ಕಡಿಮೆ ಕೊಟ್ಟಿರುವುದು ಬಹಳ ಆಶ್ಚರ್ಯದ ಸಂಗತಿ. ಅವರ ಸಲಹೆಯು ಸೂಕ್ತವೆಂದು ನನಗನಿಸುತ್ತದೆ. ಸಣ್ಣ ಕೈಗಾರಿಕೆ ಮತ್ತು ದೊಡ್ಡ ಕೈಗಾರಿಕೆಗಳು ಕೇವಲ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇವರ ಸಹಾಯವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದೆ. ಈಗ ಅವರಿಗೆ ಹೆಚ್ಚಿನ ಹೊರೆಯಾಗಿದೆ. ಸರ್ಕಾರಿ ಕೈಗಾರಿಕೆಗಳಿಗೆ ಹೆಚ್ಚಿನ ಗಮನ ಕೊಡುತ್ತಿರುವ ಕಾಲದಲ್ಲಿ ಸಣ್ಣ ಕೈಗಾರಿಕೆಗಳಿಗೆ ಅವರು ಹೆಚ್ಚು ಗಮನ ಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಅಡಿಷನಲ್ ಡೈರೆಕ್ಟರ್ ಪೂರ್ಣ ಜವಾಬ್ದಾರಿಯ ಅಧಿಕಾರಿಯನ್ನು ನೇಮಿಸಿದ್ದಾರೆ. ಮದ್ರಾಸಿನಲ್ಲಿ ಸರ್ಕಾರಿ ಕೈಗಾರಿಕೆಗಳನ್ನು ನೋಡಿಕೊಳ್ಳುವುದಕೋಸ್ಕರ ಸರ್ಕಾರಿ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಸೆಕ್ರೆಟರಿಯವರಿಗೆ ವಹಿಸಿಕೊಟ್ಟಿದ್ದಾರೆ. ಸಣ್ಣ ಕೈಗಾರಿಕೆಯ ಯೋಜನೆಯ ಅಭಿವೃದ್ಧಿ ಕಡೆ ಸಂಪೂರ್ಣ ಜವಾಬ್ದಾರಿಯನ್ನು ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ಗೆ ಕೊಟ್ಟಿದ್ದಾರೆ. ಆದ್ದರಿಂದಲೇ ಮಾನ್ಯ ಟಿ. ಚನ್ನಯ್ಯನವರು ಹೇಳಿದಹಾಗೆ ಮದ್ರಾಸಿನಲ್ಲಿ ಕೈಗಾರಿಕೆಗಳು ಚೆನ್ನಾಗಿ ಬೆಳೆಯುವುದಕ್ಕೆ ಒಳ್ಳೆಯ ಅವಕಾಶವಿದೆ.

ಇನ್ನು ಇಂಡಸ್ಟ್ರಿಯಲ್ ಎಸ್ಟೇಟ್ ಎಂಬ ಒಂದು ಮಹತ್ವ ಯೋಜನೆಯನ್ನು ಸರ್ಕಾರದವರು ಕೈಬಿಟ್ಟಿರುವುದು ಬಹಳ ಆಶ್ಚರ್ಯವಾದಂತಹ ಸಂಗತಿಯಾಗಿದೆ. ಪ್ರತಿರಾಜ್ಯದ ಜಿಲ್ಲೆ ಜಿಲ್ಲೆಯೊಳಗೆ ಈ ಎಸ್ಟೇಟುಗಳು ಬಹಳ ಮುಖ್ಯ ಪಾತ್ರವನ್ನು ವಹಿಸುವಂಥದ್ದು. ಇಂಥದನ್ನು ಕೈಬಿಟ್ಟಿರುವುದು, ತಿರಸ್ಕಾರ ಮಾಡಿರುವುದು ನೋಡಿದರೆ, ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಸರ್ಕಾರಕ್ಕೆ ನಿಜವಾಗಿಯೂ ಆಸಕ್ತಿಯಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇತರ ರಾಜ್ಯಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಖರ್ಚು ಮಾಡಿರುವ ಅಂಕಿ ಅಂಶಗಳನ್ನು ಹೇಳುತ್ತೇನೆ.

ಎರಡನೆಯ ಮತ್ತು ಮೂರನೆಯ ಪ್ಲಾನಿನಲ್ಲಿ ಸಣ್ಣ ಕೈಗಾರಿಕೆಗಳಿಗೋಸ್ಕರ ಖರ್ಚು ಮಾಡಿರುವ ಹಣ 191·47 ಲಕ್ಷ. ಆಂಧ್ರ ಪ್ರದೇಶ 580·05 ಲಕ್ಷ ರೂಪಾಯಿ. ಕೇರಳ 335·06 ಲಕ್ಷ. ಮಹಾರಾಷ್ಟ್ರ 421·09 ಲಕ್ಷ. ಮದ್ರಾಸ್ ಒಂದು ಕೋಟಿ ರೂಪಾಯಿ 1,350·02 ಲಕ್ಷ.

ಮೂರನೆಯ ಯೋಜನೆಯಲ್ಲಿ ಕೇಂದ್ರ ಸರ್ಕಾರದವರಿಂದ ಸಣ್ಣ ಕೈಗಾರಿಕೆಗಳಿಗೋಸ್ಕರ ತೆಗೆದುಕೊಂಡ ಹಣ :

ಮೈಸೂರು ಕೇವಲ 56·47 ಲಕ್ಷ. ಆಂಧ್ರ 133·55 ಲಕ್ಷ. ಕೇರಳ 70.65 ಲಕ್ಷ ಮಹಾರಾಷ್ಟ್ರ 58.02 ಲಕ್ಷ ಮದರಾಸ್ 330.73 ಲಕ್ಷ ರೂಪಾಯಿ ಸಾಲವನ್ನು ಕೇಂದ್ರದಿಂದ ಪಡೆದಿದೆ.

ಇನ್ನು ಇಂಡಸ್ಟ್ರಿಯಲ್ ಎಸ್ಟೇಟಿಗೋಸ್ಕರ ಮೈಸೂರು ಸರ್ಕಾರ ಖರ್ಚು ಮಾಡಿರುವುದು 105·56 ಲಕ್ಷ. ಆಂಧ್ರ ಪ್ರದೇಶ 341·32 ಲಕ್ಷ, ಕೇರಳ 148·37 ಲಕ್ಷ, ಮಹಾರಾಷ್ಟ್ರ 129·12 ಲಕ್ಷ ಖರ್ಚು ಮಾಡಿದೆ. ಮದ್ರಾಸ್ 641·82 ಲಕ್ಷ ಖರ್ಚು ಮಾಡಿದೆ. ಇವೆಲ್ಲದರಲ್ಲಿ ಮೈಸೂರು ದೇಶ ಹಿಂದುಳಿದಿದೆ.

ಇನ್ನು ಸ್ಮಾಲ್ ಸ್ಕೇಲ್ ಕೈಗಾರಿಕೆಗಳಿಗೆ ಮೂರನೆಯ ಪ್ಲಾನಿನಲ್ಲಿ ಸಾಲಗಳನ್ನು ಕೊಟ್ಟಿರುವಂಥದ್ದ ನೋಡೋಣ. ಮೈಸೂರು ಕೊಟ್ಟಿರುವಂತಹದು 21·45 ಲಕ್ಷ. ಆಂಧ್ರ 36·65 ಲಕ್ಷ. ಕೇರಳ 114·68 ಲಕ್ಷ. ಮಹಾರಾಷ್ಟ್ರ 73·13 ಲಕ್ಷ. ಮದ್ರಾಸ್ 148.62 ಲಕ್ಷ ಕೊಟ್ಟಿದೆ.

ಇನ್ನು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಕೆಲವು ಕಾಂಟ್ರಾಕ್ಟುಗಳನ್ನು ವ್ಯವಸ್ಥೆ ಮಾಡಿದೆ. ನಮ್ಮಲ್ಲಿ 15 ಪರ್‌ಸೆಂಟ್ ಹೆಚ್ಚಾಗಿದ್ದರೂ ಕೂಡ, ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ನಿಯಮವಿದ್ದರೂ ಕೂಡ ಇಲ್ಲಿ ಕೊಡಬೇಕಾದಂತಹ ಪ್ರೋತ್ಸಾಹವನ್ನು ಕೊಟ್ಟಿಲ್ಲ ಮತ್ತು ಅದರ ಅಂಕಿ ಅಂಶ ಈ ರೀತಿ ಇದೆ :

ಮೈಸೂರು	12,83,498	ರೂಪಾಯಿಗಳು—63ರಿಂದ 65ರವರೆಗೆ ಕೊಟ್ಟಿದೆ.
ಆಂಧ್ರ	14,39,264	...
ಕೇರಳ	65,43,102	ಒದಗಿಸಿಕೊಟ್ಟಿದೆ.
ಮಹಾರಾಷ್ಟ್ರ	603,47,058	
ಮದ್ರಾಸ್	1,07,64,790	

(ಶ್ರೀ ಎಚ್. ಬಿ. ಜ್ವಾಲನಯ್ಯ)

ಇದರಿಂದ ಮೈಸೂರು ಸಂಸ್ಥಾನ ಎಷ್ಟು ಹಿಂದುಳಿದಿದೆ ಎಂದು ನೋಡಬಹುದು. ಮತ್ತು ಇದರಿಂದ ಸರ್ಕಾರದ ನೀತಿ ನಿಯಮಗಳನ್ನು ನೋಡಬಹುದು. ಇವತ್ತಿನ ದಿವಸ ಇವೆಲ್ಲವನ್ನೂ ನೋಡಿದರೆ, ಸಣ್ಣ ಕೈಗಾರಿಕೆಗಳು ಅಧೋಗತಿಗೆ ಹೋಗಿದೆ ಎಂದು ಹೇಳಬಹುದು. ಒಬ್ಬ ಅರ್ಥ ಶಾಸ್ತ್ರಜ್ಞ ಈ ರೀತಿ ಹೇಳಿದ್ದಾನೆ :

> "Even a bankrupt industry can be turned into a goldmine if the persons at the helm of affairs have necessary experience and expert. A flourishing concern will dry up fast if the management is corrupt and inefficient."

ಈ ರೀತಿ ಹೇಳಿರುವುದು ನಮ್ಮ ಸರ್ಕಾರವನ್ನೇ ಉದ್ದೇಶಿಸಿ ಹೇಳಿರಬಹುದೆಂದು ನಾನು ತಿಳಿದಿದ್ದೇನೆ. ಸಣ್ಣ ನೀರಾವರಿಗಳು ದೇಶಕ್ಕೆ ಎಷ್ಟು ಅವಶ್ಯಕವೋ ಅಷ್ಟೇ ಸಣ್ಣ ಕೈಗಾರಿಕೆಗಳು ಅವಶ್ಯಕ. ಪಂಜಾಬ್ ರಾಜ್ಯಕ್ಕೆ ಯಾರಾದರೂ ಹೋಗಿ ನೋಡಿದರೆ ಗೊತ್ತಾಗುತ್ತದೆ, ರಸ್ತೆ ಮೊದಲಿನಿಂದ ಹಿಡಿದು ಕೊನೆಯುವರೆಗೂ ಎರಡು ಕಡೆಗಳಲ್ಲೂ ಸಹ ಸಣ್ಣ ಕೈಗಾರಿಕೆಗಳು ಹೆಚ್ಚು ಹೆಚ್ಚು ಇವೆ. ಅದೇ ನಮ್ಮ ಮೈಸೂರು ದೇಶದಲ್ಲ ಇಷ್ಟೊಂದು ವಿದ್ಯುಚ್ಛಕ್ತಿ, ಇದ್ದರೂ, ಬುದ್ಧಿವಂತರುಗಳು ಇದ್ದರೂ, ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದರೂ ಸಹ ಸಣ್ಣ ಕೈಗಾರಿಕೆಗಳು ಹೆಚ್ಚು ಹೆಚ್ಚು ಬೆಳೆಯುತ್ತಿಲ್ಲ. ಅದಕ್ಕೆ ಸರ್ಕಾರದವರು ತಕ್ಕ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಇದ್ದ ಸರ್ಕಾರ : That irresponsible Government was managed by responsible people but this responsible Government is managed by irresponsible people.

ಶ್ರೀಮತಿ ಚಂಪಾಬಾಯಿ ಬೋಗಳೆ (ಕಾಗವಾಡ್).—ಸನ್ಮಾನ್ಯ ಅಧ್ಯಕ್ಷರೇ, ಈ ವ್ಯವಸಾಯ ಇಲಾಖೆಯ ಮೇಲಿನ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತಾ ಕೆಲವು ರೈತರುಗಳ ಸಲುವಾಗಿ ಕೆಲವು ಸೂಚನೆಗಳನ್ನು ಸೂಚಿಸಲಿಕ್ಕೆ ನಿಂತಿರುತ್ತೇನೆ. ರೈತರಿಗೆ ವೇಳೆಗೆ ಸರಿಯಾಗಿ ಸಹಾಯವಾಗಬೇಕು. ವ್ಯವಸಾಯ ಪದ್ಧತಿಯನ್ನು ಆಧುನಿಕ ರೀತಿಯಲ್ಲಿ ಮುಂದುವರೆಸಬೇಕೆಂದು ಎಲ್ಲರೂ ಹೇಳಲಿಕ್ಕೆ ಹೊರಟಿದ್ದಾರೆ. ನನಗೆ ಗೊತ್ತಿರುವಂತೆ ಮೊದಲು ಸಗಣಿ ಗೊಬ್ಬರವನ್ನು ಹಾಕಿ ಒಂದು ಎಕರೆಗೆ 25 ಚೀಲ ಜೋಳವನ್ನು ರೈತರು ಬೆಳೆಯುತ್ತಿದ್ದರು. ಈಗ ಹೊಸಹೊಸ ಪದ್ಧತಿಯಂತೆ ಆಹಾರವನ್ನು ಬೆಳೆದರೂ ಸಹ, ದೇಶಕ್ಕೆ ಬೇಕಾಗುವಷ್ಟು ಆಹಾರದ ಉತ್ಪತ್ತಿಯಾಗುತ್ತಿಲ್ಲ. ಮಕ್ಕಳು ಹೆಚ್ಚಾಗುತ್ತಿದ್ದಾರೆ. ರೈತರುಗಳು ತಕಾವಿ ಸಾಲವನ್ನು ಕೇಳಿದರೆ, ಅದನ್ನು ಕೊಡಲು 3 ರಿಂದ 6 ತಿಂಗಳ ಕಾಲವನ್ನು ತೆಗೆದುಕೊಳ್ಳುತ್ತಾರೆ. ಆ ರೀತಿ ನಿಧಾನವಾಗಿ ಸಾಲವನ್ನು ಕೊಟ್ಟರೆ ಅವರು ಬೀಜ ಗೊಬ್ಬರವನ್ನು ತೆಗೆದುಕೊಳ್ಳುವುದು ಯಾವಾಗ, ಒಡ್ಡು ಹಾಕುವುದು ಯಾವಾಗ ಎಂದು ಕೇಳುತ್ತೇನೆ. ಸರ್ಕಾರದವರು ಈ ಬಗ್ಗೆ ಒಂದು ಗುರಿ ಇಟ್ಟುಕೊಂಡು, ರೈತರಿಗೆ ಯಾವ ಕಾಲಕ್ಕೆ ಬೀಜ, ಗೊಬ್ಬರಗಳು ಬೇಕಾಗುತ್ತದೋ ಆ ಕಾಲಕ್ಕೆ ಸರಿಯಾಗಿ ಸಾಲವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂಬುದಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಸಾಲ ಕೊಡುವ ಬಗ್ಗೆ ಅಕ್ಟೋಬರ್ ತಿಂಗಳಲ್ಲಿ ಒಂದು ಯೋಜನೆ ಮಾಡಿ ಜವನರಿ ಅಥವಾ ಫೆಬ್ರುವರಿ ತಿಂಗಳಲ್ಲಿ ಸಾಲ ಕೊಡುವ ವ್ಯವಸ್ಥೆಯಾಗಬೇಕು. ರೈತರಿಗೆ ಸಕಾಲಕ್ಕೆ ಬೇಕಾಗುವ ಅನುಕೂಲವನ್ನು ಮಾಡಿಕೊಡುವಂತೆ ವ್ಯವಸಾಯ ಇಲಾಖೆಯವರಿಗೆ ಸರ್ಕಾರದವರು ತಿಳಿಸಬೇಕು. ಈಗ ರೈತರು ಸಾಲಕ್ಕೆ ಅರ್ಜಿ ಹಾಕಿದರೆ, ಅದು ತಾಲ್ಲೂಕ್ ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಬಂದು ತೀರ್ಮಾನವಾಗುವುದರೊಳಗೆ ಬಹಳ ನಿಧಾನವಾಗಿ ಅದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಇವತ್ತಿನದಿವಸ ರೈತರ ಕೊಲೆಯಾಗುತ್ತಿದೆಯೆಂದು ಹೇಳಬಹುದು. ರೈತರು ಬೀಜ, ಗೊಬ್ಬರಕ್ಕೆ ಅರ್ಜಿ ಹಾಕಿಕೊಂಡರೆ 10-15 ರೂಪಾಯಿಗಳ ಲಂಚದ ರೂಪದಲ್ಲಿ ಖರ್ಚು ಮಾಡಬೇಕಾಗಿದೆ. ಕಳ್ಳಬಜಾರ್‌ನಲ್ಲಿ ಬೀಜ ಗೊಬ್ಬರ ಮಾರಾಟವಾಗುತ್ತಿದೆ. ರೈತರಿಗೆ ಬೇಕಾದಷ್ಟು ಬೀಜ ಗೊಬ್ಬರ ನ್ಯಾಯವಾಗಿ ಸಿಗುತ್ತಿಲ್ಲ. ಈ ಪರಿಸ್ಥಿತಿಗಳನ್ನು ನಿವಾರಣೆ ಮಾಡುವುದಕ್ಕೆ ನಮ್ಮ ಸರ್ಕಾರದವರು ಹೆಚ್ಚು ಗಮನಕೊಡಬೇಕೆಂದು ಕಳಕಳಿಯಿಂದ ನಿವೇದನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದ ಕೈಗಾರಿಕೆಗಳನ್ನು ನಮ್ಮ ಬೆಳಗಾಂ ಏರಿಯಾದಲ್ಲಿ ಅಂದರೆ ಮಹಾರಾಷ್ಟ್ರ ಬಾರ್ಡರ್ ಬಳಿ ಹೆಚ್ಚಿಗೆ ಪ್ರಾರಂಭ ಮಾಡಿಲ್ಲ. ಆ ಭಾಗದಲ್ಲಿ ಹೆಚ್ಚು ಶೇಂಗ ಮತ್ತು ಕಡಲೆ ಮತ್ತೆ ತೊಗರಿಯನ್ನು ಬೆಳೆಯುತ್ತಾರೆ. ಆ ಭಾಗದಲ್ಲಿ ನಮ್ಮ ಜಿಲ್ಲೆಯಲ್ಲಿ 20 ಲಕ್ಷ ಜನರಿದ್ದಾರೆ. ಇವರಿಗೆ ಉದ್ಯೋಗವಿಲ್ಲದೆ 10 ಸಾವಿರ ಜನರು ಇದ್ದಾರೆ ಮತ್ತು ಭಿಕಾರಿ ಆಗಿದ್ದಾರೆ, ಅವರಿಗೆ ಉದ್ಯೋಗಗಳನ್ನು ಕೊಡುವುದರ

ನೆಲುವಾಗಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಶುರುಮಾಡಬೇಕು. ಅಲ್ಯೂಮಿನಿಯಂ ಫ್ಯಾಕ್ಟರಿ ಶುರು ಮಾಡಿದ್ದೀರಿ. ಬೇರೆ ಊರಿನ ಜನರನ್ನು ತಂದು ಕೆಲಸಕ್ಕೆ ಹಚ್ಚುತ್ತಿದ್ದೀರಿ. ಅಲ್ಲಿ ಇದ್ದ ಜನರಿಗೆ ಉದ್ಯೋಗದಂಥೆಯನ್ನು ಕಲ್ಪಿಸಿಕೊಡಿರಿ. ಅಲ್ಲಿಯ ಜನರಿಗೆ ಅವರಿಗೆ ಸರಿಯಾದ ಉದ್ಯೋಗಗಳಿಲ್ಲ. ಸರ್ಕಾರದವರು ಆ ಭಾಗ ಮಹಾರಾಷ್ಟ್ರಕ್ಕೆ ಹೋಗುತ್ತದೆಂದು ತಿಳಿದು ಯಾವ ಸಣ್ಣ ಕೈಗಾರಿಕೆ ಗಳನ್ನು ಸಹ ಪ್ರಾರಂಭಮಾಡಿಲ್ಲ. ಸರ್ಕಾರದವರು ಆ ರೀತಿ ಅಂಜುವುದು ಬೇಡ, ಆ ಭಾಗ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲವೆಂದು ನಾನು ಹೇಳುತ್ತೇನೆ ಇನ್ನು ಮುಂದೆ ಖಾಸಗೀಯವರು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಭಾಗದಲ್ಲಿ ಹೆಚ್ಚು ಶೇಂಗ ಬೆಳೆಯುವುದರಿಂದ, ಎಣ್ಣೆ ತೆಗೆಯುವ ಗಾಣವನ್ನು ಅಲ್ಲಿ ವ್ಯವಸ್ಥೆಮಾಡ ಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳಲು ಇಚ್ಛೆಪಡುತ್ತೇನೆ. ಬೆಳಗಾವಿ ಜಿಲ್ಲೆಯಲ್ಲಿಯ ಚಿಕ್ಕೋಡಿ, ಹುಕ್ಕೇರಿ ಮತ್ತು ಅಥಣಿ, ಸರಕಾರದವರು ಸ್ವಂತ ಎಣ್ಣೆ ತೆಗೆಯುವ ಕಾರ್ಖಾನೆಯನ್ನು ತೆಗೆದು ಜನರಿಗೆ ಉದ್ಯೋಗ ದಂಥೆಗಳಿಗೆ ಅನುಕೂಲಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಇನ್ನು ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಚಿಕ್ಕೋಡಿಯಲ್ಲಿ ಬ್ರೊಷ್ ಕಸ್ತೂರ್ ಬಾ ಸೊಸೈಟಿ ಇದೆ. ಇಲ್ಲಿ ಗೊಬ್ಬರ ತಯಾರು ಮಾಡುತ್ತಾರೆ. ಈ ಸೊಸೈಟಿಯನ್ನು ಹೆಣ್ಣುಮಕ್ಕಳು ನೋಡಿಕೊಳ್ಳುತ್ತಿದ್ದಾರೆ. ಇವರಿಗೆ ಆಫೀಸನ್ನು ಕಟ್ಟಿಸಿಕೊಟ್ಟಿದ್ದಾರೆ. ಬೋರಿಂಗ್ ಮಿಷನ್ ಕೊಟ್ಟಿದ್ದಾರೆ. ಈ ಸೊಸೈಟಿಯವರು ಹಣವನ್ನು ಸಾಲವಾಗಿ ಕೇಳಿದ್ದಾರೆ. ಇದುವರೆಗೆ ಕೊಟ್ಟಿಲ್ಲ. ಈ ಸೊಸೈಟಿಗೆ ಪ್ರೋತ್ಸಾಹ ಕೊಟ್ಟು, ಅವರು ಕೇಳಿರುವ ಸಾಲವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ನಮ್ಮಲ್ಲಿ ಅಕ್ಕೋಳಲೇಬರ್ ಕೋಆಪರೇಟಿವ್ ಸೊಸೈಟಿ ಎಂಬುದು ಇದೆ. ಇಲ್ಲಿಯೂ ಸಹ ಗೊಬ್ಬರ ತಯಾರು ಮಾಡುತ್ತಾರೆ. ಈಗ ರೈತರಿಗೆ ಹೆಚ್ಚು ಹೆಚ್ಚು ಗೊಬ್ಬರದ ಅವಶ್ಯಕತೆ ಯಿರುವುದರಿಂದ, ಇಂತಹ ಕಾರ್ಖಾನೆಗಳಿಗೆ ಬೇಕಾಗುವ ಎಲ್ಲಾ ರೀತಿಯ ಸಹಾಯವನ್ನು ಸರ್ಕಾರ ದವರು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಶೇಂಗ ಹೆಚ್ಚು ಬೆಳೆಯುವುದರಿಂದ ಒಂದು ಎಣ್ಣೆ ತೆಗೆಯುವ ಕಾರ್ಖಾನೆಯನ್ನು ತೆರೆದು ಅನುಕೂಲಮಾಡಿಕೊಡಬೇಕು. ತಾರತಗಾ ಕೋಆಪರೇಟಿವ್ ಸೊಸೈಟಿಯವರು ಶೇಂಗ ಹೆಚ್ಚು ಹೆಚ್ಚು ಬೆಳೆಯುತ್ತಿದ್ದಾರೆ. ಇವರು ಸಾಲಕ್ಕಾಗಿ ಅರ್ಜಿ ಹಾಕಿಕೊಂಡಿದ್ದಾರೆ. ಇವರಿಗೆ ಸಾಲವನ್ನು ಕೊಡಿಸಿಕೊಡಬೇಕೆಂದು ಹೇಳಿ, ಇಷ್ಟು ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. CHAIRMAN (SRI S. D. KOTHAWALE) in the Chair]

† SRI N. B. SIRDESAI.—Mr. Speaker, I rise to oppose the Demands on today's List of Business. Really speaking one must feel glad to speak on the Demand on General Administration; but, I feel a bit dejected and disappointed because of the slack, improper and unjust administration of this Government. I would, of course, like to point out the few defects, major and minor, in the administration and thereafter I would make certain suggestions for the improvement of the administration.

Sir, the General Administration is just like backbone of the State. It is just like a pivot around which all the Demands stand focussed. I have come in contact with many persons in the State and during the course of the discussion with them, when I put questions to them as to whether they were happy under the sway of the Government and whether the administration is fair, the reply from each person was, "No" and emphatic "no" Why this dissatisfaction? Have the rulers tried to find out the reason for this dissatisfaction? I think they must be under the impression that they need not bother about it. In democracy people do have respect for democratic Government, but at the same time the Government must understand what the people expect of them and if the people develop disrespect towards the Government, then it goes without saying that there must be something wrong with the

(SRI N. B. SIRDESAI)

administration of the Government. As regards slackness and the improper attitude of the Government, thousand and one instances can be quoted. For the present, I shall quote a few instances.

The papers are inordinately delayed by all the Departments and neither the Ministers nor the Heads of Departments try to expedite matters. They never dispose of pending matters and set matters right. Even at the Government level it is deplorable to note that matters are delayed. The touring officers of the Government are always found on tour and they rarely remain at the headquarters with the result that people going to meet them cannot see them and get their grievances redressed. So, I request the Government to issue instructions to the Heads of Departments or the touring officers to remain at the headquarters on certain days in a month to enable people to meet them and get their grievances redressed. Because of this, discontent has arisen among the people.

People stage demonstrations in order to put forth their grievances before the Government, and if the police are ordered to make lathi charges against peaceful demonstrators, then does it not amount to injustice and inhuman treatment of the people? If they follow these means, how can the Government win the confidence of the people and how can they expect loyalty and respect from the people? The Government must first deserve respect and then desire. This Government does not deserve at all and so they have no right to desire.

The Government are actually exacting paddy from the cultivators especially from the cultivators of the border area and it is no wonder that because of this injustice the people are led to believe that under the the guise of democracy dictatorship is let loose on the people.

There is no uniformity in the administration, There are different tenancy laws in different areas in the State. There are different Prohibition Laws in the different areas. The laws and rules and regulations of the State must be such that there would be fair relationship between the land owners and the tenants and the employers and the employees and it will safeguard the rights which are conferred upon them by the Constitution of India. In this regard Government have issued a circular that in order to safeguard the linguistic interests of the minorities all the notices and publicity material should be published in the language of the minorities but it is not being done. So, the minority people are finding it difficult and injustice has been done to them. The language question is standig in the way of recruitment and it should not be a bar to the recruitments of minorities in Government service.

Hundreds of writ petitions are being filed against this Government. Does it not indicate the dissatisfaction against the Government? The

number of Opposition party Members is increasing ; it also indicates that there is dissatisfaction against the ruling party. The executive is likely to stray away from its path and it is for the people and the judiciary to correct it and bring it back to the right path. By democratic ways such as staging demonstrations or by launchig satyarahas the people try to put forth their grievances before the Ministers and it is the first and foremost duty of the Ministers to approach the demonstrators, listen to their grievances and try to redress their grienances.

It is well and good that the Government have raised the retiring age in the case of primary teachers and it should not adopt a discriminatory attitude in the case of other Government officials. I therefore request the Government to raise the retiring age in the case of other Government officials also.

About gun licenses, I would like to point out here that the applications recommended by the revenue authorities are being rejected by the police authorities. The same applications if they are recommended by the police authorities are being rejected by the revenue authorities.

So by disposing of thes applications according to their whims and fancies, they are making a farce of the disposal of these applications.

I would like to point out to the House that undue expenditure is being incurred by this Government and I would like to suggest certain ways and means to curtail their expenditure by abolishing certain posts and setting up new industries.

The pay Commission is taking much time to offer its remarks and thereby the Government is incurring much expenditure over this. A report should be called for by the Government and it should be closed down as early as possible. I think another Vigilance Commission will have to be appointed to exercise Vigilance over this commission because corruption is not curtailed nor is it uprooted. The Demand is for Rs. 9,55,000 and it is a waste. The establishment attached to the Palace of the Maharaja of Mysore is much more than is necessary. The Demand is for Rs. 54,000 and this expenditure should also be curtaild by the Government. The expenditure connected with the Official Language Commission it Rs. 1,20,000. How long it is to be continued, God alone knows. I do not think it is necessary and Government should curtail the expenditure incurred on this. Office of the Special Commissioner for the Government of Mysore in New Delhi : The expenditure for this demand is Rs. 67,000. I think this post is not at all necessary and the Government can curtail this expenditure also.

On Mysore Dasara Festivities, the Government expenditure is Rs. 6 lakhs. I think this is a very high expenditure which is being incurred by the Government and it should be curtailled.

4-00 P.M.

The Government of India has closed down the Flsheries Extension Unit, but this Government continues this Extension Unit. I think

(SRI N. B. SIRDESAI)

it is a waste of money and if it is closed down it would result in a saving of another Rs. 50,000.

Then I would like to ask whether Government is aiming at decentralisation of power. I doubt it because the role of Local Bodies is that of policy maker, but there is no provision in the Mysore Village Panchayats and Local Boards Act, 1959, for decentralisation of power.

As regards agriculture ours is a predominantly agricultural country and so I fail to understand why we are required to import foodgrains from foreign countries. The United States of America having only 10 per cent agricultural population is surplus in foodgrains whereas our country is very much short of foodgrains. I think this is because of the faulty policies and the plan system of the Government. The Government have not succeeded in the implementation of the plans. As all of us know, the progress of an agricultural nation depends upon the extent of irrigation facilities, the use of hybrid seeds, improvement implements and improved methods of cultivation, but our Government have failed in these matters. That is why there is no increase in food production. The Hon'ble Finance Minister has said in his budget speech that in a few years time the districts of Shimoga, Chitradurga Bellary and Raichur would become the granary of the State which would meet the demands of the whole State. He has gone further and said that they would supply the demands of other States also. If it is so, I would like to request Government to pay a little more attention to these districts and develop them from the point of view of food production and lessen the burden on the people in the border area whose paddy stock is being exploited by this Government by unjust methods.

Then, Sir, it is reported by the Agricultural Department that this year 63,850 acres would be brought under high-yielding varieties in the 5 districts of Bangalore Division. If it is so, I think there would be no shortage of foodgrains if these districts of Shimoga, Chitradurga, Bellary and Raichur also are very well developed. If the figures about the Bangalore Division are correct, there would not be any shortage of foodgrains in our State and so the Government need not be after the poor people in the border area.

I wanted to speek on Agriculture and Industry, but as there is no time, I thank the Chair and resume my seat.

ಶ್ರೀ ಎಸ್. ರುದ್ರಪ್ಪ (ಚಿತಾಪುರ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ ಬೇಡಿಕೆಗಳನ್ನು ಸ್ವಾಗತಿಸುತ್ತಾ ಎರಡು ಮೂರು ವಿಷಯಗಳನ್ನು ಹೇಳಬೇಕೆಂದು ಇದ್ದೇನೆ. ಹೋದ ವರ್ಷ ಈ ಪ್ರದೇಶದ ಕೆಲವು ಭಾಗಗಳಲ್ಲಿ ಸರ್ಕಾರದವರು ಏರಿಯಲ್ ಸ್ಪ್ರೇ ಮಾಡಿದರು, ನಮ್ಮ ಭಾಗದಲ್ಲಿ ಕೂಡ ಸೇಡಂ, ಚಿತಾಪುರ ತಾಲ್ಲೂಕಿನಲ್ಲಿ ಏರಿಯಲ್ ಸ್ಪ್ರೇ ಮಾಡಿದರು. ಅಷ್ಟೊಂದು ಲಾಭವಾಗಿಲ್ಲ. ಯಾವ ಪ್ರಮಾಣದಲ್ಲಿ ಲಾಭವಾಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗಿಲ್ಲ, ಏಕೆಂದರೆ ಏರಿಯಲ್ ಸ್ಪ್ರೇ ಮಾಡಬೇಕಾಗಿದ್ದದ್ದು ಅಕ್ಟೋಬರ್ ಅಥವಾ ಸೆಪ್ಟಂಬರ್‌ನಲ್ಲಿ ಮಾಡಬೇಕಾಗಿತ್ತು, ಅದನ್ನು ಆಗ ಮಾಡದೇ ತಡವಾಗಿ ಸುಮಾರು ನವೆಂಬರ್‌ನಲ್ಲಿ ಮಾಡಿದ್ದರಿಂದ ಅಷ್ಟೊಂದು ಫಲಕಾರಿಯಾಗಲಿಲ್ಲ ಎಂದು ಇವತ್ತಿನ ದಿನ ಹೇಳಬಯಸುತ್ತೇನೆ. ಆದ್ದರಿಂದ ಸರ್ಕಾರದವರು ಮುಂಜಾಗ್ರತೆ ಹೊಂದಿ ಈಗಲೇ ತಾಲ್ಲೂಕು ಬೋರ್ಡುಗಳಿಗೆ ಬರೆದು ಏರಿಯಲ್

ಸ್ಪ್ರೇ ಸುಮಾರು ಅಕ್ಟೋಬರ್ ತಿಂಗಳಿನಲ್ಲೇ ಆಗುವಂತಹ ಏರ್ಪಾಡನ್ನು ಮಾಡಬೇಕೆಂದು ಈ ಮೂಲಕ ನಾನು ಸರ್ಕಾರದವರಿಗೆ ಸಲಹೆಯನ್ನು ಕೊಡುತ್ತೇನೆ.

ಎರಡನೆಯ ವಿಷಯ ಎಂದರೆ ಈಗಾಗಲೇ ಸರ್ಕಾರದವರು ಜಿಲ್ಲಾ ಮಟ್ಟದಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟನ್ನು ಪುನರ್‌ವ್ಯವಸ್ಥೆ ಮಾಡಿದ್ದಾರೆ. ಅಂದಮಾತ್ರಕ್ಕೆ ರೈತರಿಗೆ ಸಕಾಲದಲ್ಲಿ ಸುಧಾರಿಸಿದ ಬೀಜ, ಸುಧಾರಿಸಿದ ಗೊಬ್ಬರ ಮತ್ತು ಇನ್ನಿತರ ಸೌಕರ್ಯಗಳು ಮುಟ್ಟುತ್ತವೆ ಎಂದು ತಿಳಿದುಕೊಳ್ಳಬಾರದು. ಏಕೆಂದರೆ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳು ಪ್ರತಿಯೊಂದು ಹಳ್ಳಿಗೂ ಹೋಗಿ ಅಲ್ಲಿರತಕ್ಕ ರೈತನ ಸಂಪರ್ಕ ಹೊಂದಿ ರೈತನೊಡನೆ ಬೆರೆತು ಅವರ ಸಂಗಡ ಚರ್ಚೆಮಾಡಿ ಅವರಿಗೆ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಒಂದೊಂದು ಜಿಲ್ಲೆಗೆ ಒಬ್ಬ ಡೆಪ್ಯೂಟಿ ಡೈರೆಕ್ಟರನ್ನು ಹಾಕಿದ್ದೀರಿ, ಒಂದು ರೆವಿನ್ಯೂ ಸಬ್‌ಡಿವಿಜನ್‌ಗೆ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರನ್ನು ಹಾಕಿದ್ದೀರಿ ಮತ್ತು ಜಿಲ್ಲೆಗೆ ಒಬ್ಬರು ಪೆಸ್ಟ್ ಕಂಟ್ರೋಲ್ ಆಫೀಸರನ್ನು ಹಾಕಿದ್ದೀರಿ. ಆದರೆ ಜಿಲ್ಲಾ ಮಟ್ಟದಲ್ಲಿ ಸಿಬ್ಬಂದಿಯನ್ನು ಹೆಚ್ಚು ಮಾಡುವುದಲ್ಲದೆ, ತಾಲ್ಲೂಕು ಮತ್ತು ರೆವಿನ್ಯೂ ಸರ್ಕಲ್ ಮಟ್ಟದಲ್ಲಿ ಹೆಚ್ಚು ಮಾಡಬೇಕೆಂದು ಅನಿಸುತ್ತದೆ. ಏಕೆಂದರೆ ಎಷ್ಟೋ ಹಳ್ಳಿಗಳಲ್ಲಿ ರೈತರಿಗೆ ಯಾವ ರೀತಿಯಲ್ಲಿ ಸುಧಾರಿಸಿದ ಗೊಬ್ಬರವನ್ನು ಉಪಯೋಗಿಸಬೇಕು, ಯಾವ ಪ್ರಮಾಣದಲ್ಲಿ ಅಮೋನಿಯಂ ಸಲ್ಫೇಟನ್ನು ಉಪಯೋಗ ಮಾಡಬೇಕು, ಯಾವ ಪ್ರಮಾಣದಲ್ಲಿ ನೈಟ್ರೋಜಿನಸ್ ಫರ್ಟಿಲೈಸರ್ಸ್ ಉಪಯೋಗ ಮಾಡಬೇಕು ಮತ್ತು ಅದೇ ರೀತಿಯಲ್ಲಿ ಸರ್ಕಾರದವರು ಕೊಡತಕ್ಕ ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸನ್ನು ಯಾವ ಪ್ರಮಾಣದಲ್ಲಿ ಉಪಯೋಗಿಸಬೇಕು, ಯಾವ ಪ್ರಮಾಣದಲ್ಲಿ ನೀರು ಹಾಕಬೇಕು ಎಂಬುದೂ ಕೂಡ ಅವರಿಗೆ ಅನುಭವ ಇಲ್ಲ. ಆದ್ದರಿಂದ ಅಂತಹ ಅನುಭವ ಪ್ರತಿಯೊಬ್ಬ ರೈತರಿಗೂ ಕೂಡ ಮುಟ್ಟಬೇಕಾಗಿದ್ದರೆ, ತಾಲ್ಲೂಕು ಮಟ್ಟದಲ್ಲಿ ಮತ್ತು ರೆವಿನ್ಯೂ ಸರ್ಕಲ್ ಮಟ್ಟದಲ್ಲಿ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕಾದೀತು. ನನ್ನ ಸಲಹೆ ಏನೆಂದರೆ ಪ್ರತಿಯೊಂದು ರೆವಿನ್ಯೂ ಸರ್ಕಲ್‌ಗೂ ಒಬ್ಬ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರನ್ನು ನೇಮಕ ಮಾಡಬೇಕು. ಅವನ ಕೈ ಕೆಳಗೆ ಸುಮಾರು 3–4 ಮಂದಿ ಗ್ರಾಮಸೇವಕರನ್ನು ಕೊಡಬೇಕು, ಇದೇ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಒಬ್ಬ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಆಫೀಸರನ್ನು ನೇಮಕ ಮಾಡಬೇಕು, ಅವರು ಪ್ರತಿಯೊಂದು ತಾಲ್ಲೂಕಿನಲ್ಲೂ ರೈತರ ಹತ್ತಿರ ಹೋಗಿ ಅವರೊಂದಿಗೆ ಬೆರೆತು, ಸಂಪರ್ಕ ಹೊಂದಿ ಅವರ ಕುಂದುಕೊರತೆಗಳನ್ನು ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಆದ್ದರಿಂದ ಬರೇ ಜಿಲ್ಲಾ ಮಟ್ಟದಲ್ಲಿ ಅಗ್ರಿಕಲ್ಚರಲ್ ಆಫೀಸರು ಅಥವಾ ಅಗ್ರಿಕಲ್ಚರಲ್ ಸಿಬ್ಬಂದಿ ಹೆಚ್ಚು ಮಾಡುವುದಲ್ಲದೆ, ತಾಲ್ಲೂಕು ಮಟ್ಟದಲ್ಲಿ ಮತ್ತು ರೆವಿನ್ಯೂ ಸರ್ಕಲ್ ಮಟ್ಟದಲ್ಲಿ ಆಫೀಸರು ಮತ್ತು ಸಿಬ್ಬಂದಿಯನ್ನು ಹೆಚ್ಚು ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಮೂರನೆಯದಾಗಿ ಸರ್ಕಾರದವರು ಸಾಯಿಲ್ ಕನ್‌ಸರ್ವೇಷನ್ ಸ್ಕೀಂ ತೆಗೆದುಕೊಂಡಿದ್ದಾರೆ. ಆ ಪ್ರೋಗ್ರಾಂಗೆ ಇನ್ನೂ ಮಹತ್ವದ ಗಮನವನ್ನು ಕೊಡಬೇಕು. ಎಷ್ಟು ಪ್ರಾಮುಖ್ಯತೆಯನ್ನು ಅದಕ್ಕೆ ಕೊಡಬೇಕಾಗಿತ್ತೊ ಅಷ್ಟು ಕೊಟ್ಟಿಲ್ಲ ಮತ್ತು ಆ ಪ್ರೋಗ್ರಾಂ ಎಷ್ಟು ವೇಗದಿಂದ ಎಷ್ಟು ತ್ವರಿತವಾಗಿ ಆಗಬೇಕಾಗಿತ್ತೊ ಅಷ್ಟು ಆಗಿಲ್ಲ, ಪ್ರತಿವರ್ಷ ಒಂದು ಲಕ್ಷ ಎಕರೆ ಭೂಮಿಗೆ ಒಡ್ಡು ಹಾಕುವ ಕೆಲಸ ತೆಗೆದುಕೊಂಡಿದ್ದಾರೆ, ಈ ಕೆಲಸ ಇನ್ನೂ ಹೆಚ್ಚು ವೇಗದಲ್ಲಿ ಸರ್ಕಾರದಿಂದ ನಡೆಯತಕ್ಕದು ಎಂದು ಹೇಳುತ್ತೇನೆ. ಸುಮಾರು ಒಂದು ವರ್ಷಕ್ಕೆ ಮೂರು ಅಥವಾ ಐದು ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ಒಡ್ಡು ಹಾಕುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಇನ್ನು ಮೂರನೇ ಯೋಜನೆ ಮುಗಿದು ಇದ್ದರೂ ಕೂಡ ಸಾಯಿಲ್ ಕನ್‌ಸರ್‌ವೇಷನ್‌ಗಾಗಿ ಸುಮಾರು ಐದು ಲಕ್ಷದಷ್ಟು ಖರ್ಚಿನಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಮಾಡಬೇಕೆಂದು ಇದ್ದರೂ ಅಷ್ಟು ಹಣವನ್ನೂ ಖರ್ಚು ಮಾಡಲಿಕ್ಕೆ ಆಗಲಿಲ್ಲ. ಸುಮಾರು ಮೂರು ಲಕ್ಷದಷ್ಟು ಹಣ ಮಾತ್ರ ಖರ್ಚು ಮಾಡಿದ್ದಾರೆ. ಆದರೆ ಇವರ ಟಾರ್ಜೆಟ್ ಇದ್ದು ಸುಮಾರು ನಾಲ್ಕು ಲಕ್ಷ ಖರ್ಚು ಮಾಡಬೇಕೆಂದು ಇತ್ತು. ಆ ಹಣವನ್ನೂ ಕೂಡ ಖರ್ಚು ಮಾಡಲಾಗಲಿಲ್ಲ. ಇದರ ಬಗ್ಗೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿರುವ ವ್ಯವಸಾಯ ಇಲಾಖಾಧಿಕಾರಿಗಳನ್ನು ಕೇಳಿದರೆ ಅವರು ಇವೆಲ್ಲಾ ಕಾರ್ಯಕ್ರಮಗಳನ್ನು ಮಾಡಲು ನಮ್ಮಲ್ಲಿ ಸಾಕಷ್ಟು ಫೀಲ್ಡ್ ಅಸಿಸ್ಟೆಂಟರುಗಳಿಲ್ಲ ಮತ್ತು ಫೀಲ್ಡ್ ವರ್ಕರುಗಳೂ ಇಲ್ಲ ಇದರಿಂದಾಗಿ ಸಾಕಷ್ಟು ಕೆಲಸಗಳನ್ನು ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದರು. ನಾನು ಈ ದೃಷ್ಟಿಯಿಂದ ಸರಕಾರಕ್ಕೆ ಸಲಹೆ ಕೊಡುವುದು ಅಗ್ರಿಕಲ್‌ಚರು ಪ್ರೊಡಕ್ಷನ್ನು ನಿಜವಾಗಿಯೂ ಹೆಚ್ಚಾಗಬೇಕಾಗಿದ್ದರೆ ರೈತರ ಏಳಿಗೆಯೂ ಆಗಬೇಕಾಗಿದ್ದರೆ ಭೂಮಿಯಲ್ಲಿರತಕ್ಕ ಮಾಯಿಸ್ಚರು ಹಾಗೂ ಫರ್ಟಿಲಿಟಿ ಉಳಿಯಬೇಕಾಗಿದ್ದರೆ ಸಾಯಿಲ್ ಕನ್‌ಸರ್‌ವೇಷನ್ ಪ್ರೋಗ್ರಾಂ ಮಹತ್ವ ಕೊಡಬೇಕು ಎಂದು ಹೇಳುತ್ತೇನೆ. ಈಗ ಯಾವ ವೇಗದಲ್ಲಿ ಆಗಿರತಕ್ಕ ಕೆಲಸಗಳು ಆಗುತ್ತಿವೆಯೋ ಆ ವೇಗದ ಟೆಂಪೋವನ್ನು ಇನ್ನೂ ಹೆಚ್ಚು ಮಾಡಬೇಕೆಂದು ಸರಕಾರಕ್ಕೆ ಇಲ್ಲಿ ಸಲಹೆ ಮಾಡುತ್ತೇನೆ.

(ಶ್ರೀ ಎಸ್. ರುದ್ರಪ್ಪ)

ಇನ್ನು ನಮ್ಮ ರಾಜ್ಯಕ್ಕೆ ಅಗ್ರಿಕಲ್ಚರು ಡೈರೆಕ್ಟರವರು ಹೊಸದಾಗಿ ಬಂದಿದ್ದಾರೆ. ಇವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಇವರು ಈಗಾಗಲೇ ಗುಲ್ಬರ್ಗಾ, ಬೀದರು ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿಬಂದಿದ್ದಾರೆ. ಇವರು ಬಂದ ಕಾಲದಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಅಲ್ಲಿನ ರೈತರ ಸಂಪರ್ಕ ಬೆಳೆಸಿದಾಗ ಅವರ ಮುಂದೆ ರೈತರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವು ಅಲ್ಲಿಗೆ ಒಂದು ಟ್ರಾಕ್ಟರ್ ಯೂನಿಟ್ಟನ್ನು ಕೊಡಿಸುವುದು ಮತ್ತು ಬುಲ್ ಡೋಜರು ಯೂನಿಟ್ಟನ್ನು ಕೊಡಿಸಿಕೊಡಬೇಕೆಂದೂ ಕೇಳಿದ್ದಾರೆ ಮತ್ತು ಆಗ ಬಂದಿದ್ದ ಇಲಾಖಾ ಡೈರೆಕ್ಟರವರು ಇದನ್ನು ಕೊಡಿಸಿ ಕೊಡುವುದಾಗಿ ಆಶ್ವಾಸನೆಯನ್ನೂ ಅಲ್ಲಿ ಜನತೆಗೆ ಕೊಟ್ಟು ಬಂದಿದ್ದಾರೆ. ಮತ್ತು ಇಲಾಖಾ ಅಧಿಕಾರಿಗಳು ಇಲ್ಲಿನ ಜನತೆಯ ಆಶೋತ್ತರಗಳನ್ನು ತೆಗೆದುಕೊಂಡು ಚರ್ಚೆಮಾಡಿ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಆದುದರಿಂದ ನಾನು ಅಧ್ಯಕ್ಷರ ಮೂಲಕ ಇಲ್ಲಿ ತಿಳಿಸುವುದೇನೆಂದರೆ ಅಧಿಕಾರಿಗಳು ಎಲ್ಲಿಯೇ ಆಗಲೀ ಪ್ರವಾಸ ಬಂದಮೇಲೆ ಅಲ್ಲಿ ಆಶ್ವಾಸನೆಗಳನ್ನು ಕೊಟ್ಟಮೇಲೆ ಅವನ್ನು ಪೂರ್ತಿ ಮಾಡಿಕೊಡಬೇಕೆಂದು ಈ ಸಮಯದಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ನಾಲ್ಕನೆಯದು ಎಂದರೆ ರಾಯಚೂರು ಜಿಲ್ಲೆಯಲ್ಲಿ ರೈತರ ಬೇಡಿಕೆ ಒಂದು ಅಗ್ರಿಕಲ್ಚರ್ ಕಾಲೇಜಿಗಾಗಿ ಇದೆ. ಇಲ್ಲಿ ಅಗ್ರಿಕಲ್ಚರು ಕಾಲೇಜನ್ನು ಸ್ಥಾಪಿಸಬೇಕೆಂದು ಬಹುದಿನಗಳಿಂದಲೂ ಬೇಡುತ್ತಲೇ ಬಂದಿದ್ದಾರೆ. ಇದುವರೆಗೂ ಇಲ್ಲಿನ ಜನರ ಆಕಾಂಕ್ಷೆಗಳು ಈಡೇರಲಿಲ್ಲ. ಈಗಲಾದರೂ ಸರಕಾರದವರು ಇದನ್ನು ಪೂರ್ತಿ ಮಾಡಿಕೊಡಬೇಕೆಂದು ಮತ್ತು ಇಲ್ಲಿ ಒಂದು ಅಗ್ರಿಕಲ್ಚರು ಕಾಲೇಜನ್ನು ಸ್ಥಾಪನೆ ಮಾಡಿಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ಇನ್ನು ಜನರಲ್ ಆಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಈಗಾಗಲೇ ಕೆಲವು ಸದಸ್ಯರು ಇಲ್ಲಿ ಹೇಳಿದಂತೆ ಈಗ ಇರುವ ಡಿವಿಜನಲ್ ಕಮಿಷನರುಗಳ ಆಫೀಸುಗಳನ್ನು ಕೂಡಲೇ ತೆಗೆದುಹಾಕಬೇಕು. ಈ ಆಫೀಸುಗಳನ್ನು ತೆಗೆಯಬೇಕೆಂದು ಸುಮಾರು ಮೂರು ನಾಲ್ಕು ವರ್ಷಗಳಿಂದಲೂ ಸರಕಾರಕ್ಕೆ ಒತ್ತಾಯ ಮಾಡುತ್ತಲೇ ಬರುತ್ತಿದ್ದೇವೆ. ಈಗಲಾದರೂ ಕೂಡ ಸರಕಾರ ಇದನ್ನು ತೆಗೆಯುವುದು ಸೂಕ್ತವಾಗಿದೆ. ಇದೇ ರೀತಿ ನಮ್ಮ ರೆವೆನ್ಯೂ ಇಲಾಖೆಯಲ್ಲಿ ಗುಲ್ಬರ್ಗಾದಲ್ಲಿರುವ ಅಡಿಷನಲ್ ತಹಶೀಲುದಾರರುಗಳ ಹುದ್ದೆಯನ್ನೂ ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ಸರಕಾರಕ್ಕೆ ಸುಮಾರು ಮೂವತ್ತು ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ. ಆದುದರಿಂದ ಡಿವಿಜನಲ್ ಕಮಿಷನರ್ ಆಫೀಸುಗಳನ್ನು ಹಾಗೂ ರೆವೆನ್ಯೂ ಇಲಾಖೆಯಲ್ಲಿರುವ ಕೆಲವು ಹುದ್ದೆಗಳನ್ನೂ ತೆಗೆದರೆ ಸರಕಾರಕ್ಕೆ ಹೆಚ್ಚು ಉಳಿತಾಯವಾಗುತ್ತದೆ ಎಂದು ಇಲ್ಲಿ ಹೇಳಬಯಸುತ್ತೇನೆ. ಇನ್ನು ಜನರಲ್ ಆಡ್ಮಿನಿಸ್ಟ್ರೇಷನ್ ವಿಚಾರವಾಗಿ ಹೇಳುವಾಗ ಒಂದು ಮಾತು ಹೇಳಬೇಕಾಗಿದೆ :

" Virtue is not rewarded
Vice is not punished ; "

ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಅವರಿಗೆ ರಿವಾರ್ಡ್ ಸಿಗುವುದಿಲ್ಲ. ಮತ್ತು ಇನ್‌ಎಫಿಷೆಂಟ್ ಅಧಿಕಾರಿಗಳಿದ್ದಾರೆ ಎಂದರೂ ಅವರನ್ನೇನೂ ಪನಿಷ್ ಮಾಡುವುದಿಲ್ಲ. ಈ ರೀತಿಯಾಗಿ ಇಲಾಖೆಯಲ್ಲಿ ಒಂದು ತರಹದ ಅತೃಪ್ತಿ ಬೆಳೆದಿದೆ, ಆಡಳಿತದಲ್ಲಿ ಬಿಗಿ ಇಲ್ಲ ಎನ್ನುವುದು ಈಚೆಗೆ ಕೇಳಿಬರುತ್ತಿದೆ. ಆದುದರಿಂದ ಸರಕಾರದವರು ಜನರಲ್ ಅಡ್ಮಿನಿಸ್ಟ್ರೇಷನನ್ನು ಟೋನ್‌ಅಪ್ ಮಾಡಬೇಕೆಂದು ಸಲಹೆ ಮಾಡುತ್ತೇನೆ.

[MR. SPEAKER in the Chair]

MR. SPEAKER.—I find a long list, and it is still lengthening further.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ನಾನು ಒಂದು ವಿಷಯ ತಮ್ಮಲ್ಲಿ ಅರಿಕೆ ಮಾಡಬೇಕಾಗಿದೆ. ಇನ್ನೂ ಮಾತಾಡುವವರು ಬಹಳ ಜನ ಇದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಡಿ. ಎಂ. ಶಿವ್ದಯ್ಯನವರೊಂದಿಗೂ ಮಾತನಾಡಿದ್ದೇನೆ. ಅವರೂ ಇದಕ್ಕೆ ಒಪ್ಪಿದ್ದಾರೆ. ಇವೊತ್ತು ಮಾತ್ರ ಸಂಜೆ ಏಳು ಗಂಟೆಯವರೆಗೆ ಕುಳಿತುಕೊಳ್ಳೋಣ.

MR. SPEAKER.—Are there many members who are desirous of participating ? I don't see why I should stand in their way.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ನಾಳೆದಿನ ಬೆಳಗ್ಗೆ 9 ರಿಂದ ಒಂದು ಗಂಟೆಯು ವರೆಗೆ ಮತ್ತು ಮಧ್ಯಾಹ್ನ ಮೂರರಿಂದ ಏಳು ಗಂಟೆಯುವರೆಗೆ ಕುಳಿತುಕೊಳ್ಳಬಹುದು.

Sri B. BHASKARA SHETTY (Kaup).—We have a further list of 25 names.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಸಭೆ ಬೆಳಗ್ಗೆ ಸೇರುವುದಕ್ಕೆ ಒಪ್ಪಿಕೊಂಡಿದ್ದಾರೆ.

Mr. SPEAKER.—It does not matter to me. This means to say that they have to work for six hours, and if they work for more hours some over-time allowance will have to be given. Should we sit till Seven to-day ?

Hon'ble MEMBERS.—Yes, Sir.

Mr. SPEAKER.—Members will kindly see that no objection is raised that such and such a Minister is not present. We will take it for granted that everybody is present. We will follow the procedure of the House of Commons. There is no question of quorum. There will be no Question Hour tomorrow. We will sit today till Seven, and tomorrow between 9 A.M. and 1 P.M. and again from 3 P.M. to 6 P.M. the reply will begin at 4.30 P.M. or 5.00 P.M. Till then, the debate can go on.

ಶ್ರೀ ಜಿ. ರಾಮೇ ಗೌಡ (ದೊಡ್ಡಬಳ್ಳಾಪುರ)—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸು ತ್ತೇನೆ.

ವ್ಯವಸಾಯದ ಇಲಾಖೆ ಬಹಳ ಮುಖ್ಯವಾದುದು ಎಂದು ಆಡಳಿತ ಪಕ್ಷದವರೂ ತೀರ್ಮಾನ ಕೈಗೊಂಡಿದ್ದಾರೆ. ವ್ಯವಸಾಯ ಎನ್ನತಕ್ಕ ಕೂಸು ಅನೇಕ ಮಂತ್ರಿಗಳ ಕೈಗೊಂಬೆಯಾಗಿದೆ. ವ್ಯವಸಾಯ ನನ್ನದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ದೊಡ್ಡ ಉದ್ದೇಶ ಹೊಂದಿದ್ದಾರೆ. ಇದಕ್ಕೋಸ್ಕರ ಈ ಖಾತೆಯನ್ನು ನಾನು ತೆಗೆದುಕೊಂಡಿದ್ದೇನೆ ಎನ್ನುತ್ತಾರೆ. ಸಹಕಾರ ಮಂತ್ರಿಗಳು ನಾನು ಸಾಕಷ್ಟು ಗೊಬ್ಬರ ಕೊಡುತ್ತೇನೆ ಎಂದು ಹೇಳುತ್ತಾರೆ, ಹೀಗೆ ವ್ಯವಸಾಯ ಎನ್ನುವುದು ಎಲ್ಲ ಮಂತ್ರಿಗಳ ಕೈಗೊಂಬೆಯಾಗಿದೆ ಎಂದು ನಾನು ಹೇಳುತ್ತೇನೆ. ಅದು ಸರಿಯೇ ಎಂದು ನಾನು ಕೇಳಬೇಕಾಗಿದೆ. ಅದು ಎಲ್ಲರ ಕೂಸು ಆಗಿದೆ. ಆದ್ದರಿಂದ ಅದರ ಏಳಿಗೆ ಬಹಳ ಕಡಿಮೆಯಾಗುತ್ತಿದೆಯೆಂದೇನಾದರೂ ನಾನು ತಿಳಿಯಬೇಕೋ ಏನೋ ಗೊತ್ತಿಲ್ಲ.

[Mr. Chairman (SRI S. D. KOTHAWALE) in the Chair]

ವ್ಯವಸಾಯಕ್ಕೆ ಭೂಮಿ, ನೀರು, ಬೀಜ, ಗೊಬ್ಬರ, ಔಷಧಿ ಬಹುಮುಖ್ಯವಾದವು. ಈ ಐದು ಅಂಶಗಳೂ ಐದು ಜನಗಳೂ ಸೇರಿದೆಯೆಂದು ನಾನು ಹೇಳಿದ ಅರ್ಥದಲ್ಲಿ ಗೊತ್ತಾಗುತ್ತದೆ. ಈಗ ನೀರಿನ ವಿಚಾರ ತೆಗೆದುಕೊಂಡರೆ ಕೆರೆಗಳು ಬಹಳ ದುಸ್ಥಿತಿಯಲ್ಲಿರುವುದು ಗೊತ್ತಿದೆ, ಅದನ್ನು ನಾನು ಈಗ ಹೇಳುವುದಿಲ್ಲ. ನೀರಾವರಿ ಯೋಜನೆಗಳಂತೂ ಕುಂಠಿತವಾಗಿದೆ. ಅದನ್ನೂ ಸಹ ಮತ್ತೆ ಹೇಳಬೇಕಾಗಿಲ್ಲ. ಇನ್ನು ಇತರ ಪ್ರದೇಶಗಳಲ್ಲಿರತಕ್ಕ ನೀರಾವರಿ ಭಾವಿಗಳ ಪರಿಸ್ಥಿತಿ ಯಂತೂ ಜನರನ್ನು ಬಹಳ ಸಂಕಟಕ್ಕೆ ಈಡುಮಾಡಿದೆ. ರೈತರುಗಳ ಮೇಲೆ ಸುಮಾರು 3-4 ಸಾವಿರ ರೂಪಾಯಿಗಳಷ್ಟು ಸಾಲವನ್ನು ಹೊರಿಸಿ, ಅವರಿಗೆ ಬೇಕಾದ ಸೌಲಭ್ಯಗಳನ್ನು ಪೂರ್ತಿ ಯಾಗಿ ಕೊಡದೆ ಸಹಸ್ರಾರು ಭಾವಿಗಳು ಅರ್ಧಂಬರ್ಧವಾಗಿ ಈಗ ಅವರು ಸಾಲಗಾರರಾಗಿ ದ್ದಾರೆ. ಆದಕಾರಣ ಈ ರಾಜ್ಯಕ್ಕೆ ಅಭಿವೃದ್ಧಿ ಕಾರ್ಯಗಳೇನೂ ಆಗಲಿಲ್ಲ. ಒಟ್ಟಿನಲ್ಲಿ ಅಪೂರ್ಣವಾಗಿ ರತಕ್ಕ ನೀರಾವರಿ ಭಾವಿಗಳನ್ನು ಈ ವರ್ಷದಲ್ಲಿಯೇ ಪೂರೈಸುವ ವ್ಯವಸ್ಥೆಯಾಗಬೇಕು. ಅದಕ್ಕೆ ಮುಖ್ಯ ಮಂತ್ರಿಗಳು ಎಷ್ಟು ಹಣಬೇಕೋ ಅಷ್ಟು ಹಣವನ್ನು ಒದಗಿಸಲು ಅವರ ಪ್ರಭಾವವನ್ನು ಬೀರಬೇಕು. ಈಗ ಬೋರ್‌ವೆಲ್ ಯಂತ್ರಗಳನ್ನು ಸರ್ಕಾರದವರು ತರಿಸುವುದನ್ನು ನಾನು ಒಪ್ಪು ವುದಿಲ್ಲ. ಇದು ಬಹಳ ಕುಂಠಿತವಾದ ಕೆಲಸ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಬಹಳ ಬುದ್ಧಿವಂತರು, ಅವರು ಏನು ಮಾಡುತ್ತಾರೆಂದರೆ 5 ಸಾವಿರ, 6 ಸಾವಿರ, 10 ಸಾವಿರ ಬೋರ್ ವೆಲ್ ಯಂತ್ರಗಳನ್ನು ತರಿಸಿಕೊಂಡು ಕೇವಲ 4–6 ಭಾವಿಗಳಾದ ನಂತರ ಅವನ್ನು ಕೆಡವಿಹಾಕಿ

(ಶ್ರೀ ಜಿ. ರಾಮೇಗೌಡ)

ಅವನ್ನೆಲ್ಲಾ ಇಡುವುದಕ್ಕೆ ಒಂದು ದೊಡ್ಡ ಗೋಡೌನ್ ಮಾಡಿದ್ದಾರೆ. ಹಣಕಾಸಿನ ಮಂತ್ರಿಗಳು ಕೇವಲ 2 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಒಂದು ಚಲನ ಯಂತ್ರವೆಂದು ಒಂದು ಲಾರಿ ಮೇಲೆ ಜೋಡಣೆ ಮಾಡಿರುವ ಬೋರ್‌ವೆಲ್ ಸಿಕ್ಕುತ್ತದೆ. ಅಂತಹವುಗಳನ್ನು ಹತ್ತಾರು ತಂದು ನಮ್ಮ ರಾಜ್ಯದಲ್ಲಿಟ್ಟರೆ ದಿನ ಒಂದಕ್ಕೆ ಒಂದೊಂದು ಬೋರ್‌ವೆಲ್ ಮಾಡುವ ಪರಿಸ್ಥಿತಿಯನ್ನು ಮಾಡಬಹುದು. ಪರದೇಶಗಳಲ್ಲಿ ಬೋರ್‌ವೆಲ್ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ನಮ್ಮ ಇಲಾಖಾಧಿಕಾರಿಗಳು ಈ ವಿಚಾರವಾಗಿ ಪ್ರಸಿದ್ಧಪಡಿಸಿದ್ದಾರೆ. ಅದನ್ನು ನಮ್ಮ ಸರ್ಕಾರದವರು ಏಕೋ ಮಾಡುತ್ತಾ ಇಲ್ಲ.

ಶ್ರೀ ಡಿ. ದೇವರಾಜ ಅರಸ್ (ಪಶುಪಾಲನೆ, ಮೀನುಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು).—ಸರ್ಕಾರಕ್ಕೆ ಈಗ ಅದನ್ನು ತರಿಸಬೇಕೆಂಬ ಯೋಚನೆ ಇದೆ.

ಶ್ರೀ ಜಿ. ರಾಮೇಗೌಡ.—ಸರ್ಕಾರಕ್ಕೆ ಆ ಯೋಚನೆ ಇದೆಯೆಂದು ಹೇಳಿದರು, ಸಂತೋಷ. ಹಿಂದೆ ಒಂದು ಸಮಯದಲ್ಲಿ ಮಂತ್ರಿಗಳು ಅವರ ಉತ್ತರದಲ್ಲಿ ಹಣ ಸಾಕಷ್ಟು ಸಿಗುವುದಿಲ್ಲವೆಂದು ಹೇಳಿದರು. ಸರ್ಕಾರದವರು ಈ ಯೋಜನೆಗೆ ಮುಂದೆ ಬಂದರೆ ರೈತರಿಂದ ಎಷ್ಟು ಲಕ್ಷ ರೂಪಾಯಿಗಳು ಬೇಕಾದರೂ ಮುಂಗಡವಾಗಿ ಕೊಡಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಿಗೆ ಹೇಳುವುದಾದರೆ ಒಂದೊಂದು ದಿವಸದಲ್ಲಿ 100 ಅಡಿಗಳಷ್ಟು ಆಳವಾಗಿ ಭಾವಿಗಳನ್ನು ತೆಗೆಯತಕ್ಕವರಿಗೆ ಯಂತ್ರಗಳನ್ನು ಉಪಯೋಗಿಸಬೇಕೆಂದಿದ್ದೇವೆ. ಸೆಂಟ್ರಲ್ ಬ್ಯಾಂಕಿನವರೂ ಸಹ ನೀರಾವರಿಗೋಸ್ಕರ ಭಾವಿಗಳಿಗೆ ಸಾಲ ಕೊಡುವಾಗ ಈ ಯಂತ್ರಗಳನ್ನೂ ಸಹ ಪಡೆಯಲು ಸಹಾಯ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಸಲಹೆ ಉತ್ತಮವಾದುದು.

ಶ್ರೀ ಜಿ. ರಾಮೇಗೌಡ.—ಬಹಳ ಸಂತೋಷ. ಖಂಡಿತವಾಗಿ ನಮ್ಮ ಮಂತ್ರಿಗಳು ವಂದನಾರ್ಹರು. ಈಗಲೇ ಅದನ್ನು ಮಾಡಿದರೆ ಪೂರ್ಣವಾಗಿರತಕ್ಕ ಬಹಳ ಭಾವಿಗಳಲ್ಲಿ ಜಾಗ್ರತೆಯಾಗಿ ನೀರಾವರಿಯ ಉಪಯೋಗಕ್ಕೆ ಅನುಕೂಲವಾಗುವಂತೆ ಮಾಡಬಹುದು.

ಇನ್ನು ಬೀಜದ ವಿಚಾರವಾಗಿ ಬಹಳ ಮಂದಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನೇನೋ ಇವರ ವಿಚಾರದಲ್ಲಿ ಬಹಳ ಕೋಪವಾಗಿದ್ದೇನೆಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಏನೇನು ಹೊಸದಾಗಿ ಬಿತ್ತನೆ ಬೀಜಗಳನ್ನು ತಯಾರು ಮಾಡಿ ಜನಗಳಿಗೆ ಕೊಡುತ್ತಾರೋ ಅವುಗಳ ಶೇಖರಣೆ, ವಿನಿಯೋಗ, ಹಾಗೂ ವಿತರಣೆ ಸರಿಯಾಗಿ ಆಗಿಲ್ಲ. ಇಲಾಖೆಯ ಅಧಿಕಾರಿಗಳು ಬಹಳ ಬುದ್ಧಿವಂತರು ಇದ್ದಾರೆ. ಏಕೆಂದರೆ ಏನೋ ಒಂದು ಅಂಕಿ ಅಂಶವನ್ನು ಕೊಟ್ಟು ಬಿಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ನಾನು ಮೊನ್ನೆ ಮಳೆ ಬಿದ್ದಾಗ ನನ್ನ ಜಮೀನಿನಲ್ಲಿ ಎಚ್.ಜಿ 8 ಕಡಲೆಕಾಯಿ ಬೀಜವನ್ನು ಹಾಕಬೇಕೆಂದಿದ್ದೆ. ಬೀಜವನ್ನು ಕೇಳುವುದಕ್ಕೆ ಹೋದರೆ ನನ್ನ ಜಿಲ್ಲೆಯ 18 ದಿಕ್ಕುಗಳಿಗೂ ತೋರಿಸುತ್ತಾರೆ ಭೂಮಿಯೊಳಗಿರತಕ್ಕ ಬಿತ್ತನೆಯನ್ನು ತೋರಿಸುತ್ತಾರೆ. ಅದನ್ನು ಶುದ್ಧಮಾಡಿ ಇಡುವ ವ್ಯವಸ್ಥೆ ಇಲ್ಲ. ಜನರಿಗೇನೋ ಉತ್ತಮವಾದ ಬೀಜವನ್ನು ಕೊಡುತ್ತಿದ್ದೇವೆಂದು ಹೇಳುತ್ತಾರೆ. ಜಿಲ್ಲೆಯಲ್ಲಿ ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಅದರ ಬಗ್ಗೆ ಪತ್ರಿಕೆಗಳಲ್ಲಿ ಅಡ್ವರ್ಟೈಜ್‌ಮೆಂಟ್ ಬೇರೆ ಬರುತ್ತದೆ. ಇವರು ಕೇಳಿದವರಿಗೆ ಕೊಟ್ಟರೆ ಸಾಕು. ಇದು ಬಿತ್ತನೆ ಬೀಜ ಎಂದು ಬಾಯಲ್ಲಿ ಹೇಳುವುದು, ತೋರಿಸುವುದು, ಆಮೇಲೆ ಬೇರೆ ಮತ್ತೊಂದನ್ನು ರೈತರಿಗೆ ಕೊಡುತ್ತಾರೆ. ಅಲ್ಲದೆ ಅದನ್ನು ಯಾರಿಗೋ ಇಟ್ಟಿದ್ದೇವೆಂದು ಹೇಳುವುದು, ಯಾವುದೋ ಒಂದು ಸೊಸೈಟಿಯಲ್ಲಿಟ್ಟಿದ್ದೇವೆಂದು ಹೇಳುವುದಾಗಿದೆ, ರೈತರಿಗೆ ಪ್ರತಿಯೊಂದು ಊರಿನಲ್ಲಿಯೂ ಅದು ಸಿಕ್ಕುವ ವ್ಯವಸ್ಥೆಯನ್ನ ಮಾಡಲಿಲ್ಲ. ಒಂದು ಕಡೆ ನೋಡಿದರೆ ಸಹಕಾರೀ ಇಲಾಖೆಯ ಜವಾಬ್ದಾರಿ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಮತ್ತೊಬ್ಬರನ್ನು ಕೇಳಿ ಎಂದು ತೋರಿಸುತ್ತಾರೆ. ಒಟ್ಟಿನಲ್ಲಿ ರೈತರಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸುತ್ತಾ ಇಲ್ಲ. ಮೂರು-ನಾಲ್ಕು ಜನರ ಕಾರ್ಯವನ್ನು ಒಬ್ಬರಿಗೇ ವಹಿಸಬೇಕು. ಇನ್ನು ಬಿತ್ತನೆ ಬೀಜದ ವಿನಿಯೋಗ ಸಹ ಸರಿಯಾಗಿ ಆಗಲಿಲ್ಲವೆಂಬ ಬಗ್ಗೆ ನಾನು ಅಂಕಿ ಅಂಶಗಳನ್ನು ಬೇಕಾದರೆ ತೋರಿಸಿಕೊಡುತ್ತೇನೆ. ಜಾತಿಯ ಅಧಿಕಾರಿಗಳು ಅವನ್ನು ಸರಿಯಾಗಿ ಒದಗಿಸಬೇಕು. ಅವರು ಇತ್ತೀಚೆಗೆ ಹೊಸ ನಮೂನೆಯ ಬಿತ್ತನೆಗಳನ್ನು ಕಂಡು ಹಿಡಿದಿದ್ದಾರೆ. ಆದರೆ ಅವನ್ನು ಹೆಚ್ಚಿಗೆ ತಯಾರು ಮಾಡಿ ರೈತರಿಗೆ ಕೊಡುವ ವ್ಯವಸ್ಥೆ ಮಾಡಲಿಲ್ಲ. ಇದನ್ನು ಕೂಡಲೇ ಮಾಡಬೇಕು. ಇನ್ನು ರೈತರಿಗೆ ಬೇಕಾದ ಪೆಸ್ಟಿಸೈಡ್ಸ್‌ನ್ನು

ಅದರಲ್ಲಿಯೂ ಬೆಳೆಗೆ ಬರತಕ್ಕ ರೋಗದ ನಿವಾರಣೆಗೆ ಬೇಕಾದಂಥ ಅಂತಹ ಕ್ರಿಮಿನಾಶಕ ವಸ್ತುಗಳ ಸರಬರಾಜು ಸಹ ಸರಿಯಾಗಿ ಆಗುತ್ತಾ ಇಲ್ಲ. ಸುಮಾರು 50 ಅಂಗಡಿಗಳಲ್ಲಿ ಅವನ್ನು ಕೇಳಿದರೂ ಸಿಗುತ್ತಾ ಇಲ್ಲ. ಯಾವ ಅಧಿಕಾರಿಯನ್ನು ಕೇಳಿದರೂ ಸರಿಯಾಗಿ ಉತ್ತರ ಕೊಡುತ್ತಾ ಇಲ್ಲ. ಕಳೆದ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ ರಾಗಿ ಬೆಳೆಗೆ ರೋಗ ಬಂದು ಅದಕ್ಕೆ ಸರಿಯಾದ ಕ್ರಿಮಿಕೀಟದ ನಿವಾರಣೆಗೆ ಬೇಕಾದ ಔಷಧಿ ಈ ರಾಜ್ಯದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಅದರಿಂದ ನಮ್ಮ ಜಿಲ್ಲೆಯ ರೈತರಿಗೆ ವಿಪರೀತವಾಗಿ ನಷ್ಟವಾಯಿತು. ಈ ವಿಚಾರವಾಗಿ ಕೇಳಲು ಬಿ. ಡಿ. ಓ. ಹತ್ತಿರ ಹೋದರೆ ವ್ಯವಸಾಯದ ಅಸಿಸ್ಟೆಂಟ್ ಡೈರೆಕ್ಟರನ್ನು ತೋರಿಸುತ್ತಾರೆ, ಅಸಿಸ್ಟೆಂಟ್ ಡೈರೆಕ್ಟರನ್ನು ಕೇಳಿದರೆ ಡೆಪ್ಯುಟಿ ಡೈರೆಕ್ಟರನ್ನು ತೋರಿಸುತ್ತಾರೆ, ಡೆಪ್ಯುಟಿ ಡೈರೆಕ್ಟರನ್ನು ಕೇಳಿದರೆ ಜಾಯಿಂಟ್ ಡೈರೆಕ್ಟರನ್ನು ತೋರಿಸುತ್ತಾರೆ. ಹೀಗಾಗಿ ಎಲ್ಲಿಯೂ ಅದಕ್ಕೆ ಬೇಕಾದ ಔಷಧಿ ಸಿಗಲಿಲ್ಲ. ಬೇರೆ ಕಡೆಯಿಂದ ತರಿಸಬೇಕೆಂದರೆ ಒಂದು ಕೆ.ಜಿ.ಗೆ ಏಳೂವರೆ ರೂಪಾಯಿಗಳು ಆಗುತ್ತದೆ. ಸಾಧಾರಣವಾಗಿ ಒಂದು ಎಕರೆಗೆ ಸುಮಾರು 8 ಕೆ.ಜಿ.ಯಾದರೂ ಅದನ್ನು ಹಾಕಬೇಕು. ಅಂದಮೇಲೆ ರಾಗಿ ಬಿತ್ತನೆ ಬೀಜದ ಸಮಯದಲ್ಲಿ ಔಷಧಿಗಳನ್ನೂ ಸಹ ರೈತನಾದವನು ಇಟ್ಟು ಕೊಂಡಿರಬೇಕಾದರೆ ಎಕರೆಗೆ ಅದಕ್ಕೆ ಮಾತ್ರ 60 ರೂಪಾಯಿಗಳವರೆಗೆ ಒಬ್ಬ ರೈತ ಖರ್ಚು ಮಾಡಿದರೆ ಬಾಕಿ ವಿಷಯಗಳಿಗೆ ಆತ ಎಲ್ಲಿ ಹಣ ತರಬೇಕೆಂಬುದನ್ನು ವಿಚಾರ ಮಾಡಬೇಕು. ಪುಸ್ತಕಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಮಾತ್ರ ಔಷಧಿಗಳ ವಿತರಣೆ ಚೆನ್ನಾಗಿ ಆಗುತ್ತಿದೆಯೆಂದೇನೋ ಹೇಳುತ್ತಾರೆ. ಆದರೆ ಅದರ ಕಾರ್ಯರೂಪದಲ್ಲಿ ಒಂದು ಪೈಸಾದಷ್ಟು ಸಹ ಪ್ರಯೋಜನವಾಗಲಿಲ್ಲ.

ಇನ್ನು ಗೊಬ್ಬರದ ವಿಷಯ. ಇದು ಬೇಸಾಯಕ್ಕೆ ಅಗತ್ಯವಾಗಿ ಬೇಕಾಗಿರತಕ್ಕದ್ದು. ಮಾನ್ಯ ಮುಖ್ಯ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡಮೇಲೆ ಒಂದು ಶಾಪ ಬಂದಂತೆ ಆಯಿತು. ಟನ್ನಿಗೆ ಸೇಕಡ 30ರಷ್ಟು ಜಾಸ್ತಿಯಾಗಿದೆ. ಅದು ಯಾರಿಗೂ ಗೊತ್ತಿಲ್ಲ. ಇಲ್ಲಿರತಕ್ಕ ಎಷ್ಟೋ ಜನ ಸದಸ್ಯರಿಗೂ ಗೊತ್ತಿಲ್ಲ. ಗೊಬ್ಬರದ ಬೆಲೆ ಈಗ 100 ರೂಪಾಯಿಗಳಿಂದ 130 ರೂಪಾಯಿಗೆ ಏರಿದೆ. ತಯಾರಾದ ಶೇಕಡ 30ರ ಭಾಗವನ್ನು ತಯಾರುಮಾಡುವವರು ಮಾರಿಕೊಳ್ಳ ಬಹುದು ಎಂಬುದಾಗಿ ಮಾಡಿದ್ದಾರೆ. ಇದು ರೈತರ ಒಂದು ದುರಾದೃಷ್ಟ. ಮುಂದಿನವರ್ಷದಿಂದ ಅದನ್ನು ತಯಾರುಮಾಡುವವರೇ ಮಾರಿಕೊಳ್ಳಬಹುದೆಂದು ಮಾಡಿರುವುದರಿಂದ ಇದರಿಂದ ರೈತರಿಗೆ ಇನ್ನೂ ಹೆಚ್ಚಿಗೆ ತೊಂದರೆಯಾಗುತ್ತದೆ. ಇವತ್ತು ಏನು ಕಂಟ್ರೋಲ್ ಇದೆ, ಅದನ್ನು ತೆಗೆಯುವ ದಾದರೆ ಇನ್ನೂ ರೈತರಿಗೆ ದುಃಖ ಹಾಗೂ ಹಾನಿಯಾಗುತ್ತದೆ. ಗೊಬ್ಬರ ರೈತರಿಗೆ ಎಷ್ಟು ಬೇಕೋ ಅಷ್ಟನ್ನು ಕೊಡುವುದೇ ಇಲ್ಲ. ಯಾವಾಗಲೂ ಗೊಬ್ಬರ ಜುಲೈ ತಿಂಗಳಿನಲ್ಲಿ ರೈತರಿಗೆ ಬೇಕು. ಆದರೆ ಇದುವರೆಗೆ ಯಾರೂ ರೈತರಿಗೆ ಎಷ್ಟೆಷ್ಟು ಗೊಬ್ಬರ ಬೇಕು ಎಂದು ಕೇಳಲಿಲ್ಲ. ರೈತರು ಅಂತಹ ಪರಿಸ್ಥಿತಿಯಲ್ಲಿ ಈಗ ಇದ್ದಾರೆ. ಗೊಬ್ಬರ ವಿತರಣೆಯಲ್ಲಿ ಬೆಲೆಯನ್ನು ಜಾಸ್ತಿಮಾಡಿದ್ದಾರೆ. ಅದನ್ನು ತಯಾರುಮಾಡುವವರಿಗೆ ಸೇಕಡ 30ರಷ್ಟು ಜಾಸ್ತಿಯಾಗಿ ಮಾರಬೇಕೆಂದು ಮಾಡಿರುವ ವ್ಯವಸ್ಥೆಯನ್ನು ಕೂಡಲೇ ತಪ್ಪಿಸಬೇಕು. ಆದರೆ ಮುಖ್ಯ ಮಂತ್ರಿಗಳ' ಗೊಬ್ಬರ ಕೊಡದೆ ನೀರು ಕೊಡದೆ, ಔಷಧಿ ಕೊಡದೆ; ಬಿತ್ತ ಸಂವೃದ್ಧಿಯಾಗಿದೆ ಎಂದು ಹೇಳಿದ ಮಾತ್ರಕ್ಕೆ ಖಂಡಿತ ಬಿತ್ತ ಬೆಳೆಯುವುದಿಲ್ಲ. ಬಿತ್ತನೆಗೆ ನಾಮಕರಣ ಆದರೆ ಮಾತ್ರ ಬೆಳೆ ಆಗುವುದಿಲ್ಲ, ಗಾಂಧಿ ಫೋಟೊ ಇಟ್ಟರೆ ತತ್ವಪರಿಪಾಲನೆ ಆಗುವುದಿಲ್ಲ. ಮಹಾತ್ಮ ಗಾಂಧಿಯವರು ಹೇಳಿದಂತೆ ತತ್ವ ಏನಿದೆಯೋ ಆ ತತ್ವಗಳು ಖಂಡಿತವಾಗಿ ಕಾರ್ಯರೂಪಕ್ಕೆ ಬರುತ್ತ ಇಲ್ಲ. ಅದಕ್ಕೆ ಬೇಕಾದಂಥ ಕಾರ್ಯಕ್ರಮ ಗಳನ್ನು ಹಾಕಿಕೊಳ್ಳಬೇಕು. ಏಕೆಂದರೆ ಗೊಬ್ಬರ ರೈತರಿಗೆ ಬಹು ಮುಖ್ಯವಾದುದು. ಗೊಬ್ಬರ ವನ್ನು ಸರ್ಕಾರದವರು ಸರಬರಾಜು ಮಾಡದೆ, ನಿಮ್ಮಷ್ಟಕೆ ನೀವೇ ತಯಾರುಮಾಡಿಕೊಳ್ಳಿ ಎಂದರೆ ಹೇಗೆ? ಸಾಕಷ್ಟು ಗೊಬ್ಬರ ರೈತರಿಗೆ ಒದಗುವ ಬಗೆ ಹೇಗೆ? ನಿಜವಾಗಿ ರೈತರಾದವರು ಸಾಕಷ್ಟು ಅದನ್ನು ಪಡೆಯುವುದಕ್ಕೆ ಈಗಿನ ಸನ್ನಿವೇಶದಲ್ಲಿ ಅವರಿಗೆ ಸಾಮರ್ಥ್ಯವಿದೆಯೋ ಎಂಬು ದನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. ಈ ವಿಚಾರವನ್ನು ನಾನು ಪ್ರತಿವರ್ಷವೂ ಹೇಳುತ್ತಿದ್ದರೂ ಈ ವಿಚಾರದಲ್ಲಿ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಬೆಂಗಳೂರು ನಗರದಲ್ಲಿ ಸುಮಾರು 30 ಸಾವಿರ ದನಗಳು ಇರುವುದರಿಂದ ಒಂದು ದಿನಕ್ಕೆ 50 ಟನ್ನುಗಳಷ್ಟು ಸಗಣಿ ಗೊಬ್ಬರ ಸಿಗುತ್ತದೆ. ಅದನ್ನು ಪಟ್ಟಣದವರು ಬೆರಣಿಮಾಡಿ ಒಲೆಗೆ ಉರಿಸುತ್ತಿದ್ದಾರೆ. ಇದನ್ನು ಕೂಡಲೇ ನಿಲ್ಲಿಸಿ ಗೊಬ್ಬರವನ್ನು ಸದುಪಯೋಗಮಾಡಬೇಕು. ದನಗಳ ಗೊಬ್ಬರವನ್ನು ಕಾಪಾಡಬೇಕು. ಅದನ್ನು ಸುಡುವುದಕ್ಕೆ ಅವಕಾಶ ಕೊಡಬಾರದು. ಹಿಂದೆಯೇ ಇದಕ್ಕಾಗಿ ಒಂದು ಕಾನೂನನ್ನೇ ಮಾಡಬೇಕೆಂದು ಹೇಳಿದ್ದರೂ ಇದುವರೆಗೂ ಅದರ ಬಗ್ಗೆ ಏನೂ ಮಾಡಲಿಲ್ಲ. ಕಾಂಪೋಸ್ಟ್ ಮಾಡ ತಕ್ಕ ವಿಧಾನ ಇನ್ನೂ ಭದ್ರಪಡಿಸಬೇಕು ಎಂದು ಹೇಳುತ್ತೇನೆ. ಅದನ್ನು ಇನ್ನೂ ಮಾಡಿಲ್ಲ. ಗೊಬ್ಬರ ಎನ್ನತಕ್ಕಂಥಾದ್ದು ಬಹಳ ಮುಖ್ಯವಾದುದು ; ಅನ್ನುವುದನ್ನು ಗಮನದಲ್ಲಿಡಬೇಕು. ಇನ್ನು ಟ್ರಾಕ್ಟರ್ ವಿಚಾರವಾಗಿ ಒಂದು ಮಾತನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಜಿ. ರಾಮೇಗೌಡ

4-30 P.M.

ದೇಶದಲ್ಲಿ ಟ್ರಾಕ್ಟರ್ ಸುಲಭವಾಗಿ ಕೊಡುತ್ತಾರೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಈ ವರ್ಷ 120 ಟ್ರಾಕ್ಟರುಗಳನ್ನು ಕೊಟ್ಟಿದ್ದಾರೆ. ಇನ್ನು ಬೆಂಗಳೂರಿನಲ್ಲಿ ನೋಡಿದರೆ 100 ಟ್ರಾಕ್ಟರುಗಳು ಅದಕ್ಕೆ ಬೇಕಾದ ಸಾಮಾನುಗಳು ಇಲ್ಲದೆ ಎಲ್ಲಾ ಒಂದು ಗ್ಯಾರೇಜ್‌ನಲ್ಲಿ ಬಂದು ನಿಂತಿವೆ. ರೈತರುಗಳು ಎತ್ತುಗಳನ್ನು ಮಾರಿ ಟ್ರಾಕ್ಟರುಗಳನ್ನೂ ಉಪಯೋಗಿಸುವ ಅವಕಾಶ ಇಲ್ಲದೆ ಗೋಳಾಡುವ ಪರಿಸ್ಥಿತಿ ಇದೆ. ಇದನ್ನು ಮುಖ್ಯಮಂತ್ರಿಗಳು ಗಮನಿಸಬೇಕು. ಟ್ರಾಕ್ಟರುಗಳ ಸೂಕ್ತ ರಿಪೇರಿಗೆ ಏರ್ಪಾಡು ಮಾಡಬೇಕು. ಇದು ಮಾಡದೇ ಹೋದರೆ ಎಷ್ಟು ಟ್ರಾಕ್ಟರ್ ಕೊಟ್ಟರೂ ಪ್ರಯೋಜನವಾಗುವುದಿಲ್ಲ. ಅದೂ ಅಲ್ಲದೆ ಟ್ರಾಕ್ಟರ್ ಬಗ್ಗೆ 2,400 ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸ್ ಹಾಕುತ್ತಾರೆ. ಪ್ರತಿ ವರ್ಷವೂ ಒತ್ತಿ ಒತ್ತಿ ಹೇಳುತ್ತಾ ಇದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಖಾತೆಗಳನ್ನು ತೆಗೆದುಕೊಂಡಿದ್ದಾರೆ. ಅವರು ಈ ಸೇಲ್ಸ್‌ಟ್ಯಾಕ್ಸನ್ನು ತೆಗೆದುಹಾಕಬೇಕು. ಅಗ್ರಿಮೆಂಟ್ ರಿಜಿಸ್ಟರ್ ಮಾಡುವಾಗ 800 ರೂಪಾಯಿಗೆ ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಇದನ್ನು ತೆಗೆದು ರೈತನಿಗೆ ಸಹಾಯ ಮಾಡಬೇಕು ಎಂದು ಸರ್ಕಾರವನ್ನು ಕಳಕಳಿಯಿಂದ ಕೇಳುತ್ತಿದ್ದೇನೆ. ಈ ರೀತಿ ಸ್ಟ್ಯಾಂಪ್‌ಡ್ಯೂಟಿ ಮತ್ತು ಸೇಲ್ಸ್‌ಟ್ಯಾಕ್ಸ್ ಒಟ್ಟಿಗೆ 3 ಸಾವಿರ ಚಿಲ್ಲರೆ ರೂಪಾಯಿ ಕೊಡಬೇಕಾದರೆ ರೈತ ಯಾವ ರೀತಿ ಟ್ರಾಕ್ಟರ್ ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡಬೇಕು. ಆಮೇಲೆ ರೋಗರುಜಿನಗಳಾಗಿ ಬೆಳೆ ಹೋದರೆ ಒಂದು ವರ್ಷ ಕಂತು ಕಟ್ಟದೇ ಹೋದರೆ 10 ಪರ್ಸೆಂಟು ಪೀನಲ್ ಇಂಟರೆಸ್ಟ್ ವಸೂಲ್ಮಾಡುತ್ತಾರೆ. ಈಗಿರುವ ಎಲ್ಲಾ ಇಲಾಖೆಯಲ್ಲಿ ನಾರ್ಮಲ್ ಇಂಟರೆಸ್ಟ್ ಮೇಲೆ ಪೀನಲ್ ಇಂಟರೆಸ್ಟ್ ಒಂದು ಪರ್ಸೆಂಟ್ ಮಾತ್ರ ಹಾಕುತ್ತಾರೆ. ಈ ರೀತಿ 4 ಪರ್ಸೆಂಟು ಹೆಚ್ಚು ಪೀನಲ್ ಇಂಟರೆಸ್ಟ್ ಹಾಕುವುದು ಖಂಡಿತ ಎಲ್ಲೂ ಇಲ್ಲ. ಮತ್ತು ಈ ರೀತಿ ಸ್ಟ್ಯಾಂಪ್‌ಡ್ಯೂಟಿ ಕೊಡತಕ್ಕದ್ದು, ಸೇಲ್ಸ್‌ಟ್ಯಾಕ್ಸ್ ಕೊಡತಕ್ಕದ್ದು ರೈತನಿಗೆ ತುಂಬಾ ತೊಂದರೆಯಾಗುತ್ತಾ ಇದೆ. ದಯವಿಟ್ಟು ಇದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಈಗ ಇಲಾಖೆಯವರು ಇಟ್ಟಿರುವ ಈ ವ್ಯವಸ್ಥೆಯನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಗೆ ವಹಿಸುತ್ತಾರೆಂದು ತಿಳಿದುಬಂದಿದೆ. ಈ ರೀತಿ ಕೊಡುವುದರಿಂದ ಅವರು 11 ಪರ್ಸೆಂಟು ಹಾಕುತ್ತಾರೆ. ಅದು ತುಂಬಾ ಕಷ್ಟವಾಗುತ್ತದೆ. ದಯವಿಟ್ಟು ಅದನ್ನು ಮಾಡಬಾರದು ಎಂದು ಹೇಳುತ್ತೇನೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳುವುದಾದರೆ ಹೆಚ್ಚಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರು ಜಿಲ್ಲೆಗೆ ಅನ್ಯಾಯ ಮಾಡಿದ್ದಾರೆ. ಅದೂ ಏನೂ ಕೆಲಸ ಮಾಡುತ್ತಾ ಇಲ್ಲ. ಡಿವಿಷನ್, ಸಬ್‌ಡಿವಿಷನ್‌ನಲ್ಲಿರುವ ಕೆಲಸಗಾರರ ಲೆಕ್ಕ ತೆಗೆದುಕೊಂಡರೂ 25 ಪರ್ಸೆಟು ಮಾತ್ರ ಕೆಲಸ ಮಾಡುತ್ತಾ ಇದೆ. ಇದು ತುಂಬಾ ಅನ್ಯಾಯ. ಅಗ್ರಿಕಲ್‌ಚರ್ ರೀಫೈನಾನ್ಸಿಂಗ್ ಕಾರ್ಪೋರೇಷನ್‌ನಿಂದ ಹಣ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ಸಹಾಯ ಪಡೆಯುವಾಗ್ಗೆ ಕೂಸು ಬಡವು ಆಗುತ್ತದೆ. ಸರ್ಕಾರದವರೇ ಇದನ್ನು ವಹಿಸಿಕೊಂಡು ಸಾಕಷ್ಟು ಹಣ ಒದಗಿಸಿ ಬೆಂಗಳೂರು ಜಿಲ್ಲೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಬೆಂಗಳೂರಿನಲ್ಲಿ ಕೆಂಪು ಭೂಮಿ ಇದೆ. ಅದು ಶ್ರೇಷ್ಠವಾದ ಭೂಮಿ. ಇಲ್ಲಿ ಏತಕ್ಕೆ ಸಾಯಿಲ್ ಕನ್‌ಸರ್ವೇಷನ್ ಮಾಡ ಲಿಲ್ಲವೋ ಗೊತ್ತಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಸಹಾಯ ಮಾಡಿದರೆ ವ್ಯವಸಾಯಕ್ಕೆ ಪ್ರೋತ್ಸಾಹ ಸಿಕ್ಕುತ್ತದೆ. ಇನ್ನು ರೈತನಿಗೆ ಯಾವತ್ತೂ ಕಷ್ಟ ಇದೆ. ಅದನ್ನು ಗಮನಿಸಿ ಮುಖ್ಯ ಮಂತ್ರಿಗಳು ಸಹಾಯ ಮಾಡಬೇಕು ಎಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ 10, 14, 16, 20, 24, 44ನೇ ಡಿಮ್ಯಾಂಡುಗಳನ್ನು ಬಹಳ ಪ್ರೀತಿಯಿಂದ ಸ್ವಾಗತಿಸುತ್ತೇನೆ. ಈ ಸಮಯದಲ್ಲಿ ಒಂದೆರಡು ಮಾತುಗಳನ್ನು ಮಂತ್ರಿಗಳ ಗಮನಕ್ಕೆ ತರಬೇಕು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯವಾಗಿದೆ. ವ್ಯವಸಾಯ ಬಹಳ ಕಷ್ಟ ಎಂದು ನಮ್ಮ ಪೂರ್ವೀಕರು ಹೇಳುತ್ತಾ ಇದ್ದರು ಮತ್ತು ಹಣ ಇದ್ದವನಿಗೆ ಆರಂಭ ಎಂದು. ಯಾವ ರೈತನ ಹತ್ತಿರ ನೋಡಿದರೂ ಹಣ ಎನ್ನತಕ್ಕಂಥಾದ್ದು ಶೂನ್ಯವಾಗಿದೆ. ನಮ್ಮ ಸರ್ಕಾರದವರು ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ, ಆದರೆ ಸಾಲದು. ಒಂದು ಬಾವಿಗೆ 5 ಸಾವಿರ ರೂಪಾಯಿ ಸಾಲ ಕೊಡುತ್ತಾರೆ ಆದರೆ 5 ಸಾವಿರಕ್ಕೆ ಬಾವಿ ಆಗುವುದಿಲ್ಲ. ಕೆಲವು ಕಡೆ ಸುಮಾರು

10–15 ಸಾವಿರ ರೂಪಾಯಿ ಬೀಳುತ್ತದೆ. ಅವನಿಗೆ ಇರತಕ್ಕದ್ದು 3–4 ಎಕರೆ ಜಮೀನು. ಈ ಬಾವಿ ಕಂಟಕ್ಕೆ ಬರುವುದರಲ್ಲಿ ಅವನು ಕೈ ಬಿಡುತ್ತಾನೆ. ಬೆಳೆ ಇಡಬೇಕು ಎಂದರೆ ಜಮೀನಿನ ಮೇಲೆ ಸಾಲ ಕೊಡುವ ಮಹಾನುಭಾವರು ಯಾರೂ ಇಲ್ಲ. ಸರ್ಕಾರದವರು ಕೊಡುವುದಿಲ್ಲ. ಲ್ಯಾಂಡ್ ಮಾರ್ಟ್‌ಗೇಜ್‌ನವರು ಅದಕ್ಕೆ ಕ್ಲಿಯರೆನ್ಸ್ ಸರ್ಟಿಫಿಕೇಟ್ ಇಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಬಾವಿಗಾಗಲಿ, ಲ್ಯಾಂಡ್ ಇಂಪ್ರೂವ್‌ಮೆಂಟ್‌ಗೆ ಲೋನ್ ಆಗಲಿ, ಜಮೀನು ಅಬಾದು ಮಾಡುವುದಕ್ಕಾಗಲಿ ಅದಕ್ಕೆ ಬೇಕಾದಂಥ ಸಹಾಯವನ್ನು ಒದಗಿಸಿಕೊಡಬೇಕು. ಈ ದಿವಸ ಬಾವಿಗೆ 4 ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ. ಈವರೆಗೆ ಬೇಕಾದಷ್ಟು ಕೊಟ್ಟಿದ್ದಾರೆ ಇನ್ನೂ ಒಂದು ಸಾವಿರ ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದು ಸ್ತುತ್ಯವಾದ ಕಾರ್ಯ. ಆದರೆ 5 ಸಾವಿರ ರೂಪಾಯಿನಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಈವೊತ್ತಿನ ದಿವಸ ನಾವು ಬೇರೆ ದೇಶದಲ್ಲಿ ಸೆರಗೊಡ್ಡಿ ನಮಗೆ ಅನ್ನ ಅನ್ನ ಎಂದು ಹೇಳತಕ್ಕ ಕಾಲ ಬಂದಿದೆ. ಇದು ಹೋಗಬೇಕಾದರೆ ರೈತ ಸಮೃದ್ಧಿ ಆಗಿರಬೇಕು. ರೈತನು ಹೆಚ್ಚಿಗೆ ಬೆಳೆಯಬೇಕು. ಅವನು ಹೆಚ್ಚಿಗೆ ಬೆಳೆದರೆ ಪಟ್ಟಣದಲ್ಲಿ ಇರತಕ್ಕವರಿಗೆ ದವಸ ಸಪ್ಲೈ ಮಾಡುವುದಕ್ಕೆ ಬರುತ್ತದೆ. ಇವೊತ್ತಿನ ದಿವಸ ಬೆಂಗಳೂರಿನ ಪಟ್ಟಣದಲ್ಲಿ ಒಂದು ಕೆ.ಜಿ.ಗೆ 3–4 ರೂಪಾಯಿ ಕೊಟ್ಟು ತಿನ್ನತಕ್ಕ ಜನ ಇದ್ದಾರೆ. ಅವರು ಹೀಗೆ ಇರುವುದಕ್ಕೆ ಅನೇಕ ಕಾರಣಗಳು ಇವೆ. ಆ ಕಾರಣಗಳಿಂದ ಅವರು ಸಮೃದ್ಧಿ ಆಗಿದ್ದಾರೆ. ಕೆಲವು ಹಳ್ಳಿಯಲ್ಲಿ ಹೋಗಿ ನೋಡಿದರೆ ಮನೆಯಲ್ಲಿ ಕುಡಿಯತಕ್ಕ ಲೋಟ, ಚೆಂಬು, ಬಿಂದಿಗೆ ಯಾವುದೂ ಇರುವುದಿಲ್ಲ. ಇಂತಹ ಕಷ್ಟದ ಊರುಗಳು ಎಷ್ಟೋ ಇವೆ. ಇದನ್ನು ಸರಿಮಾಡಬೇಕು. ರೈತನ ಜಮೀನು ದೇಶದ ಸ್ವತ್ತು ಆಗಿರುತ್ತದೆ. ಆದುದರಿಂದ 10–15 ಸಾವಿರ ರೂಪಾಯಿಯವರೆಗೂ ಜಮೀನಿನ ಮೇಲೆ ಸಾಲ ಕೊಟ್ಟರೆ ರೈತನಿಗೆ ಅನುಕೂಲವಾಗುತ್ತದೆ. ಆ ಜಮೀನನ್ನು ಕಳೆದುಕೊಳ್ಳುವುದಕ್ಕೆ ತಯಾರಾಗಿರುವುದಿಲ್ಲ. ಇಡೀ ಮೈಸೂರು ದೇಶದಲ್ಲಿ ರೈತರಿಗೆ ಕೊಟ್ಟಿರುವ ಸಾಲ 20 ಕೋಟಿ ರೂಪಾಯಿ ಮಾತ್ರ. ಅದು ಬಹಳ ಕಡಿಮೆ. ನೂರಾರು ಕೋಟಿ ರೂಪಾಯಿ ಕೊಟ್ಟರೆ ಪರದೇಶಕ್ಕೆ ಹೋಗಿ ಅನ್ನ ಬೇಡತಕ್ಕದ್ದು ಹೋಗುತ್ತದೆ. ಈಗ ನಮಗೆ ಒಂದು ಆನಂದ ಏನೆಂದರೆ, ಅಗ್ರಿಕಲ್ಚರ್ ಮತ್ತು ಇಂಡಸ್ಟ್ರಿ ಒಬ್ಬ ಮಂತ್ರಿಗಳ ಕೈಯ್ಯಲ್ಲಿ ಇದೆ. ಇದು ಶುಭವಾರ್ತೆ. ಮತ್ತು ಈಗ ಪಂಪುಸೆಟ್ಟುಗಳಿಗೆ ಸಾಲವನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಕೊಡುತ್ತಾರೆ ಎಂದು ಹೇಳುತ್ತಾರೆ. ಅವರು ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗ ಇರತಕ್ಕಂಥಾದ್ದನ್ನೇ ಮುಂದುವರಿಸಬೇಕು ಎಂದು ಮಾನ್ಯ ಮಂತ್ರಿಗಳವರಿಗೆ ಕೇಳಿಕೊಳ್ಳುತ್ತೇನೆ. ಮತ್ತು ಇನ್ನೊಂದು ವಿಷಯ ಪ್ರತಿಯೊಂದು ತಾಲ್ಲೂಕಿನ ಸೆಂಟರಿನಲ್ಲೂ ಕೆಮಿಕಲ್ ಮಿಕ್ಸ್ಚರ್ ಕೊಡಬೇಕಾದರೆ ಎಲ್ಲದಕ್ಕೂ ಒಂದೇ ಮಂತ್ರ. ಎಲ್ಲಾ ರೋಗಕ್ಕೂ ಕರಕಾಯಿ ಔಷಧಿ ಎಂದು ಹಿರಿಯರು ಹೇಳುತ್ತಾರೆ. ಹಾಗೆ ಒಂದು ಜಮೀನನ್ನು ತೆಗೆದುಕೊಂಡರೆ ಒಂದೇರೀತಿಯ ಅಮೋನಿಯಮ್ ಸಲ್ಫೇಟ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಹಳ್ಳಿಯ ಒಂದು ಜಮೀನಿನಲ್ಲಿ ಯಾವ ಬಾಬು ಹೆಚ್ಚಾಗಿದೆಯೋ ಅದೇ ಬಾಬನ್ನು ಹಾಕಿದರೆ ಬೆಳೆಗಳು ಫೈಲ್ಯೂರ್ ಆಗುತ್ತವೆ. ಆಯಾಯ ತಾಲ್ಲೂಕು ಸೆಂಟರಿನಲ್ಲಿ ಜಮೀನನ್ನು ಟೆಸ್ಟ್ ಮಾಡಿ ಇಂತಹ ಸಾಮಾನು ಕಡಿಮೆ ಇದೆ, ಇದೇ ಮಿಕ್ಸ್ಚರ್ ಹಾಕಬೇಕು ಎನ್ನುವ ಸಲುವಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಜಮೀನುಗಳನ್ನು ಪರೀಕ್ಷೆ ಮಾಡುವುದಕ್ಕೋಸ್ಕರ ಡಿಪಾರ್ಟ್‌ಮೆಂಟಿನವರು ಒಂದು ಸೆಂಟರನ್ನು ತೆಗೆಯಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಆಮೇಲೆ ಟ್ರಾಕ್ಟರುಗಳ ವಿಷಯಕ್ಕೆ ಬಂದರೆ—ಸರ್ಕಾರದವರು ನಾವು ಟ್ರಾಕ್ಟರುಗಳನ್ನು ತರಿಸಿ ಕೊಟ್ಟು ಸಹಾಯ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅವು ಸಾಲದು. ಈ ದಿವಸ ಸರ್ಕಾರದವರು ಸುಮಾರು 280 ಟ್ರಾಕ್ಟರುಗಳನ್ನು ನೂರಾರು ಎಕರೆ ಭೂಮಿ ಇರತಕ್ಕ ಜನರಿಗೆ ಅವುಗಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಅದರಿಂದ ಸಣ್ಣಪುಟ್ಟ ಜಮೀನ್ದಾರರಿಗೇನೂ ಪ್ರಯೋಜನವಿಲ್ಲ. 10 ಎಕರೆ ಜಮೀನಿರತಕ್ಕವರಿಗೂ ಟ್ರಾಕ್ಟರುಗಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕು. ಇದರಲ್ಲಿ ಇನ್ನೊಂದು ವಿಚಾರವೇನೆಂದರೆ ಇವುಗಳನ್ನು ತೆಗೆದುಕೊಳ್ಳಬೇಕಾಗಿದ್ದರೆ ಸಾವಿರಕ್ಕೆ 60 ರೂಪಾಯಿಗಳ ಪ್ರಕಾರ ಖರ್ಚುಬರುತ್ತಿದೆ. ಈ ದಿವಸ ಲ್ಯಾಂಡ್ ಡೆವಲಪ್‌ಮೆಂಟ್ ಸೊಸೈಟಿಗಳಲ್ಲಿ ಬಾಕಿ ಕಾಗದ ಪತ್ರಗಳು ಹೇಗೆ ರಿಜಿಸ್ಟರಾಗುತ್ತಿವೆಯೋ ಆ ಪ್ರಕಾರ ಇಲ್ಲಿಯೂ ಮಾಡಬೇಕೆಂದು ನಾನು ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹೇಳಬೇಕೆಂದರೆ ಈ ಅಗ್ರಿಕಲ್ಚರಿಸ್ಟ್ ಬಗ್ಗೆ ಇನ್ನೂ ಬೇಕಾದಷ್ಟು ತೊಂದರೆಗಳಿವೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಹಳ್ಳಿಯಿಂದಲೇ ಬಂದಿರತಕ್ಕವರಾಗಿದ್ದಾರೆ. ಅವರಿಗೆ ಹಳ್ಳಿಯ ಜನರ ತೊಂದರೆಗಳೇನೆಂಬುದು ಚೆನ್ನಾಗಿ ಗೊತ್ತಿದೆ. ಮೊದಲು ಅವರು ಸಿದ್ಧವ್ವನಹಳ್ಳಿಯಲ್ಲಿದ್ದರು. ಅವರಿಗೆ ಈ ಹಳ್ಳಿಯ ಜನರ ವ್ಯವಹಾರಗಳೆಲ್ಲಾ ವೇದ್ಯವಾಗಿವೆ. ಈ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಕೈಲಿ ವ್ಯವಸಾಯ ಮತ್ತು ಕೈಗಾರಿಕೆಗಳೆರಡೂ ಇವೆ.

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಆದುದರಿಂದ ಅವರು ಈ ಎರಡು ಬಾಬಿನಲ್ಲೂ ಹಳ್ಳಿಯ ಜನರಿಗೆ ಅದಷ್ಟೂ ಅನುಕೂಲ ಮಾಡಿಕೊಡ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳ ವಿಚಾರಕ್ಕೆ ಬಂದರೆ—ಅವುಗಳೆಲ್ಲಾ ಈ ಬೆಂಗಳೂರಿನ ಸುತ್ತ ಮುತ್ತಲೂ 2-3 ಮೈಲಿಗಳಲ್ಲಿ ಅವರಿಸಿಕೊಂಡಿವೆ. ಹೀಗೆ ಇಲ್ಲಿರತಕ್ಕ ಜನರಿಗೆ ಇಂಥ ಒಂದು ಅನುಕೂಲವನ್ನು ಮಾಡಿಕೊಟ್ಟಿರುವುದರಿಂದ ಈ ಬೆಂಗಳೂರಿನಲ್ಲಿರತಕ್ಕ ಜನರು ದಿನ ದಿನಕ್ಕೂ ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಇಲ್ಲಿರತಕ್ಕ ಜನರ ಜೀವನ ಬಹಳ ಅನುಕೂಲ ವಾಗಿ ಸಾಗುತ್ತಿದೆ. ಇದನ್ನು ಕಂಡು ಹಳ್ಳಿಗಳಲ್ಲಿದ್ದ ಜನರೆಲ್ಲರೂ ಬಂದು ಪಟ್ಟಣ ಸೇರು ತ್ತಿದ್ದಾರೆ. ಹೀಗಾಗಿ ಈ ದಿವಸ ಹಳ್ಳಿಗಳೆಲ್ಲಾ ಹಾಳಾಗುತ್ತಿವೆ. ಈ ಹಿಂದೆ ಇದ್ದ ಕೆಂಪೇಗೌಡನು ಈ ಬೆಂಗಳೂರಿಗೆ ನಾಲ್ಕು ದಿಕ್ಕುಗಳಲ್ಲೂ ಈ ನಗರ ಅದಕ್ಕಿಂತ ಜಾಸ್ತಿಯಾಗಿ ವಿಸ್ತಾರವಾಗಬಾರದೆಂದು ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲೂ ಹದ್ದುಬಸ್ತನ್ನು ನಿಗದಿ ಮಾಡಿ ದ್ದುದು ಈ ದಿವಸ ದಾಟಿಹೋಗಿದೆ. ಅದು ದಾಟಿದರೆ ಈ ಪಟ್ಟಣ ಹಾಳಾಗುತ್ತದೆಂದು ಆತನು ಹೇಳಿದ್ದನು. ಆದುದರಿಂದ ಇನ್ನುಮೇಲೆ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಬದಲು ಅವು ಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸುವುದಕ್ಕೆ ಪ್ರಯತ್ನಮಾಡಿ ತಾಲ್ಲೂಕಾಮಳೆ ಇರತಕ್ಕ ಬಡವರಿಗೂ ಮತ್ತು ನಿರುದ್ಯೋಗಿಗಳಿಗೂ ಜೀವನಕ್ಕೆ ಒಂದು ಮಾರ್ಗ ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿವಸ ಪ್ರತಿಯೊಂದು ತಾಲ್ಲೂಕಿ ನಲ್ಲೂ ಎಸ್.ಎಸ್.ಎಲ್.ಸಿ. ಓದಿದ ಅಂದರೆ ಅದನ್ನು ಪಾಸ್ ಮಾಡಿರತಕ್ಕ ಸಾವಿರಾರು ಜನ ಜೀವನಕ್ಕೆ ಮಾರ್ಗವಿಲ್ಲದೆ ತಾಯಿತಂದೆಗಳಿಗೆ ಭಾರವಾಗಿದ್ದಾರೆ. ಅವರೆಲ್ಲರಿಗೂ ಸರ್ಕಾರದವರು ಈಗ ಕೆಲಸವನ್ನು ಒದಗಿಸಿಕೊಡಬೇಕಾಗಿದೆ. ಆದುದರಿಂದ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕೈಗಾರಿಕೆಯನ್ನು ಸ್ಥಾಪಿಸಿದರೆ ಅಲ್ಲಿರತಕ್ಕ ಬಡವರಿಗೂ ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೂ ಬಹಳ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅದನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೆ ಅವರು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸತಕ್ಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಜನರಿಗೆ ಅನುಕೂಲವಾಗತಕ್ಕ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಕಣ್ಣಲ್ಲಿ ನೋಡತಕ್ಕ ಅವಕಾಶವನ್ನು ಉಂಟುಮಾಡಲು ದೇವರು ಅವರಿಗೆ ಆಯು ರಾರೋಗ್ಯಗಳನ್ನು ಕೊಡಲೆಂದು ಹಾರೈಸುತ್ತೇನೆ.

ಇನ್ನು ನಮ್ಮ ಎದುರು ಪಕ್ಷದವರು ಮಾತನಾಡುತ್ತಾ ಈ ಸರ್ಕಾರವನ್ನು ಹೇಡಿ ಸರ್ಕಾರ ಎಂದು ಹೇಳಿದರು. ಹಾಗೆ ಇದನ್ನು ಯಾರು ಹೇಡಿ ಸರ್ಕಾರ ಎಂದು ಹೇಳಿದರೋ ಅವರು ಮೊದಲು ಯಾವ ಸಂಸ್ಥೆಯಲ್ಲಿದ್ದರು, ಅವರು ಯಾವ ಗರಡಿಯಲ್ಲಿ ತಯಾರಾದರು, ಎಂಬುದನ್ನು ಗಮನದಲ್ಲಿಟ್ಟು ಕೊಳ್ಳದೆ ಹಾಗೆ ಮಾತನಾಡಿದ್ದಾರೆ. ಇದನ್ನು ಯಾರು ಹಾಗೆ ಹೇಡಿ ಸರ್ಕಾರ ಎಂದು ಬಿಟ್ಟು ಹೋದರೋ ಅವರು ಈ ದಿವಸ ಬೇರೆ ಪಕ್ಷದಲ್ಲಿ ಕುಳಿತು ಹಾಗೆ ಮಾತನಾಡತಕ್ಕವರು ಹೇಡಿಗಳೋ ಅಥವಾ ಇಲ್ಲಿ ಕುಳಿತು ಧೈರ್ಯದಿಂದ ಆಡಳಿತ ನಡೆಸತಕ್ಕವರು ಹೇಡಿಗಳೋ ?

† ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಅಧ್ಯಕ್ಷರೇ, ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಒಬ್ಬ ಮಾನ್ಯ ಸದಸ್ಯರು ಸಭೆಯಲ್ಲಿಲ್ಲದಿರುವಾಗ ಇನ್ನೊಬ್ಬ ಸದಸ್ಯರು ಅವರ ವಿಚಾರವನ್ನೆತ್ತಿ ಮಾತನಾಡಬಹುದೇ ? ಇದಕ್ಕೆ ತಮ್ಮ ರೂಲಿಂಗ್ ಕೊಡಬೇಕು.

Mr. CHAIRMAN.—Every Member is expected to sit in the House while other Members make their speeches.

ಶ್ರೀ ಎಂ. ಜಿ. ಬಣಕಾರ್.—ಆಗಲಿ ತಾವು ಏನು ಬೇಕಾದರೂ ಮಾತನಾಡಿಕೊಳ್ಳಿ. ನೀವೇ ಧೀರಾಧಿ ಧೀರರು, ಶೂರಾಧಿ ಶೂರರು.

ಚೇರ್ಮನ್ ಅವರು.—ಸಭೆಗೆ ಬಂದ ಸದಸ್ಯರು ಯಾವಾಗಲೂ ಸಭೆಯಲ್ಲಿ ಹಾಜರಿರಬೇಕೆಂದು ರೂಲ್ಸಿನಲ್ಲಿದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಯಾರು ಈ ದಿವಸ ನಮ್ಮ ಸಂಸ್ಥೆಯನ್ನೂ ಮತ್ತು ನಮ್ಮ ಪಕ್ಷವನ್ನು ಬಿಟ್ಟುಹೋಗಿದ್ದಾರೋ ಅವರು ಅವರಿಗೆ ಒಂದು ಅಧಿಕಾರ ಮತ್ತು ಹಣದಾಸೆಗಾಗಿ ಅವಕಾಶ ಇಲ್ಲಿ ಸಿಕ್ಕಲಿಲ್ಲ ಎಂದು ಬಿಟ್ಟುಹೋಗಿದ್ದಾರೆ. ನಿನ್ನೆಯ ದಿವಸ ಮಾನ್ಯ ಶಿವಪ್ಪನವರು ಮಾತನಾಡುತ್ತಾ ಹೇಳಿದರು......

Sri K. H. PATIL.—The Hon'ble Member has accused the Opposition that they have left the Congress on account of the fact that they are after money, they are after power and like that. He cannot make such sweeping remarks without naming the persons. There may be persons. I do not disagree with him. There may not be any person. I would like to request him to name the person if he knows anybody. Otherwise it applies to every one.

Mr. CHAIRMAN.—I understand it is a question of comment. No point of order arises.

Sri K. H. PATIL.—If it is a personal attack, then it will give us right of reply. Unfortunately he is making general remarks.

Mr. CHAIRMAN.—When a finding is given, there is no point in arguing.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರ್ವಾಡ—ಗ್ರಾಮಾಂತರ).—ಪಾಯಿಂಟ್ ಆಫ್ ಆರ್ಡರ್, ಸಾರ್—ಈ ದಿವಸ ವಿರೋಧಪಕ್ಷದ ಮಾನ್ಯ ಸದಸ್ಯರು ನಿಜವಲ್ಲದ ವಿಷಯವನ್ನು ಹೇಳುತ್ತಿದ್ದಾರೆ ನೀವು ನಿಜವಲ್ಲದ ವಿಷಯ ಹೇಳುತ್ತಿದ್ದೀರಿ ಎಂದರೆ ಅವರಿಗೇಕೆ ಅಷ್ಟು ಕೋಪ ಬರಬೇಕು? ಇದ್ದುದನ್ನು ಇದ್ದಹಾಗೆ ಹೇಳಿದರೆ ಇವರಿಗೇಕೆ ಇಷ್ಟು ಕೋಪ? ಅದನ್ನೇಕೆ ಇವರು ಇಷ್ಟು ದೊಡ್ಡದು ಮಾಡುತ್ತಿದ್ದಾರೆ? ತಾವು ರೂಲಿಂಗ್ ಕೊಡಬೇಕು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನಮ್ಮಲ್ಲಿಂದ 20 ಜನರು ಬಂದರೆ ಸಾಕು ಅವರು ಒಂದು ಸರ್ಕಾರವನ್ನು ರಚನೆ ಮಾಡುತ್ತೇವೆಂಬ ಒಂದು ಮಾತನ್ನು ಹೇಳಿದ್ದಾರೆ. ಆದರೆ ಅದೊಂದು ಹಗಲು ಕನಸನ್ನು ಅವರು ಕಾಣುತ್ತಿದ್ದಾರೆಂದು ನಾನು ಹೇಳುತ್ತೇನೆ. ನಮ್ಮ ಪಕ್ಷದಲ್ಲಿ ಅಂಥಾ ಸದಸ್ಯರಾರೂ ಇಲ್ಲ. ಇಂಥ ಮಾತನ್ನು ಹೇಳಬೇಕಾದರೆ ಅವರು ತಮ್ಮ ಹೃದಯವನ್ನು ಮುಟ್ಟಿನೋಡಿಕೊಳ್ಳಬೇಕು. ನಾನು ಇಷ್ಟನ್ನು ಹೇಳಿ ನನಗೆ ಈ ಒಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಸಾಮಾನ್ಯ ಆಡಳಿತ, ವ್ಯವಸಾಯ ಹಾಗೂ ಕೈಗಾರಿಕೆಗಳ ಬೇಡಿಕೆಗಳನ್ನೇನು ಮಂಡಿಸಿದ್ದಾರೆ ಅವುಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಸಾಮಾನ್ಯ ಆಡಳಿತ ಹಾಗೂ ಕೈಗಾರಿಕೆಗಳ ಬಗ್ಗೆ ಹೇಳಬೇಕೆಂದು ಅಪೇಕ್ಷಿಸುತ್ತೇನೆ.

ಆಡಳಿತ ಒಂದರ ವಿಚಾರದಲ್ಲಿ ಸಾಮಾನ್ಯ ಜನತೆಯನ್ನು ಈ ಸರ್ಕಾರ ಎಂಥಾ ಒಂದು ಇಕ್ಕಟ್ಟಿಗೆ ಸಿಕ್ಕಿಸಿದೆ, ಆದರಿಂದ ಅವರನ್ನು ಹೇಗೆ ಪಾರುಮಾಡುತ್ತಾರೆ ಎಂಬುದನ್ನು ತಿಳಿಸತಕ್ಕ ಒಂದು ಎದೆಗಾರಿಕೆ ಮುಖ್ಯಮಂತ್ರಿಗಳಾಗಲೀ ಅಥವಾ ಬೇರೆ ಇನ್ನಾವ ಮಂತ್ರಿಗಳಿಗಾಗಲೀ ಇಲ್ಲದಿರುವುದರಿಂದ, ಅಂಥಾ ಒಂದು ಧೈರ್ಯವಿಲ್ಲದಿದ್ದರೂ, ಈ ಹಣವನ್ನು ಕೇಳತಕ್ಕ ಎದೆಗಾರಿಕೆ ಹೇಗೆ ಬಂತು ಎಂಬುದೇ ತಿಳಿಯುತ್ತಿಲ್ಲ. ಈ ದಿವಸ ನಮ್ಮ ಸರ್ಕಾರ ಅಭಿವೃದ್ಧಿ ಅಲ್ಲದ ಬಾಬುಗಳಿಗೆ ಸುಮಾರು ಶೇಕಡ 30ರಷ್ಟು ಹಣವನ್ನು ಹೆಚ್ಚಾಗಿ ಖರ್ಚುಮಾಡುತ್ತಿದ್ದಾರೆ. ಇದಕ್ಕೆ ಕಾರಣ ಕೂಡ ಒಂದು ಕಡೆ ಹೇಳಿದ್ದಾರೆ. ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಆಫೀಸರ್ಸ್‌ಗಳಿಗೆ ಡಿಯರ್ನೆಸ್ ಅಲೋಯನ್ಸ್ ಜಾಸ್ತಿ ಮಾಡಬೇಕಾಯಿತು ಎಂದು ಹೇಳಿದ್ದಾರೆ. ಇದು ಸ್ವಲ್ಪಮಟ್ಟಿಗೆ ಕಾರಣವಿರಬಹುದು. ಆದರೆ ಅದೇ ಒಂದು ಕಾರಣವಲ್ಲ ಎಂಬುದು ಸ್ಪಷ್ಟವಾಗಿದೆ. ಪಿಕ್ಚರ್ ಆಫ್ ಮೈಸೂರು ಬಜೆಟಿನಲ್ಲಿ ಇರತಕ್ಕಂಥ ಅಂಕಿಅಂಶಗಳ ಆಧಾರದಮೇಲೆ ನೋಡಿದರೂ ಸಹ ಈ ದಿನ ಆಫೀಸರ್ಸ್ ಸಂಬಳದ ಬಗ್ಗೆ ಎಷ್ಟು ಜಾಸ್ತಿಯಾಗಿದೆ ಬೇರೆ ಎಸ್ಟಾಬ್ಲಿಷಮೆಂಟ್ ಅಂದರೆ ನಾನ್ ಗೆಜಿಟೆಡ್ ಮತ್ತು ಇತರೇ ಕೆಳದರ್ಜೆ ನೌಕರರ ಬಗ್ಗೆ ಎಷ್ಟು ಜಾಸ್ತಿಯಾಗಿದೆ ಎಂಬುದನ್ನು ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. 1961-62 ರಲ್ಲ ಆಫೀಸರ್ಸ್ ಬಗ್ಗೆ 179.03 ಲಕ್ಷ ಇದ್ದುದು 1966-67 ರಲ್ಲಿ 274.06 ಲಕ್ಷ ಆಗಿದೆ. ನಾನ್ ಗೆಜಿಟೆಡ್ ಬಗ್ಗೆ 1961-62 ರಲ್ಲಿ 161.45 ಇದ್ದುದು 1965-66 ನಲ್ಲಿ 2127 ಲಕ್ಷ ಆಗಿದೆ. ಇದನ್ನು ನೋಡಿದರೆ ಆಫೀಸರ್ಸ್‌ಗಳ

(ಶ್ರೀ ಎಂ. ಎಸ್. ಕೃಷ್ಣನ್)

ಸಂಬಳ ಜಾಸ್ತಿ ಖರ್ಚಾಗಿದೆ. ಇದಕ್ಕೆ ಕಾರಣವೇನೆಂದರೆ, ಹೆಚ್ಚು ಸಂಖ್ಯೆಯಲ್ಲಿ ಆಫೀಸರ್ಸ್ ನೇಮಕ ಮಾಡಿದ್ದೀರಿ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೊಸ ಹೊಸ ಹುದ್ದೆಗಳನ್ನು ಸರಕಾರ ಸೃಷ್ಟಿಮಾಡಿ ತಮಗೆ ಇಷ್ಟ ಬಂದವರಿಗೆ ಈ ಹುದ್ದೆಗಳನ್ನು ಹಂಚಿದ್ದೀರಿ. ಸರಿಯಾದ ಆಡಳಿತ ಅಂದರೆ ಅದೇ ಬೇರೆ ಆದಷ್ಟು ಕಡಿಮೆ ಆಫೀಸರ್ಸ್‌ಗಳನ್ನು ಇಟ್ಟುಕೊಂಡು ಜಾಸ್ತಿ ನಾನ್‌ಗೆಜೆಟೆಡ್ ನೌಕರರನ್ನು ಇಟ್ಟುಕೊಳ್ಳುವ ಪದ್ಧತಿ ಹಿಂದಕ್ಕೆ ನಮ್ಮ ರಾಜ್ಯದಲ್ಲಿ ಇದ್ದಿತು. ಈಗ ಆಫೀಸರ್ಸ್‌ಗಳ ಪ್ರಮಾಣ ಜಾಸ್ತಿಯಾಗಿದೆ. ಈ ಮಟ್ಟದಲ್ಲಿ ಆಡಳಿತ ನಡೆದರೆ ಹೆಚ್ಚು ಹಣ ಖರ್ಚಾಗುತ್ತದೆ. ತಮಗೆ ಇಷ್ಟ ಬಂದವರಿಗೆ ಎಲ್ಲ ಮುಖ್ಯ ಹುದ್ದೆಗಳಲ್ಲಿ ನೇಮಕ ಮಾಡಿದ್ದೀರಿ. ಆಡಳಿತ ವೆಚ್ಚ ಕಡಿಮೆ ಮಾಡುವುದಕ್ಕೆ ಹಿಂದಕ್ಕೆ ಎ. ಜಿ. ರಾಮಚಂದ್ರರಾಯರ ಸಮಿತಿ ಎಂದು ಮಾಡಿದ್ದಿರಿ. ಅದರಲ್ಲಿ ಇದನ್ನು ಹೇಳಿದೆ. ಮೈಸೂರು ರಾಜ್ಯದ ಸೆಕ್ರೆಟೇರಿಯೆಟ್ಟು ಮದ್ರಾಸ್ ರಾಜ್ಯದ ಸೆಕ್ರೆಟೇರಿಯೆಟ್ಟಿಗಿಂತ ದೊಡ್ಡದು ಎಂದು ಅದರಲ್ಲಿ ಹೇಳಿದ್ದಾರೆ. ಮದ್ರಾಸ್ ರಾಜ್ಯದ ಜನಸಂಖ್ಯೆ ಎಷ್ಟು, ಮೈಸೂರು ರಾಜ್ಯದ ಜನಸಂಖ್ಯೆ, ಎಷ್ಟು ಅಲ್ಲಿ ಕೆಲಸ ಮಾಡತಕ್ಕಂಥ ನೌಕರರು ಎಷ್ಟು, ಇಲ್ಲಿ ಕೆಲಸ ಮಾಡ ತಕ್ಕಂಥ ನೌಕರರು ಎಷ್ಟು ಇದನ್ನು ಯೋಚನೆ ಮಾಡಿ ನೋಡಿದರೆ ಇಲ್ಲಿ ಇಷ್ಟು ಜನ ಬೇಕೇ ? ಇಷ್ಟು ಜನ ಬೇಕಾಗಿಲ್ಲ, ಆಫೀಸರ್ಸ್ ಬೇಕಾಗಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಇಷ್ಟು ಹಣ ಖರ್ಚು ಮಾಡಿದರೂ ಸಹ ಆಫೀಸರ್ಸ್‌ಗಳಲ್ಲಿ ದಕ್ಷತೆ ಜಾಸ್ತಿಯಾಗಿದೆಯೇ ? ನನ್ನ ಅಭಿಪ್ರಾಯದಲ್ಲಿ ಹಾಗು ಪ್ರತಿಯೊಬ್ಬರ ಅನುಭವದಲ್ಲಿ ಇರುವ ಹಾಗೆ, ಯಾವ ಪ್ರಶ್ನೆ ಬಂದರೂ ಈ ಸರಕಾರದಲ್ಲಿ ಬೇಗ ಬಗೆ ಹರಿಸುವಂತೆಯೇ ಇಲ್ಲ. ಎ. ಜಿ. ರಾಮಚಂದ್ರರಾಯರ ಕಮಿಟಿ ವರದಿಯಲ್ಲಿ ಬರೆದಿರುವ ಹಾಗೆ ಸಾಮಾನ್ಯವಾಗಿ ಜನ ಸರಕಾರಕ್ಕೆ ಕಾಗದ ಕೊಟ್ಟರೆ ಅದರ ಬಗ್ಗೆ ಆರ್ಡರ್ ಬರೆಯುವುದಕ್ಕೆ 365 ದಿವಸಗಳಾಗುತ್ತವೆ. ಈ ಆರ್ಡರ್ ಕಾರ್ಯಗತ ಮಾಡುವುದಕ್ಕೆ ಇನ್ನೆಷ್ಟು ದಿವಸ ಬೇಕಾಗುತ್ತದೆ ಎನ್ನುವುದನ್ನು ನೀವೇ ಯೋಚನೆ ಮಾಡಬೇಕು. ಇವರೇ ಮಾಡಿದ ಕಮಿಟಿಯಲ್ಲಿ ಹೀಗೆ ಹೇಳಿದೆ. ಇದಲ್ಲದೆ ಗೊರವಾಲಾ ಕಮಿಟಿಯವರು ಸಹ ತೀರ್ಮಾನ ಕೊಟ್ಟಿದ್ದಾರೆ. ಆಡಳಿತ ದಕ್ಷತೆ ಜಾಸ್ತಿ ಯಾಗುತ್ತಿಲ್ಲ, ಆಡಳಿತ ಕುಸಿಯುತ್ತಿದೆ, ಜನ ಸಾಮಾನ್ಯರಿಗೆ ಅನ್ಯಾಯವಾಗುತ್ತಿದೆ ಎನ್ನುವುದು ಇದರಿಂದ ಎದ್ದು ಕಾಣುತ್ತದೆ. ಇವರು ಹೇಳುವುದು ಏನೆಂದರೆ ನಾನ್ ಗೆಜೆಟೆಡ್ ನೌಕರರು ಕೆಲಸ ಮಾಡುವುದಿಲ್ಲ ಎಂದು. ಈ ಅಪಾದನೆ ಸತ್ಯಕ್ಕೆ ವಿರೋಧವಾದದ್ದು. ಮುಖ್ಯವಾಗಿ ಆಡಳಿತ ಪಕ್ಷದಲ್ಲಿ ಒಂದು ಗುಂಪು ಇದೆ. ಈ ಗುಂಪಿಗೆ ಸೇರಿದವರು ತಮಗೆ ಇಷ್ಟ ಬಂದವರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ, ಪಿ. ಡಬ್ಲ್ಯು. ಡಿ. ಇಲಾಖೆ, ವಿದ್ಯಾ ಇಲಾಖೆ ಬೇರೆ ಯಾವ ಇಲಾಖೆ ತೆಗೆದುಕೊಳ್ಳಿ ಇವು ಸ್ಪಷ್ಟವಾಗಿ ಕಂಡುಬರುತ್ತದೆ. ಪಿ. ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟಿನಲ್ಲಿ ಕಾರ್ಯದರ್ಶಿ, ಚೀಫ್ ಎಂಜಿನಿಯರುಗಳು, ಎಂಜಿನಿಯರುಗಳು ಹಾಗೂ ಎಜ್ಯುಕೇಷನ್ ಡಿಪಾರ್ಟ್ ಮೆಂಟಿನಲ್ಲಿ ಡೈರೆಕ್ಟರ್ ಜಾಯಿಂಟ್ ಡೈರೆಕ್ಟರ್ ಆಫ್ ಟೆಕ್‌ನಿಕಲ್ ಎಜುಕೇಷನ್ ಯಾವ ಹುದ್ದೆ ತೆಗೆದುಕೊಂಡರೂ ಕೂಡ ಎಲ್ಲರೂ ಆಡಳಿತ ಪಕ್ಷದ ಒಂದು ಗುಂಪಿಗೆ ಸೇರಿದವರು ತಮಗೆ ಇಷ್ಟ ಬಂದವರನ್ನು ನೇಮಕ ಮಾಡಿಕೊಳ್ಳುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ರೀತಿ ಸ್ವಜನ ಪಕ್ಷಪಾತ ಅಕ್ರಮ ಮಾಡಿದರೆ ನ್ಯಾಯ ಹೇಗೆ ದೊರಕುವುದು ? ಜನಗಳ ಪ್ರಶ್ನೆ ಹೇಗೆ ಬಗೆಹರಿಸುತ್ತಾರೆ ? ಇಂಥ ಸನ್ನಿವೇಶದಲ್ಲಿ ನ್ಯಾಯ ದೊರಕುವುದು ಸಾಧ್ಯವಿಲ್ಲ. ಇಷ್ಟ ಬಂದವರನ್ನು ನೇಮಕ ಮಾಡುವ ಹಾಗೆಯೇ ಇಷ್ಟ ಬಂದಹಾಗೆ ಟ್ರಾನ್ಸ್‌ಫರ್ಸ್ ಕೂಡ ಮಾಡುತ್ತಿ ದ್ದಾರೆ. ಈ ರೀತಿ ಕೆಲಸ ಕಾರ್ಯಗಳು ನಡೆದರೆ ದಕ್ಷತೆ ಹೇಗೆ ಬರುತ್ತದೆ ? ಟ್ರಾನ್ಸ್‌ಫರ್ ಮಾಡುವುದರಲ್ಲಿ ಕೂಡ ಸಣ್ಣ ಸಣ್ಣ ಅಧಿಕಾರಿಗಳ ಮೇಲೆ ಕಣ್ಣು. ಟ್ರಾನ್ಸ್‌ಫರ್ ಮಾಡುವುದಕ್ಕೆ ಕಾರಣ ಏನು ಎಂದು ನಾನು ಕೇಳಿದ ಒಂದು ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು "ಇನ್ ದಿ ಇಂಟರೆಸ್ಟ್ ಆಫ್ ಪಬ್ಲಿಕ್ ಸರ್ವಿಸ್" ಎಂದು. ಇದರಲ್ಲಿ ಪಬ್ಲಿಕ್ ಇಂಟರೆಸ್ಟ್ ಇಲ್ಲ, "ಪ್ರೈವೇಟ್ ಪರ್ಸನ್‌ಗೆ" ಇಂಟರೆಸ್ಟ್ ಇದೆ. ಈ ರೀತಿ ಟ್ರಾನ್ಸ್‌ಫರ್ಸ್ ಮಾಡಿರುವುದು ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಮಂತ್ರಿಗಳ ಕೈವಾಡ, ರಾಜಕೀಯ ಕೈವಾಡ ಇದರಲ್ಲಿ ಪೂರ್ತಿಯಾಗಿ ಇದೆ. ಸರಕಾರದ ಆಡಳಿತ ದುರಾಡಳಿತವಾಗಿ ನಡೆದಿದೆ. ಅಧಿಕಾರ ದುರುಪಯೋಗ ಮಾಡುವುದು ನಡೆದಿದೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತೆ. ಯಾರು ಇದನ್ನು ಮಾಡಿದ್ದು ಎಂದು ಕೇಳುತ್ತೇನೆ. ಇದರಿಂದ ಯಾರಿಗೆ ಅನುಕೂಲ ವಾಗಿದೆ ? ಕೇವಲ ನಿಮ್ಮ ಮಾತಿಗೆ ಮಾನ್ಯತೆ ಕೊಡತಕ್ಕಂಥವರಿಗೆ, "ಜೀ ಹುಕುಂ" ಎಂದು ಹೇಳತಕ್ಕಂಥವರಿಗೆ ಅನುಕೂಲ ಮಾಡಿಕೊಟ್ಟಿದೆ. ನ್ಯಾಯವಾಗಿ ಕೆಲಸ ಮಾಡತಕ್ಕಂಥ ಕನ್‌ಸ್ಟ್ರಕ್ಟಿವ್ ಸಜೆಷನ್ಸ್ ಕೊಡತಕ್ಕಂಥವರನ್ನು ಬೇರೆ ಕಡೆಗೆ ವರ್ಗಾಯಿಸಿದ್ದೀರಿ. ಇಂಥ ನಿದರ್ಶನ ಗಳು ಅನೇಕ ಇವೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಬೇಕಾದರೆ ಅವರೇ ತಮ್ಮ ಆತ್ಮ ಸಂಶೋಧನೆ ಮಾಡಿಕೊಂಡು ನೋಡಿಕೊಳ್ಳಲಿ ಅವರಿಗೇ ಗೋಚರವಾಗುತ್ತದೆ.

ಇನ್ನು ಇವರ ಅದಕ್ಷತೆ ಹೇಗೆ ಇದೆ ಎಂಬುದಕ್ಕೆ ಒಂದೇ ಒಂದು ನಿದರ್ಶನ ಕೊಡುತ್ತೇನೆ. ಘಟಪ್ರಭಾ ನದಿಯ ಹಿಡಕಲ್ ಪ್ರಾಜೆಕ್ಟ್ 2 ಕೋಟಿ ರೂಪಾಯಿ ಯೋಜನೆಯಾಗಿದೆ. ಈ ಎರಡು ಕೋಟಿ ಯೋಜನೆಯ ಕಾರ್ಯದಲ್ಲಿ ಟೆಂಡರ್ ಕರೆದಿದ್ದರು. ನ್ಯಾಷನಲ್ ಕನ್‌ಸ್ಟ್ರಕ್ಷನ್ ಕಂಪನಿಯವರು ಟೆಂಡರ್ ಕಳಿಸಿದ್ದರು. ಆದರೆ ಈ ಕೆಲಸವನ್ನು ಬೇರೆ ಪ್ರೈವೇಟ್ ಪಾರ್ಟಿ ಕರೆದು ಅವರಿಗೆ ಕೆಲಸ ಕೊಟ್ಟಿದ್ದಾರೆ. ಇವರ ಆಡಳಿತ ನೀತಿ ಏನು ? ನ್ಯಾಷನಲ್ ಕನ್‌ಸ್ಟ್ರಕ್ಷನ್ ಸಂಸ್ಥೆಯು ಸಾರ್ವಜನಿಕ ಸಂಸ್ಥೆಯಾಗಿದೆ. ಅವರಿಗೆ ಕೆಲಸ ಕೊಡಬೇಕಾಗಿತ್ತು. ಆದರೆ ಬೇರೆ ಪ್ರೈವೇಟ್ ಪಾರ್ಟಿಗೆ ಫೇವರ್ ಮಾಡಬೇಕೆಂದು ಅವರಿಗೆ ಕೊಡಬೇಕೆ ? ಫೇವರಿಟ್ ಆದವರಿಗೆ ಇವರು ಕೆಲಸ ಕಾರ್ಯ ಕೊಡುತ್ತಾರೆ. ಸಾರ್ವಜನಿಕ ಕ್ಷೇತ್ರಕ್ಕೆ ಬೆಂಬಲ ನೀಡದೆ, ಖಾಸಗಿ ಕ್ಷೇತ್ರಕ್ಕೆ ಕೆಲಸ ಕೊಟ್ಟು ಸಾರ್ವಜನಿಕ ಕ್ಷೇತ್ರಕ್ಕೆ, ಕೊಡಲಿಪೆಟ್ಟುಕೊಡುವನೀತಿ ಸರ್ಕಾರದ್ದಾಗಿದೆ. ಪಕ್ಷಪಾತ ನೀತಿಯಿಂದ ದುರಾಡಳಿತ ನಡೆದಿದೆ. ಎಲ್ಲ ಮಂತ್ರಿಗಳು ಸಂತಾನಂ ಕಮಿಟೀ ರಿಪೋರ್ಟ್ ಒಪ್ಪಿಕೊಳ್ಳಲಿಕ್ಕೆ ತಯಾರಿದ್ದಾರೆಯೇ ? ತಮ್ಮ ಆಸ್ತಿಪಾಸ್ತಿ ಎಷ್ಟು ಇದೆ ಏನು ಇದೆ ಮನೆಗಳು ಎಲ್ಲೆಲ್ಲಿ ಇವೆ ಎಂಬುದನ್ನು ಹೇಳಲು ತಯಾರಾಗಿದ್ದಾರೆಯೇ ? ಆಸ್ತಿ ಪಾಸ್ತಿ ತಿಳಿಸುವುದಕ್ಕೆ ಹಿಂಜರಿಯುವುದು ಏತಕ್ಕೆ ? ಹೆದರಿಕೊಳ್ಳುವುದು ಏತಕ್ಕೆ ? ಎಲ್ಲ ಮಂತ್ರಿಗಳು ತಮ್ಮ ಆಸ್ತಿಪಾಸ್ತಿಗಳ ತನಿಖೆಗೆ ತಯಾರಾಗಿದ್ದಾರೆಯೇ ಎಲ್ಲರೂ ಹೇಳಲಿ. ಹಣ ಎಲ್ಲಿಯಾದರೂ ದುರುಪಯೋಗವಾಗಿದ್ದರೆ ಅದರ ಬಗ್ಗೆ ಇನ್‌ಕ್ವ್ಯಾಯರಿ ನಡೆಸಲಿ. ಆಗ ಎಲ್ಲರ ಬಣ್ಣಬಯಲಾಗುತ್ತದೆ. ಎಲ್ಲರಿಗೂ ಸಮಾಧಾನವಾಗುತ್ತದೆ. ಮತ್ತು ಆಡಳಿತ ಚೆನ್ನಾಗಿ ನಡೆಯುತ್ತದೆ. ಇದಕ್ಕೆ ನೀವು ತಯಾರಿದ್ದೀರಾ ? ಇದಕ್ಕೆ ನೀವು ತಯಾರಿಲ್ಲ. ದಿಲ್ಲಿಗೆ ಹೋಗುತ್ತೀರಿ. ಅಲ್ಲಿ ಒಂದು ಹೇಳುತ್ತೀರಿ. ಇಲ್ಲಿ ಬಂದನಂತರ ಬೇರೆ ರೀತಿಯಲ್ಲಿ ಮಾತನಾಡುತ್ತೀರಿ. ಒಟ್ಟಿನಲ್ಲಿ ಸಂತಾನಂ ಕಮಿಟೀ ರಿಪೋರ್ಟ್ ಪ್ರಕಾರ ನೀವು ನಡೆಯುವುದಕ್ಕೆ ತಯಾರಾಗಿಲ್ಲ.

Sri K. H. PATIL.—Can we proceed without any Minister in the House ? How to address the Treasury Benches ? Excepting the Deputy Ministers, there is no Minister of Cabinet rank present.

Sri M. G. BANAKAR.—Please give a ruling.

Sri K. H. PATIL.—If the Hon'ble Chief Minister has got work, let him go. There are a number of Ministers. They are sitting idle outside. At least one Minister can be here.

Sri D. M. SIDDIAH.—They have got collective responsibility and those peresent here will take notes and pass it on to the Hon'ble Chief Minister.

Mr. DEPUTY SPEAKER.—The Hon'ble Chief Minister will come back.

5-00 P.M.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು ಅವರು ಹೊರಟು ಹೋದರು. ಪರವಾ ಇಲ್ಲ. ಅವರು ಇದೇ ರೀತಿ ಡೆಲ್ಲಿಗೂ ಹೋಗಿದ್ದರು. ತಮ್ಮ ಆಡಳಿತವನ್ನು ಸರಿಪಡಿಸುವುದಕ್ಕೆ ಬದಲು ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಹೋಗಿದ್ದರು. ಕೇಂದ್ರ ಸರ್ಕಾರದ ಮಂತ್ರಿಗಳು, ಕೇಂದ್ರ ಸರ್ಕಾರದ ನೌಕರರಿಗೆ ಸಂಬಳ ಮತ್ತು ಡಿ. ಎ. ಜಾಸ್ತಿ ಮಾಡಬೇಕೋ ಬೇಡವೋ ಎಂದು ಯೋಚನೆ ಮಾಡಬೇಕಾದರೆ, ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಕೇಂದ್ರ ಸರ್ಕಾರದ ನೌಕರರಿಗೆ ಸಂಬಳ ಜಾಸ್ತಿ ಮಾಡಬೇಡಿ, ಡಿ. ಎ. ಜಾಸ್ತಿ ಮಾಡಬೇಡಿ, ವೇಜ್ ಫ್ರೀಜ್ ಮಾಡಿ, ಎಂದು ಹೇಳಿದ್ದಾರೆ. ಇವರಿಗೆ ಹೇಳುವುದಕ್ಕೆ ಏನು ಅಧಿಕಾರವಿದೆ ? ನಾನ್ ಗೆಜೆಟೆಡ್ ನೌಕರರಿಗೆ ಅವರು ಕೇಳುವುದನ್ನು ಕೊಡದೆ ಕೇಂದ್ರ ಸರ್ಕಾರಕ್ಕೆ ಹೋಗಿ ನೀವೂ ಕೊಡಬೇಡಿ ಎಂದು ಹೇಳಿದರು. ಒಂದು ಸಂಗತಿ ಏನೆಂದರೆ ಅಲ್ಲಿರುವ ಮಂತ್ರಿಗಳಿಗೆ ಹೇಳಲಿಲ್ಲ, ಕೇಂದ್ರ ಸರ್ಕಾರದ ಪ್ರಧಾನಿಯವರಿಗೋ, ಬೇರೆ ಮಂತ್ರಿಗಳಿಗೋ ಸಂಬಳ ಸ್ಥಗಿತಮಾಡಿಕೊಳ್ಳಿ ಎಂದು ಅಡ್ವೈಸ್ ಮಾಡಲಿಲ್ಲ. ಹೀಗೆ ಅಡ್ವೈಸ್ ಮಾಡುವ ಧೈರ್ಯವನ್ನು ಇಲ್ಲ ನೌಕರರಿಗೆ ಸಂಬಳ ಜಾಸ್ತಿ ಮಾಡಬೇಕು ಎಂದು ಮಾಡಿದ್ದರೆ ಒಪ್ಪುತ್ತಿದ್ದೆ. ಊರಿಗೆಲ್ಲಾ ಗೊತ್ತಿರುವ ಮಾತೇ, ವೇಜಸ್ ಫ್ರೀಜ್, ಪ್ರೈಸ್ ಫ್ರೀಜ್, ಪ್ರಾಫಿಟ್ ಫ್ರೀಜ್ ಎನ್ನುವುದು. ಇದನ್ನು ಆಡಳಿತವರ್ಗ ಹೆಚ್ಚು ಹೆಚ್ಚಾಗಿ ಮಾತನಾಡುತ್ತಿದ್ದಾರೆ. ತಮ್ಮ ಸಂಬಳ ಖಾಸ್ತಿಯಾಗಬೇಕೆಂದು ಹಂಚಿಕೆ ಮಾಡತಕ್ಕ ಇವರಿಗೆ,

(ಶ್ರೀ ಎಂ. ಎಸ್. ಕೃಷ್ಣನ್)

ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಧೈರ್ಯವಾದರೂ ಎಲ್ಲಿ ? ಬರೀ ವೇಜ್ ಫ್ರೀಜ್ ಪಾಲಿಸಿ ಸರಿಯಾದುದಲ್ಲ. ವೇಜ್ ಫ್ರೀಜ್ ಆಗುತ್ತದೆ, ಗೊತ್ತು. ವೇಜ್ ಫ್ರೀಜ್ ಮಾಡುವಾಗ ಅದರ ಜೊತೆಗೆ ಪ್ರಾಫಿಟ್ ಫ್ರೀಜ್, ಡಿವಿಡೆಂಡ್ ಫ್ರೀಜ್, ಪ್ರೈಸ್ ಫ್ರೀಜ್ ಮಾಡುತ್ತೇವೆಂದು ಹೇಳಿದ್ದಾರೆ ಇವರ ಮಾತನ್ನು ಯಾರು ಕೇಳುತ್ತಾರೆ ? ನಮ್ಮ ದೇಶದಲ್ಲಿ ಭಾರಿ ಭಾರಿ ಉದ್ಯಮೆಗಾರರಿದ್ದಾರೆ, ಬಂಡವಾಳಗಾರರಿದ್ದಾರೆ, 75 ಗುತ್ತೆದಾರಿ ಬಂಡವಾಳಗಾರರ ಮನೆತನಗಳಿವೆ. ಅವರು ಎಲ್ಲವನ್ನೂ ಕಂಟ್ರೋಲ್ ಮಾಡುತ್ತಾರೆ. ಇವರಿಂದ ಏನೂ ಆಗುವುದಿಲ್ಲ. ನಮ್ಮ ಮಿತ್ರರಾದ ಅಜೀಜ್ ಸೇಟ್ ಅವರು ಈ ಆಡಳಿತವನ್ನು ಒಂದು ಎಮ್ಮೆಗೆ ಹೋಲಿಸಿದರು. ಎಮ್ಮೆಗೆ ಏಟು ಬಿದ್ದರೆ ಒಂದಲ್ಲ ಒಂದು ಸಲವಾದರೂ ಗೊತ್ತಾಗುತ್ತದೆ. ಆದರೆ ಇದು ಏನಾಗಿದೆ ಎಂದರೆ ಸತ್ತ ಕುದುರೆ. ಮೊದಲೇ ಜಡ ಕುದುರೆ. ಸತ್ತ ಕುದುರೆಯ ಹಾಗೆ ಆಗಿದೆ. There is no use in flogging a dead horse. ಇವತ್ತಿನ ದಿವಸ ಬೇರೆ ದಾರಿಯಿಲ್ಲ, ಈ ಆಡಳಿತವನ್ನು ಕಿತ್ತು ಅರಬ್ಬಿ ಸಮುದ್ರಕ್ಕೆ ಹಾಕಿ ಸರಿಯಾದ ಆಡಳಿತವನ್ನು ತಂದರೆ ಮಾತ್ರ ಆ ಆಡಳಿತದಿಂದ ಜನರಿಗೆ ನೆಮ್ಮದಿ ಸಿಕ್ಕುವುದಕ್ಕೆ ಸಾಧ್ಯ. ಈಗಿರುವ ಆಡಳಿತದಿಂದ ಜನರಿಗೆ ನೆಮ್ಮದಿ ಸಿಕ್ಕುವುದಿಲ್ಲ.

ಕೈಗಾರಿಕೆಗಳ ಬಗ್ಗೆ ಮಾತನಾಡುತ್ತ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕು. ಇವತ್ತಿನ ದಿವಸ ಕೈಗಾರಿಕೆಗಳ ಬಗ್ಗೆ ಏನು ಧೋರಣೆ ಮಾಡುತ್ತಿದ್ದಾರೆ, ನಮಗೆ ಬೇಕಾಗಿರುವುದು. ಏನು ಎನ್ನುವುದನ್ನು ನೋಡಬೇಕು. ಮಾನ್ಯ ರಾಮಕೃಷ್ಣ ಹೆಗಡೆ ಅವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಬೊಂಬಾಯಿ, ಕಲ್ಕತ್ತ ನಗರಗಳಿಗೆ ಹೋಗಿದ್ದರು. ಡೆಲ್ಲಿಗೂ ಹೋಗಿದ್ದರು. ಎಲ್ಲಿಗೆ ಹೋದರೇನು ? ಒಟ್ಟಿನಲ್ಲಿ ಕೈಗಾರಿಕೆ ಬರುವುದಿಲ್ಲ. ಕೈಗಾರಿಕೆ ಬರಬೇಕಾದರೆ ಕ್ರಿಯಾಶೀಲ ಕಾರ್ಯಕ್ರಮವಿರಬೇಕು. ಕ್ರಿಯಾಶೀಲ ಧೋರಣೆ ಇರಬೇಕು, ನೆರೆ ರಾಜ್ಯವಾದ ಮದ್ರಾಸಿನಲ್ಲಿ ಇಂಥ ಒಂದು ಕ್ರಿಯಾಶೀಲ ಕಾರ್ಯಕ್ರಮವನ್ನು ಹಾಕಿಕೊಂಡು ಶ್ರೀ ಆರ್. ವೆಂಕಟರಾಮನ್ ಅವರ ಕಾಲದಲ್ಲಿ ಎಷ್ಟೊಂದು ಕೈಗಾರಿಕೆಗಳು ಬಂದವು, ಅದೇ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಎಷ್ಟು ಬಂದಿವೆ ಎನ್ನುವುದನ್ನು ಹೋಲಿಸಿ ನೋಡಿದರೆ ಒಂದು ಅಂಶ ಸ್ಪಷ್ಟವಾಗಿ ತಿಳಿಯುತ್ತದೆ. ಅವರು ಕ್ರಿಯಾಶೀಲ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುವಾಗ ನಮ್ಮಲ್ಲಿ ದುಡ್ಡನ್ನು ಪೋಲುಮಾಡಿ ಖರ್ಚು ಮಾಡುತ್ತಿದ್ದಾರೆ. ಇದಕ್ಕೆ ಒಂದು ನಿದರ್ಶನವನ್ನು ಸಭೆಯ ಗಮನಕ್ಕೆ ತರಬಲ್ಲೆ. ನಮ್ಮ ಸರ್ಕಾರದವರು ತಮ್ಮ ಕೈಗಾರಿಕಾ ನೀತಿಯನ್ನು ಬದಲಾವಣೆ ಮಾಡಿದ್ದಾರೆ. ಇದುವರೆಗೂ ಸೇಕಡ 51ರಷ್ಟು ಷೇರು ನಮ್ಮದು ಇರುತ್ತಿತ್ತು ; 49ರಷ್ಟು ಷೇರುಗಳು ವಿದೇಶೀಯರದು ಇದ್ದು ಫಾರಿನ್ ಕೊಲಬರೇಷನ್ ಇತ್ತು. ಇವತ್ತು ಮೈಸೂರು ರಾಜ್ಯದೊಳಗೆ ಕೆಲವು ಕಡೆ ಇದರ ಬದಲಾವಣೆಯಾಗಿ ಸರ್ಕಾರದ ನೀತಿಯೇ ಬದಲಾಗಿದೆ. ಸರ್ಕಾರದ ಆ ನೀತಿಯಿಂದ ಸೇಕಡ 49 ನಮ್ಮದು, 51 ಇತರರದು ಆಗಿ ನಮ್ಮ ಜುಟ್ಟನ್ನು ಅವರ ಕೈಯಲ್ಲಿ ಕೊಟ್ಟಿದ್ದೇವೆ. ಮೈಸೂರು ಲ್ಯಾಂಪ್ ವರ್ಕ್ಸ್ ನಿದರ್ಶನ ಒಂದು, ಎನ್. ಜಿ. ಇ. ಎಫ್. ಇನ್ನೊಂದು. ಒಂದನ್ನು ಅಮೆರಿಕನ್ನರಿಗೆ ಕೊಟ್ಟಿದ್ದಾರೆ, ಇನ್ನೊಂದನ್ನು ಪಶ್ಚಿಮ ಜರ್ಮನಿಯವರಿಗೆ ಕೊಟ್ಟಿದ್ದಾರೆ. ಮೈಸೂರು ಲ್ಯಾಂಪ್ ಎನ್ನುವುದೇ ಹೊರಟು ಹೋಯಿತು. ಈಗ "ಜಿ.ಇ" ಲ್ಯಾಂಪ್ಸ್ ಬಂದಿವೆ. ಇದನ್ನು ಕಂಡು ಸರ್. ಎಂ. ವಿಶ್ವೇಶ್ವರಯ್ಯನವರು ಸ್ವರ್ಗ ಲೋಕದಿಂದ ನೋಡುತ್ತ ಶಾಪ ಹಾಕುತ್ತಿದ್ದಾರೆ. ಮೈಸೂರು ಲ್ಯಾಂಪ್ ಎನ್ನುವುದಕ್ಕೆ ಬದಲು ಜಿ ಇ. ಲ್ಯಾಂಪ್ ಎಂದು ತಯಾರು ಮಾಡುತ್ತಿದ್ದಾರೆ. ಅಲ್ಲಿ ಬಂದಿರುವ ಒಬ್ಬ ಅಧಿಕಾರಿಗೆ, ಟೆಕ್ನಿಕಲ್ ಡೈರೆಕ್ಟರಿಗೆ ಕೊಡುವ ಸಂಬಳ, 9 ಜನ ಆಫೀಸರುಗಳಿಗೆ ಕೊಡುವ ಸಂಬಳ ಈ ಎಲ್ಲ ವಿವರಗಳೂ ನನ್ನ ಹತ್ತಿರ ಇವೆ. ಅದನ್ನು ಮಾನ್ಯ ಮಂತ್ರಿಗಳಿಗೆ ಕೂಡ ಕಳಿಸಿಕೊಟ್ಟಿದ್ದಾರೆ ಅಲ್ಲಿ ಇರುವಂಥ ಕಾರ್ಮಿಕ ಸಂಘದವರು. ಮೈಸೂರು ಲ್ಯಾಂಪ್ ವರ್ಕ್ಸ್‌ನಲ್ಲಿರುವ ಒಬ್ಬ ಟೆಕ್ನಿಕಲ್ ಡೈರೆಕ್ಟರಿಗೆ ಸಂಬಳ 12, 081 ರೂಪಾಯಿ ಒಂದು ತಿಂಗಳಿಗೆ, ಬೇರೆ ಎಲ್ಲಾ 9 ಜನ ಅಡ್ಮಿನಿಸ್ಟ್ರೇಟಿವ್ ಆಫೀಸರ್ಸ್ ಎಂದು ಕರೆಯುವವರ, ಇವರ ಸಂಬಳ ಒಂದು ತಿಂಗಳಿಗೆ 22,663 ರೂಪಾಯಿ. 234 ಖಾಯಂ ಕೆಲಸಗಾರರಿಗೆ 42,556 ರೂಪಾಯಿ ಸಂಬಳ. 118 ಜನ ಕೆಲಸಗಾರರಿಗೆ ಏನು ಸಂಬಳ ಬರುತ್ತದೆ. ಆ ಸಂಬಳ 9 ಜನ ಅಮೆರಿಕನ್ ಮತ್ತು ಇತರ ಅಧಿಕಾರಿಗಳಿಗೆ ಕೊಡುತ್ತಿದ್ದಾರೆ. ಏಕೆ ಈ ಕೈಗಾರಿಕೆಯನ್ನು ನಾಶ ಮಾಡಿದರು ? 20—30 ವರ್ಷಗಳಿಂದ ಕೆಲಸಮಾಡುತ್ತಿರುವಂಥ ಬಹಳ ನೌಕರರನ್ನು ಬೇರೆ ಬೇರೆ ಇಲಾಖೆಗಳಿಗೆ ಕಳುಹಿಸಿದ್ದಾರೆ. ಟೆಕ್ನಿಕಲ್ ಪರ್ಸನೆಲ್‌ಗಳನ್ನು ತೆಗೆದುಕೊಂಡು ಹೋಗಿ ಪರ್ಚೇಸ್ ಅಸಿಸ್ಟೆಂಟ್, ಸೇಲ್ಸ್ ಅಸಿಸ್ಟೆಂಟ್, ಈ ರೀತಿ ಹಾಕಿದ್ದಾರೆ ಭಾರತ ದೇಶದ, ಮೈಸೂರು ರಾಜ್ಯದ ನೌಕರರನ್ನು ಇವತ್ತು ಬಹಳ ಕೀಳಾಗಿ ಕಡೆಗಣಿಸುತ್ತಿದ್ದಾರೆ; ಅವರನ್ನು ಕೆಳಕ್ಕೆ ತುಳಿಯುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಅಮೆರಿಕನ್ ಡೈರೆಕ್ಟರನ್ನು ಕಿತ್ತು

ಅವರ ಸ್ಥಾನದಲ್ಲಿ ಭಾರತೀಯ ಡೈರೆಕ್ಟರನ್ನು ನೇಮಕ ಮಾಡಿ, ಧೈರ್ಯವಿದ್ದರೆ. ಇಲ್ಲಿ ಬಹಳ ಅನ್ಯಾಯ ಅಕ್ರಮ ನಡೆಯುತ್ತಿದೆ. ಇದನ್ನು ತಾವು ವಿಚಾರಣೆ ಮಾಡುವುದಕ್ಕೆ ತಯಾರಾಗಿದ್ದೀರಾ ಎಂದು ಕೇಳುತ್ತೇನೆ ? ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಾಲ್ಲೂ ಇದೇ ಪರಿಸ್ಥಿತಿಯಾಗಿದೆ ಪಾಶ್ಚಿಮಾತ್ಯ ದೇಶಗಳಿಂದ ಅಂದರೆ ಪಶ್ಚಿಮ ಜರ್ಮನಿಯಿಂದ ಬಂದಿರುವ ಜನರಿಗೆ ಕೊಡುವ ಸಂಬಳ ಬಹಳ ಹೆಚ್ಚು. ನಮ್ಮವರಿಗೆ ಬಹಳ ಕಡಿಮೆ ಕೊಡುತ್ತಾರೆ. ಅಲ್ಲಿ ನೌಕರರ ಹೆರಾಸ್‌ಮೆಂಟ್ ದಬ್ಬಾಳಿಕೆ ಜಾಸ್ತಿಯಾಗಿದೆ. ಅವರ ಬಗ್ಗೆಯೂ ವಿಚಾರಣೆ ನಡೆಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಉತ್ತರ ಕರ್ಣಾಟಕ ಜಿಲ್ಲೆಯಲ್ಲಿಯ ದಾಂಡೇಲಿಯಲ್ಲಿ ಎಲೆಕ್ಟ್ರೋ ಮೆಟಲರ್ಜಿಕಲ್ ವರ್ಕ್ಸ್ ಎಂದು ಇದೆ. ಅವರು ಅಂದರೆ ಮಾಲೀಕರು ಮಾನ್ಯ ಮುಖ್ಯ ಮಂತ್ರಿಗಳಿಗೂ ಒಂದು ಮೆಮೋರಾಂಡಂ ಸಲ್ಲಿಸಿದ್ದಾರೆ. ಅದರ ನಕಲುಗಳು ನನ್ನ ಹತ್ತಿರ ಇವೆ. ಅದರಲ್ಲಿ ಏನು ಹೇಳುತ್ತಾರೆಂದರೆ 13.4 ಮಿಲಿಯನ್ ಫಾರಿನ್ ಎಕ್ಸ್‌ಛೇಂಜ್ ಸಂಪಾದಿಸಿ ಕೊಟ್ಟಿದ್ದಾರೆ. ಆ ಕಂಪನಿಯವರಿಗೆ ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಆ ಕೈಗಾರಿಕೆಗೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಬೇರೆ ಕೈಗಾರಿಕೆಗಳಿಗೆ, ವಿದೇಶಿ ವಿನಿಮಯವನ್ನು ಗಳಿಸಿಕೊಡುವಂಥ ಕೈಗಾರಿಕೆಗೆ ನಷ್ಟವಾಗುವ ಪರಿಸ್ಥಿತಿ ಬಂದಿದೆ. ಅಲ್ಲಿನ 115 ಜನ ಕೆಲಸಗಾರರನ್ನು 10ನೇ ತಾರೀಖು ವಜಾ ಮಾಡಿದ್ದಾರೆ. ಇದರಿಂದ ಸರ್ಕಾರದ ನೀತಿ, ಧೋರಣೆ ಸ್ಪಷ್ಟವಾಗಿ, ಸರಿಯಾಗಿಲ್ಲದೆ ಇರುವುದು ಕಂಡುಬಂದಿದೆ. ಇದನ್ನು ತಿದ್ದಿಕೊಳ್ಳಬೇಕು. ಎಲಕ್ಟ್ರಿಸಿಟಿ ದರ ಕಡಿಮೆ ಮಾಡಿ ಎಲ್ಲರಿಗೂ ಕೆಲಸ ಸಿಗುವಂತಾಗಬೇಕು. ಮೊದಲು ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಮತ್ತು ಇಂಡಸ್ಟ್ರಿಯಲ್ ಪಾಲಿಸಿ ಬದಲಾವಣೆಯಾಗಬೇಕೆಂದು ಕೇಳಿಕೊಳ್ಳಬೇಕಾಗಿದೆ.

ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಎಚ್. ಬಿ. ಜ್ವಾಲನಯ್ಯ ಮತ್ತು ಪ್ರತಿಯೊಬ್ಬ ಶಾಸನ ಸಭಾ ಸದಸ್ಯರೂ ಇದರ ಬಗ್ಗೆ ಸಲಹೆ ಮಾಡಿದ್ದಾರೆ, ಮಾತನಾಡಿದ್ದಾರೆ. ಇತರ ಕೈಗಾರಿಕೆಗಳಿಗೆ ಏನು ಸಹಾಯ ಮಾಡುತ್ತಿದ್ದಾರೆ ಅದನ್ನು ಈ ಸಣ್ಣ ಕೈಗಾರಿಕೆಗಳಿಗೆ ಮಾಡುತ್ತಿಲ್ಲ. ಇದು ಇವರೇ ಮಾಡಿರುವಂಥ ಎಸ್ಟಿಮೇಟ್ಸ್ ಕಮಿಟಿ ರಿಪೋರ್ಟಿನಿಂದ ಕೂಡ ತಿಳಿದು ಬರುತ್ತದೆ. ಈ ಕೈಗಾರಿಕಾ ನೀತಿ ಬದಲಾವಣೆಯಾಗಬೇಕು, ಸಾರ್ವಜನಿಕ ಆಡಳಿತದ ಬಗ್ಗೆ ಧೋರಣೆ ಬದಲಾವಣೆ ಆಗಬೇಕು. ಎಲ್ಲಿಯವರೆಗೆ ಈ ಪರಿಸ್ಥಿತಿ ಬದಲಾವಣೆಯಾಗುವುದಿಲ್ಲವೋ ಅಲ್ಲಿಯವರೆಗೂ ದಕ್ಷವಾದ ಆಡಳಿತ ಬರುವುದಿಲ್ಲ ಕೈಗಾರಿಕಾ ಪ್ರಗತಿ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಸನ್ಮಾನ್ಯ ಸಭಾಪತಿಗಳೇ, ಈ ದಿನ ಮಾನ್ಯ ಮುಖ್ಯ ಮಂತ್ರಿಯವರು ಏನೊಂದು ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ ಅದನ್ನು ಸಮರ್ಥಿಸುತ್ತ ಕೆಲವಾರು ಸೂಚನೆಗಳನ್ನು ಕೊಡಲು ನಾನು ಇಚ್ಛೆಪಡುತ್ತೇನೆ. ಈ ದೇಶ ವ್ಯವಸಾಯಕ್ಕೆ ಮುಖ್ಯವಾದ ದೇಶ. ವ್ಯವಸಾಯ ಉನ್ನತ ಮಟ್ಟಕ್ಕೆ ಬರುವವರೆಗೂ ಈ ದೇಶದಲ್ಲಿ ಬಡತನ ಅಥವಾ ಕ್ಷಾಮ ಹೋಗಲಿಕ್ಕೆ ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಕೂಡ ತಿಳಿದಂಥ ಅಂಶವಾಗಿದೆ. ಇವತ್ತು ನಿಜವಾಗಿಯೂ ಹೇಳಬೇಕಾದರೆ ರೈತನಿಗೂ ಮತ್ತು ಒಬ್ಬ ಜೂಜು ಆಡತಕ್ಕ ಜೂಜುಗಾರನಿಗೂ ಯಾವುದೇ ವಿಧವಾದ ವ್ಯತ್ಯಾಸವಿಲ್ಲ. ರೈತ ಮಳೆಯ ಮೇಲೆ ಜೂಜಾಟವಾಡುತ್ತಾನೆ, ಜೂಜುಗಾರ ತಾನು ಹಿಡಿದುಕೊಂಡಿರುವ ಎಲೆಗಳ ಮೇಲೆ ಜೂಜಾಡುತ್ತಿರುತ್ತಾನೆ. ಅನೇಕ ಸದಸ್ಯರು ಮಾತನಾಡಿದರು. ನನಗೆ ಹಿಂದೆ ಮಾತನಾಡಿದಂಥ ಸದಸ್ಯರು ಕಾರ್ಖಾನೆಗಳಲ್ಲಿನ ಕೆಲಸಗಾರರ ಬಗ್ಗೆ ಏನು ಧೋರಣೆ ಇದೆ, ಆ ಧೋರಣೆಯ ಬಗ್ಗೆ ಹೇಳಿದರು. ಆದರೆ ರೈತನಿಗೆ ಬರುವ ಆದಾಯವನ್ನು ಯಾರೂ ನಿರ್ದಿಷ್ಟ ಮಾಡುವುದಕ್ಕಾಗುವುದಿಲ್ಲ. ರೈತನ ಕಷ್ಟ ಏನು ಎಂಬುದನ್ನು ಅರ್ಥ ಮಾಡಿಕೊಳ್ಳತಕ್ಕ ಜನ ಬಹಳ ಕಡಿಮೆ ಎಂದು ನನಗನಿಸುತ್ತದೆ. ಇವತ್ತಿನ ದಿವಸ ರೈತನಿಗೆ ಕೊಡಬೇಕಾದಂತಹ ಒಂದು ಸೌಲಭ್ಯವನ್ನು ಮನಮುಟ್ಟಿ ಕೊಡುತ್ತಾ ಇಲ್ಲವೆಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ. ದೇಶದಲ್ಲಿ ರೈತನ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು. ಪರದೇಶದಿಂದ ಭಿಕ್ಷೆ ಬೇಡತಕ್ಕ ಸಂಪ್ರದಾಯ ನಿಲ್ಲುವಂತಾಗಬೇಕು. ದೇಶಕ್ಕೆ ಬೇಕಾದ ಕೈಗಾರಿಕೆಗಳನ್ನು ಹೇಗೆ ಘೋಷಿಸುತ್ತೇವೆಯೋ ಹಾಗೆ ವ್ಯವಸಾಯವನ್ನೂ ಕೂಡ ಒಂದು ಕೈಗಾರಿಕೆಯಂತೆ ಘೋಷಿಸಿದರೆ ಮಾತ್ರ ರೈತನ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಇವತ್ತಿನ ದಿವಸ ರೈತನು ಹೆಚ್ಚು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುವಂತೆ ಮಾಡುವ ಕಾಲದಲ್ಲಿ ಅವನು ಉಪಯೋಗಿಸತಕ್ಕಂಥ ಪದಾರ್ಥಗಳ ಮತ್ತು ಉಪಕರಣಗಳ ಬೆಲೆಯನ್ನು ಲೆಕ್ಕ ಹಾಕಿದ್ದೇ ಆದರೆ, ಅದರ ಬೆಲೆ ಗಗನವನ್ನು ಮುಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು 50 ರೂಪಾಯಿ ಇದ್ದುದಕ್ಕೆ

(ಶ್ರೀ ಎಂ. ಎನ್. ರಾಮಣ್ಣ)

60 ರೂಪಾಯಿ ಆದರೆ, ಧಾರಣೆ ಬಹಳ ಜಾಸ್ತಿಯಾಯ್ತು ಎಂದು ಹೇಳುತ್ತಾರೆ. ಆದರೆ ನನ್ನ ಸ್ನೇಹಿತರು ಹೇಳಿದಂತೆ ಒಂದು ಟನ್ ರಸಾಯನಿಕ ಗೊಬ್ಬರಕ್ಕೆ 30 ರೂಪಾಯಿ ಜಾಸ್ತಿಯಾಗಿದೆ ಎಂದು ಯಾರು ಹೇಳುತ್ತಾ ಇಲ್ಲ. ಇವತ್ತು ರೈತನು ಏನು ಬೆಳೆದು ಉತ್ಪತ್ತಿ ಮಾಡುತ್ತಾನೆ, ಆ ಉತ್ಪತ್ತಿ ಮೇಲೆ ಬೆಲೆಯನ್ನು ನಿರ್ಧಾರ ಮಾಡಿ, ಆ ಬೆಲೆ ಅವನಿಗೆ ಸಿಗುವಂತೆ ಸರ್ಕಾರ ಮಾಡದೆ ಹೋದರೆ ಆ ಮನುಷ್ಯನಿಗೆ ವ್ಯವಸಾಯದಲ್ಲಿ ಇರುವ ಚೈತನ್ಯ ಬಹಳ ಕಡಿಮೆಯಾಗಬಹುದು ಎಂಬ ಒಂದು ಶಂಕೆ ನನಗಿದೆ. ಇವತ್ತು ಸರ್ಕಾರ ಆಹಾರ ಪದಾರ್ಥಗಳ ಮೇಲೆ ಒಂದು ಬೆಲೆಯನ್ನು ನಿಗದಿ ಮಾಡಿದ್ದಾರೆ. ಇವತ್ತು ನನಗೆ ಒಬ್ಬರು ಹಳ್ಳಿಯಿಂದ ಕಾಗದ ಬರೆದಿದ್ದಾರೆ. ಗದ್ದೆ ಕೊಯ್ಯಲಿಕ್ಕೆ ಬಂದಿದೆ. ಮಳೆ ಬರುತ್ತದೆ. ಬತ್ತವನ್ನು ಅಂಗಳದಲ್ಲಿ ಬಿಟ್ಟು ಬಂದರೆ, ಅಮಲ್ದಾರರು 50 ರೂಪಾಯಿ ಕೊಡುತ್ತೇನೆ, ಕೊಡು ಎಂದು ಹೇಳುತ್ತಿದ್ದಾರೆ ಎಂದು ಬರೆದಿದ್ದಾರೆ. ಅವನು ಇಷ್ಟು ಕಷ್ಟ ಪಟ್ಟು ಬೆಳೆಸಿ, ಉತ್ಪತ್ತಿ ಮಾಡಿದರೂ ಕೂಡ ಸರ್ಕಾರ ಕಮ್ಮಿ ದರದಲ್ಲಿ ತೆಗೆದುಕೊಳ್ಳುವುದು ಬಹಳ ಅನ್ಯಾಯ. ಮಾರ್ಕೆಟಿನಲ್ಲಿ ಯಾವ ದರವಿದೆಯೋ ಅದೇ ದರ ಇವರಿಗೂ ಕೊಡಬೇಕು ನಿಜವಾಗಿಯೂ ಅವರು ಹೇಳುವುದು ಅಕ್ಷರಶ: ಸತ್ಯವೆಂದು ನನಗನ್ನಿಸುತ್ತದೆ. ಯಾವುದೇ ಕೈಗಾರಿಕೆ ಮಾಡತಕ್ಕ ಮನುಷ್ಯ ತಾನು ಹಾಕಿರತಕ್ಕ ಬಂಡವಾಳ ಖರ್ಚು ಮಾಡತಕ್ಕ ವೆಚ್ಚ ಎಲ್ಲವನ್ನೂ ತೆಗೆದುಕೊಂಡು ಇದರ ಬೆಲೆಯನ್ನು ನಿರ್ಧಾರ ಮಾಡುತ್ತಾನೆ. ಆದರೆ ರೈತ ಎಷ್ಟು ಖರ್ಚು ಮಾಡುತ್ತಾನೆ, ಅದು ಅವನಿಗೆ ಆದಾಯದಲ್ಲಿ ಬರುತ್ತದೆಯೇ ಎಂದು ಗೊತ್ತಾಗುವುದಿಲ್ಲ. ಹಳ್ಳಿಯಲ್ಲಿ ಒಂದು ಮಾತು ಇದೆ. ''ಏಕೆ ವ್ಯವಸಾಯ ಬಿಟ್ಟ ವ್ಯಾಪಾರಸ್ಥ'' ಎಂದು ಕೇಳಿದರೆ ಅಲ್ಲಿ ವ್ಯಾಪಾರಸ್ಥನು ತಾನು ಏನು ಖರ್ಚು ಮಾಡಿದ್ದಾನೆ ಎಂಬುದನ್ನೆಲ್ಲಾ ಲೆಕ್ಕ ಇಡುತ್ತಾನೆ. ಇದರಿಂದ ಆತನು ವ್ಯವಸಾಯವನ್ನೇ ಲಾಭದಾಯಕವಲ್ಲದ ಕೆಲಸವೆಂದು ಬಿಟ್ಟು ಬಿಟ್ಟ ಎನ್ನುತ್ತಾರೆ. ಇವತ್ತಿನ ದಿವಸ ರೈತನ ಸ್ಥಿತಿ ನಿಜವಾಗಿಯೂ ಕಷ್ಟದಲ್ಲಿ ಇದೆ. ಆದ್ದರಿಂದ ಆತನಿಗೆ ಸರ್ಕಾರದವರು ಸಾಕಾದಷ್ಟು ಸಹಾಯವನ್ನು ಮಾಡಬೇಕು. ಇವತ್ತಿನ ದಿವಸ ನೀರಾವರಿ ಯೋಜನೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಅನೇಕ ಕಡೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡಿದ್ದಾರೆ. ಅದೇ ರೀತಿ ಸಣ್ಣ ಸಣ್ಣ ನೀರಾವರಿ ಯೋಜನೆಗಳೂ ಬಹಳ ಅವಶ್ಯವೆಂದು ನನಗನಿಸುತ್ತದೆ. ಜಿಯೋಲಾಜಿಕಲ್ ಇಲಾಖೆಯವರು ಸರ್ವೆ ಮಾಡಿರುವ ಪ್ರಕಾರ ತುಮಕೂರು ಜಿಲ್ಲೆಯಲ್ಲಿ ನೀರು ಬಹಳ ಮೇಲ್ಮಟ್ಟದಲ್ಲಿದೆ, 100-120 ಅಡಿಯೊಳಗೆ ನೀರು ಬರುತ್ತದೆಂದು ಕಂಡುಬಂದಿದೆ. ಈ ರೀತಿ ಅದನ್ನೆಲ್ಲಾ ಉಪಯೋಗ ಮಾಡಿಕೊಂಡರೆ, 50-100 ಎಕರೆಗಳ ತನಕ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಸರ್ಕಾರ ಜಾಗ್ರತೆ ಇದಕ್ಕೆ ಗಮನ ಕೊಟ್ಟು ತುಮಕೂರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿ ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

ಎರಡನೆಯದಾಗಿ ರೈತನಿಗೆ ಬಾವಿ ತೆಗೆಯುವುದಕ್ಕೆ ಬಹಳ ಕಷ್ಟವಿದೆ. ತೆಗೆದ ಮೇಲೆ ಎಲೆಕ್ಟ್ರಿಕ್ ಲೈನ್ ಆಶ್ರಯ ಪಡೆಯುವುದು ಕಷ್ಟ. ನಮ್ಮಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಇದ್ದರೂ ಅದನ್ನು ಉಪಯೋಗಿಸಿಕೊಳ್ಳುವುದು ಬಹಳ ಕಷ್ಟ. ತುಮಕೂರಿನ ಮಧುಗಿರಿ, ಸಿರಾ, ಪಾವಗಡ, ಕೊರಟಗೆರೆ ಇಂಥ ಕಡೆ ಎಲ್ಲಾ ಇರಿಗೇಶನ್ ಬಾವಿಗಳು ಮಾತ್ರ ಇದೆ. ಸಿರಾ ತಾಲ್ಲೂಕಿನಲ್ಲಿ ಹೇಳುವುದಾದರೆ, ಸುಮಾರು ಸಾವಿರಾರು ಬಾವಿಗಳು ವಿದ್ಯುಚ್ಛಕ್ತಿ ಬೇಕಾಗಿ ಹಾಗೆಯೇ ಇವೆ. ಬೇಕಾದಷ್ಟು ವಿದ್ಯುಚ್ಛಕ್ತಿ ಇದ್ದರೂ ಕೂಡ ರೈತನಿಗೆ ಸಕಾಲದಲ್ಲಿ ವಿದ್ಯುಚ್ಛಕ್ತಿ ದೊರೆಯುವುದು ಕಷ್ಟವಾಗಿದೆ. ಆದ್ದರಿಂದ ಆದಷ್ಟು ಜಾಗ್ರತೆ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಅಪೇಕ್ಷೆ ಮಾಡಿದಂತಹ ಕಾಲದಲ್ಲಿ ಜಾಗ್ರತೆ ಕೊಡಬೇಕು. ಅದರಲ್ಲೂ ಸರಕಾರ ಸಪ್ಲೈ ಮಾಡುವಂತಹ ಪದ್ಧತಿಯಲ್ಲೂ ಕಷ್ಟ ಇದೆ. ಅರ್ಜಿ ಕೊಟ್ಟ ಮೇಲೆ ಒಬ್ಬ ಪಂಪು ಸೆಟ್ ಕೊಟ್ಟಿದೆಯಾ ಎಂದು ಕೇಳುತ್ತಾರೆ. ಇನ್ನೊಂದು ಕಡೆ ಪವರ್ ಮಂಜೂರು ಆಗಿದೆಯಾ ಎಂದು ಕೇಳುತ್ತಾರೆ. ಇದರಿಂದ ಒಂದು ಕಟ್ಟುನಿಟ್ಟಾದ ಪದ್ಧತಿ ಇಲ್ಲದೆ ಬಹಳ ಕಷ್ಟವಾಗಿದೆ. ಇವತ್ತಿನ ದಿವಸ ಅಲ್ಲಿ ನೂರಾರು ಬಾವಿಗಳಿಗೆ ಪವರ್ ಸಪ್ಲೈ ಮಾಡದೆ, ವ್ಯವಸಾಯಕ್ಕೆ ತೊಂದರೆಯಾಗಿದೆ. ಯಾವ ಅಧಿಕಾರಿಯನ್ನು ಕೇಳಿದರೂ ಕೂಡ ನಮ್ಮ ಹತ್ತಿರ ಪೋಲು ಇಲ್ಲ, ಪೋಲು ಇದ್ದರೆ ಟ್ರಾನ್ಸ್‌ಫಾರ್ಮರ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಯಾವ ರೀತಿಯಲ್ಲಿ ರೈತನಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆಯೋ ಆ ರೀತಿಯಲ್ಲಿ ಸಹಾಯ ಮಾಡದಿದ್ದರೆ, ರೈತನಿಗೆ ಬೆಳೆ ಬೆಳೆಸುವುದಕ್ಕೆ ಬಹಳ ಕಷ್ಟ.

ಅದೇ ರೀತಿ ಸಾಯಿಲ್ ಕನ್ಸರ್ವೇಷನ್ ವಿಚಾರ. ಇದರಲ್ಲಿ ಒಡ್ಡುಗಳನ್ನು ಎಲ್ಲಾ ಹಾಕಿ ಸರ್ಕಾರದವರು ಕೆಲಸ ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಾಡಿದ್ದಾರೆ. ತಿಪಟೂರು ಸಬ್ ಡಿವಿಜನಿನಲ್ಲಿ ಸ್ವಲ್ಪ ಕಡಿಮೆ ಇದೆ. ಇಲ್ಲಿ ಕೂಡ ಒಡ್ಡುಗಳನ್ನು ಹಾಕಿದರೆ ಬಹಳ ಅನುಕೂಲವಾಗುತ್ತದೆ ಮತ್ತು ಆದಷ್ಟು ಜಾಗ್ರತೆ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಮಣ್ಣನ್ನು ಪರೀಕ್ಷೆ ಮಾಡಬೇಕು. ಇವತ್ತಿನ ದಿವಸ ಮಣ್ಣನ್ನು ತೆಗೆದು ಹೆಬ್ಬಾಳ ಫಾರ್ಮಿಗೆ ಕಳಿಸಿದರೆ ಅದು ಬರುವುದು ಅನೇಕ ತಿಂಗಳ ನಂತರ. ಅದು ಕೂಡ ನಾವು ಕಳಿಸಿದಂತಹ ಮಣ್ಣಿನ ಫಲಿತಾಂಶ ಬರುತ್ತದೆಯೇ, ಅಥವಾ ಬೇರೆ ಮಣ್ಣಿನ ಫಲಿತಾಂಶ ಬರುತ್ತದೆಯೇ ಎಂಬುದು ದೇವರಿಗೆ ಗೊತ್ತು. ಹಲವಾರು ತಿಂಗಳು ಆದ ಮೇಲೆ ಯಾವುದನ್ನು ಕಳಿಸುತ್ತಾರೆಂದು ಗೊತ್ತಾಗುವುದಿಲ್ಲ. ಆದ್ದರಿಂದ ಮಣ್ಣಿನ ಪರೀಕ್ಷೆಯ ಕೇಂದ್ರವನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಿ ಒಂದು ಸ್ಪಷ್ಟವಾದ ಚಿತ್ರವನ್ನು ನಮ್ಮ ಮುಂದೆ ಇಟ್ಟಿರಬೇಕು. ಉದಾಹರಣೆಗೆ ಸರ್ಕಾರ ಬಹಳವಾಗಿ ಪಬ್ಲಿಸಿಟಿ ಕೊಟ್ಟು ತಾಯ್‌ಚುಂಗ್ ಭತ್ತ ಚೆನ್ನಾಗಿ ಬೆಳೆಯುವಂತೆ ಮಾಡಿದ್ದಾರೆ. ಅದು ಕೂಡ ಕೆಲವು ಏರಿಯಾಗಳಲ್ಲಿ ಬೆಳೆಯುವುದಿಲ್ಲವೆಂದು ಗೊತ್ತಾಗಿದೆ. ಉದಾಹರಣೆಗೆ ಪಾವಗಡ ತಾಲ್ಲೂಕಿನ ಕೆಲವು ಕಡೆ ಈ ತಾಯ್‌ಚುಂಗ್ ಭತ್ತ ಚೆನ್ನಾಗಿ ಬೆಳೆಯುವುದಿಲ್ಲ. ರೈತ ಬೆಳೆದು ಅದು ಕೆಟ್ಟು ಹೋದ ಮೇಲೆ ಮಣ್ಣಿನ ಕೊರತೆಯಿಂದ ಎಂದು ಹೇಳುತ್ತಾರೆ. ಇದು ಪರಿಹಾರ ಆಗಬೇಕಾದರೆ, ರೈತನಿಗೆ ಅನುಕೂಲ ಮಾಡಬೇಕಾದರೆ, ಪ್ರತಿಯೊಂದು ಜಿಲ್ಲೆಯಲ್ಲೂ ಮಣ್ಣನ್ನು ಪರೀಕ್ಷೆ ಮಾಡುವ ಕೇಂದ್ರವನ್ನು ತೆರೆದು ರೈತರಿಗೆ ಅನುಕೂಲ ಮಾಡಿಕೊಡುವ ಯೋಜನೆಯನ್ನು ಮಾಡಿದರೆ ಒಳ್ಳೆಯದೆಂದು ನನಗನಿಸುತ್ತದೆ. ಇದರ ಜೊತೆಗೆ ಸರ್ಕಾರದವರು ವಿಜ್ಞಾನ ಮಂದಿರಗಳನ್ನು ಸ್ಥಾಪನೆ ಮಾಡಿದ್ದಾರೆ. ಮೊನ್ನೆ ವಿದ್ಯಾ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಇವುಗಳು ಏನೇನು ಕೆಲಸಗಳನ್ನು ಮಾಡುತ್ತವೆಂದು ಹೇಳಿದ್ದಾರೆ. ಇವತ್ತಿನ ದಿವಸ ಅವುಗಳ ಬಗ್ಗೆ ಹೇಳುವುದಾದರೆ, ಅವುಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅದನ್ನು ವಿದ್ಯಾಭ್ಯಾಸ ಇಲಾಖೆಯಿಂದ ವ್ಯವಸಾಯ ಇಲಾಖೆಗೆ ಕೊಟ್ಟು ಎಲ್ಲಾ ವಿಧವಾದ ಸಲಕರಣೆಗಳನ್ನೂ ಒದಗಿಸಬೇಕು. ಈಗ ತುಮಕೂರು ಜಿಲ್ಲೆಯೊಳಗೆ ಒಂದು ಇದೆ, ಕೋಲಾರ ಜಿಲ್ಲೆಯೊಳಗೆ ಒಂದು ಇದೆ. ಸಾಮಾನ್ಯವಾಗಿ ಒಟ್ಟು 6-7 ವಿಜ್ಞಾನ ಮಂದಿರಗಳು ಇವೆ. ಇವುಗಳನ್ನು ವ್ಯವಸಾಯ ಇಲಾಖೆಗೆ ವಹಿಸಿಕೊಟ್ಟರೆ ಸಹಜವಾಗಿ ಅವರು ಆ ಜಿಲ್ಲೆಯಲ್ಲಿರುವ ಎಲ್ಲಾ ಕಡೆಯ ಭೂಸಾರದ ಪರೀಕ್ಷೆ ಮಾಡಿ ಒಂದು ನಕ್ಷೆ ಇಡಲು ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡುವುದು ಉತ್ತಮವೆಂದು ಕಾಣುತ್ತದೆ. ನಮ್ಮ ಕಡೆ 37 ಜನರು ಏನು ದುರದೃಷ್ಟವೋ ಇನ್ನೂ ಗ್ರಾಮಸೇವಕರಾಗಿದ್ದಾರೆ. ನಾನ್-ಟೆಕ್ನಿಕಲ್ ಪೀಪಲ್ಸ್ ವ್ಯವಸಾಯದ ಬಗ್ಗೆ ಯಾವುದೇ ವಿಧವಾದ ಅನುಭವವಿಲ್ಲದಿದ್ದರೂ ಸಹ ಕೆಲವರು ಗ್ರಾಮಸೇವಕರಾಗಿ ಕೆಲಸಕ್ಕೆ ಸೇರಿಕೊಂಡು ಇವತ್ತಿನ ದಿವಸ ಎಕ್ಸ್‌ಟೆನ್‌ಷನ್ ಆಫೀಸರ್ ಆಗಿ ಮುಂದೆ ಬಂದಿದ್ದಾರೆ. ನಾನು ಹೇಳಿದ 37 ಜನರಲ್ಲಿ ಒಬ್ಬನು ಬಿ.ಎಸ್‌ಸಿ. (ಅಗ್ರಿಕಲ್‌ಚರ್) ಮಾಡಿಕೊಂಡಿದ್ದಾನೆ. ಇದುವರೆಗೆ ಯಾವ ಪ್ರಮೋಷನ್ ಸಹ ಇವರಿಗೆ ಸಿಗದೆ ಅವರು ಮನಸ್ಸಿಟ್ಟು ಕೆಲಸ ಮಾಡುವುದಕ್ಕೆ ತೊಂದರೆಯಾಗಿದೆ. ಅವರಿಗೆ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ. ಅವರಿಗೂ ಸಹ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೆ ಅಷ್ಟೊಂದು ಶ್ರದ್ಧೆಯಿರುವುದಿಲ್ಲ. ಈ ಜನರ ಬಗ್ಗೆ ಸರ್ಕಾರದವರು ಕರುಣೆ ಇಟ್ಟು ಅವರಿಗೆ ಸಿಗಬೇಕಾದ ಪ್ರಮೋಷನ್‌ಗಳನ್ನು ಕೊಡಿಸಿಕೊಟ್ಟರೆ, ಅವರು ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ.

ಇನ್ನು ನೀರಾವರಿ ಬಾವಿಗಳ ಬಗ್ಗೆ ಹೇಳುವುದಾದರೆ ಈ ಬಾಬಿಗೆ ಸಾಕಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ಸಾಲದು. ಇವತ್ತಿನ ದಿವಸ ತಾಲ್ಲೂಕಿಗೆ 100 ಅಥವಾ 50 ಬಾವಿಗಳನ್ನು ತೆಗೆದರೆ ದೇಶದಲ್ಲಿರುವ ಆಹಾರದ ಅಭಾವ ಹೋಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಾವಿಗಳನ್ನು ತೆಗೆಸುವುದಕ್ಕೆ ಏರ್ಪಾಡು ಮಾಡಬೇಕು. ಈಗ ಈ ಬಾಬಿಗೆ ಒದಗಿಸಿರುವ ಎರಡರಷ್ಟು ಹಣವನ್ನು ಒದಗಿಸಿದರೆ, ದೇಶದಲ್ಲಿ ಸ್ವಲ್ಪಮಟ್ಟಿಗೆ ಆಹಾರದ ಅಭಾವ ಹೋಗುವುದಕ್ಕೆ ಕಾರಣವಾಗುತ್ತದೆ. ಇವತ್ತು ಎನ್. ಇ. ಎಸ್. ಇಲಾಖೆಯನ್ನು ಪ್ರತ್ಯೇಕವಾಗಿ ಇಟ್ಟಿದ್ದಾರೆ. ಇದನ್ನು ಪ್ರಾರಂಭ ಮಾಡಿದ ಉದ್ದೇಶ, ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಮಾಡಬೇಕೆಂಬುದಾಗಿ. ಈ ಬಾಬಿಗೆ ಬಜೆಟ್‌ನಲ್ಲಿ ಬೇಕಾದಷ್ಟು ಹಣವನ್ನು ಒದಗಿಸುತ್ತಿದ್ದಾರೆ. ಈ ಇಲಾಖೆ ಕೆಲಸ ಮಾಡಲು ಬೇಕಾಗುವ ಎಲ್ಲಾ ರೀತಿಯ ಉಪಕರಣಗಳನ್ನೂ ತಂದಿಟ್ಟರು. ಯಾವ ಅಧಿಕಾರಿಗಳು ಸಹ ಈ ಉಪಕರಣಗಳ ಉಪಯೋಗವನ್ನು ರೈತರಿಗೆ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲಾ ಕಡೆಯೂ ವ್ಯವಸಾಯದ ಉಪಕರಣಗಳು, ಮೆಷಿನರಿಗಳನ್ನು ಒದಗಿಸಿದರೂ ಸಹ ಅವುಗಳು ಕೆಟ್ಟು ಹೋದರೆ ಗ್ರಾಮಸೇವಕರಿಗೆ ರಿಪೇರಿ ಮಾಡಿಸುವ ವ್ಯವಸ್ಥೆಯಿಲ್ಲ. ಇದರಿಂದ ರೈತರುಗಳು

(ಶ್ರೀ ಎಂ. ಎನ್. ರಾಮಣ್ಣ)

ತಮಗೆ ಬೇಕಾಗುವ ಉಪಕರಣಗಳಿಗಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ಕಷ್ಟ ಬರುತ್ತದೆ. ಈ ಕಷ್ಟ ಪರಿಹಾರ ಮಾಡಲು ಕೆಟ್ಟುಹೋದ ಉಪಕರಣಗಳನ್ನು ಜಾಗ್ರತೆ ರಿಪೇರಿ ಮಾಡಿಸುವ ವ್ಯವಸ್ಥೆ ಮಾಡಬೇಕು.

ಇನ್ನು ವ್ಯವಸಾಯದ ಇಲಾಖೆ ಬಗ್ಗೆ ಹೇಳುವುದಾದರೆ, ಸರ್ಕಾರದವರು ಇವತ್ತಿನ ದಿವಸ ರಾಗಿ, ಭತ್ತ ಕೊಳ್ಳಲು ಒಂದು ದರವನ್ನು ನಿಗದಿ ಮಾಡಿದ್ದಾರೆ. ಆ ದರವನ್ನು ತೆಗೆದುಹಾಕಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಈ ದರದಿಂದ ಯಾರಿಗೆ ಅನುಕೂಲವಾಗುತ್ತದೆಂದರೆ, ಪೇಟೆಯಲ್ಲಿರುವ ಜನರಿಗೆ ಮತ್ತು ವ್ಯವಸಾಯ ಮಾಡದ ಜನರಿಗೆ ಎಂದು ಹೇಳಬಹುದು. ವ್ಯವಸಾಯಗಾರರಿಗೆ ಬರಬೇಕಾದಂಥ ಪ್ರತಿಫಲ ಇವತ್ತಿನ ದಿವಸ ಬರುತ್ತಿಲ್ಲ. ಮಿನಿಮಮ್ ಕಂಟ್ರೋಲ್ ಬೇಕಾದರೆ ಇಡಿ. ಆದರೆ ವ್ಯವಸಾಯಗಾರರಿಗೆ ಎಷ್ಟರಮಟ್ಟಿನ ಪುರಸ್ಕಾರ ಕೊಡಬೇಕೆಂದರೆ, ಪೇಟೆಯಲ್ಲಿ ಏನು ದರವಿರುತ್ತದೋ, ಅದೇ ದರದಲ್ಲಿ ಅವನಲ್ಲಿರುವ ಆಹಾರ ಧಾನ್ಯವನ್ನು ಕೊಳ್ಳಬೇಕು. ಅವರಿಗೆ ಬೇಕಾಗುವ ಎಲ್ಲಾ ರೀತಿಯ ಅನುಕೂಲಗಳನ್ನೂ ಒದಗಿಸಿಕೊಡಬೇಕು. ಕೂಲಿಗಾರರಿಗೆ ಮತ್ತು ಇತರ ಜನಾಂಗದವರಿಗೆ ಯಾವ ರೀತಿಯಲ್ಲಿ ಆಹಾರಧಾನ್ಯವನ್ನು ಮಾರುತ್ತಿದ್ದೀರೋ, ಅದೇ ದರದಲ್ಲಿ ಅವರಿಂದ ಕೊಳ್ಳಬೇಕು. ಇದರಿಂದ ಅವರು ಹೆಚ್ಚು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಯಾವುದೇ ವಿಧವಾದಂಥ ಕೈಗಾರಿಕೆಯೂ ಇದುವರೆಗೆ ಸ್ಥಾಪನೆಯಾಗಿಲ್ಲ. ನಮ್ಮ ಜಿಲ್ಲೆಯ ಜನರು ವ್ಯವಸಾಯವನ್ನೇ ನಂಬಿದ್ದರೂ ಸಹ, ಈ ವ್ಯವಸಾಯದಿಂದ ಉತ್ಪನ್ನವಾಗುವ ಕಚ್ಚಾವಸ್ತುಗಳಿಂದ ಉಪಯೋಗ ಪಡೆಯಲು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಸಾಧ್ಯವಿದೆ. ಬೆಂಗಳೂರು ನಗರದಲ್ಲೇ ಎಲ್ಲಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಬದಲು ಇಡೀ ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಸ್ಥಾಪನೆ ಮಾಡುವುದು ಒಳ್ಳೆಯದು. ನಮ್ಮ ತುಮಕೂರು ಜಿಲ್ಲೆಯಲ್ಲೂ ಸಹ ಯಾವುದಾದರೂ ಒಂದು ಉತ್ತಮವಾದ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದು ಒಳ್ಳೆಯದು. ತಿಪಟೂರು ತಾಲ್ಲೂಕಿನಲ್ಲಿ ಬೇಕಾದಷ್ಟು ತೆಂಗಿನ ಮರಗಳಿವೆ. ಆದ್ದರಿಂದ ಆ ಭಾಗದಲ್ಲಿ ಕಾಯರ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡುವುದು ಒಳ್ಳೆಯದು. ದಿವಂಗತ ಮಲ್ಲಪ್ಪನವರು ದಿಬ್ಬನಹಳ್ಳಿ ಬಳಿ ಒಂದು ಕಾಯರ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡುವುದು ಒಳ್ಳೆಯದೆಂದು, ಇದರಿಂದ ಸುತ್ತಮುತ್ತಲ ಮೂರು ತಾಲ್ಲೂಕ್‌ನವರು ಕಚ್ಚಾವಸ್ತುಗಳನ್ನು ಅಲ್ಲಿಗೆ ತರಲು ಅನುಕೂಲವಾಗುತ್ತದೆಂದು ತಿಳಿಸಿದ್ದರು. ಈಗಲಾದರೂ ಆ ಜಾಗದಲ್ಲಿ ಸರ್ಕಾರದವರು ಒಂದು ಕಾಯರ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತುಮಕೂರಿನಲ್ಲಿ ಹೆಚ್ಚಾಗಿ ಅಡಕೆಯನ್ನು ಸಹಾ ಬೆಳೆಯುತ್ತಾರೆ. ಅದರ ಸಿಪ್ಪೆಯಿಂದ ಕಾರ್ಡ್ ಬೋರ್ಡ್ ವಸ್ತುಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಅದರ ಸಿಪ್ಪೆಯನ್ನು ಜನರು ಒಲೆಗೆ ಹಾಕುತ್ತಿದ್ದಾರೆ. ಇದರ ಉಪಯೋಗ ಕಂಡುಹಿಡಿಯುವ ಬಗ್ಗೆ ಒಂದು ರೀಸರ್ಚ್ ಸ್ಟೇಷನ್ ಕ್ಯಾತಸಂದ್ರದ ಬಳಿಯಿದೆ. ಈ ಸಿಪ್ಪೆಯಿಂದ ಅನೇಕ ವಸ್ತುಗಳನ್ನು ತಯಾರು ಮಾಡುವುದು ಸಾಧ್ಯವಿರುವುರಿಂದ, ಆ ಬಗ್ಗೆ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಎಲ್ಲಾ ಕಡೆಯೂ ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್‌ಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಇದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ದಿವಂಗತ ಮಲ್ಲಪ್ಪನವರು ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕ್ ಸ್ಥಾಪನೆ ಮಾಡುವ ಕಾಲಕ್ಕೆ ಅನೇಕ ಜನರು ಮತ್ತು ರಿಜರ್ವ್ ಬ್ಯಾಂಕ್‌ನವರು ವಿರೋಧ ಮಾಡಿದರು. ಆದರೂ ಸಹ ಅವರು ಸಣ್ಣಪುಟ್ಟ ಕೈಗಾರಿಕೆಗಳು ಬೆಳೆಯದೆ ಹೋದರೆ, ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದಿಲ್ಲವೆಂದು ಮನಗಂಡು, ಬಹಳ ಧೈರ್ಯದಿಂದ ಒಂದು ಹೆಜ್ಜೆ ಮುಂದೆ ಇಟ್ಟು ಈ ಬ್ಯಾಂಕುಗಳನ್ನು ಸ್ಥಾಪನೆ ಮಾಡಿಸಿದರು.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಎಲ್ಲಾ ಬ್ಯಾಂಕುಗಳಲ್ಲೂ ಕಾಂಗ್ರೆಸ್‌ನವರೇ ಪ್ರೆಸಿಡೆಂಟ್ ಆಗಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ. ಹಾಸನದಲ್ಲಿರುವ ಬ್ಯಾಂಕ್‌ಗೆ ತಮ್ಮ ಪಕ್ಷದವರೇ ಆದ ಶ್ರೀ ಜ್ವಾಲನಯ್ಯನವರು ಪ್ರೆಸಿಡೆಂಟರಾಗಿದ್ದಾರೆ. ಸರ್ಕಾರದವರು ಸಣ್ಣ ಸಣ್ಣ ಕೈಗಾರಿಕೆಗಳನ್ನು ಹಳ್ಳಿಗಾಡಿನ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಪ್ರಾರಂಭ ಮಾಡಲು ಅನುಕೂಲ ಮಾಡಿದರೆ, ಆ ಮೂಲಕ ರೈತರಿಗೆ ಹೆಚ್ಚು ಅನುಕೂಲ ಮಾಡಿ

ಕೊಟ್ಟಂತಾಗುತ್ತದೆ. ಈ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆಂದು ಕೇಳಿದ್ದೇನೆ. ಸೊಸೈಟಿಗಳಿಗೆ ಮಾತ್ರ ಸಾಲ ಕೊಡಬೇಕು, ಸ್ವಂತವಾಗಿ ಸಾಲ ಕೇಳುವ ಜನರಿಗೆ ಕೊಡಬಾರದೆಂದು ಆಜ್ಞೆ ಹೊರಡಿಸಿದ್ದಾರೆ. ಇದರಿಂದ ಹಳ್ಳಿಗಾಡುಗಳಲ್ಲಿ ಸಣ್ಣ ಕೈಗಾರಿಕೆಯನ್ನು ಯಾರಾದರೂ ಸ್ಥಾಪನೆ ಮಾಡಬೇಕೆಂದರೆ ಅಂಥವರಿಗೆ ತೊಂದರೆಯಾಗುತ್ತದೆ. ಇದರಿಂದ ಸಣ್ಣ ಪುಟ್ಟ ಕೈಗಾರಿಕೆ ಬೆಳೆಯುವುದಕ್ಕೆ ಅನುಕೂಲವಾಗುವುದಿಲ್ಲ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕ್‌ನಿಂದ ಈಗ ಕೊಡುತ್ತಿರುವ ಧನಸಹಾಯವಾಗಲೀ, ಸಾಲದ ರೂಪದಲ್ಲಿ ಕೊಡುತ್ತಿರುವ ಹಣವಾಗಲೀ ಬಹಳ ಕಡಿಮೆಯಿದೆ. ಸಾಲಕ್ಕಾಗಿ ಅರ್ಜಿ ಹಾಕಿಕೊಂಡವರಿಗೆ ಶೀಘ್ರವಾಗಿ ಹಣ ಕೊಡಿಸುವ ಏರ್ಪಾಡು ಮಾಡಬೇಕು ಮತ್ತು ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು, ನಾನು ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಕೈಗಾರಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಮೈಸೂರು ಸರಕಾರದ ಕೈಗಾರಿಕಾ ನೀತಿ ಅಷ್ಟಾಗಿ ಏನೂ ಒಳ್ಳೆಯ ಫಲಪ್ರದವಾದುದಲ್ಲ. ನಮ್ಮ ರಾಜ್ಯದ ಅಭ್ಯುದಯ ಇದರಿಂದಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಇವತ್ತು ಅನೇಕ ಕೈಗಾರಿಕೆಗಳನ್ನು ವಿದೇಶದ ಬಂಡವಾಳದಿಂದ ಒಂದು ರೀತಿಯ ಕೊಲ್ಯಾಬೊರೇಷನ್‌ನಿಂದ ನಡೆಸುತ್ತಿದ್ದಾರೆ. ನನಗನ್ನಿಸುತ್ತದೆ ಇದರಿಂದ ಕೈಗಾರಿಕೋದ್ಯಮಿಗಳ ಕೆಲಸ ಮುಂದುವರೆಯುವುದಕ್ಕೆ ಬದಲಾಗಿ ಕೆಲವು ಜನ ಡೈರೆಕ್ಟರುಗಳು ಮೂರು ನಾಲ್ಕು ಜನರು ಸೇರಿ ಒಂದು ಸಿಂಡಿಕೇಟ್ ಮಾಡಿಕೊಂಡಿದ್ದಾರೆ. ಅವರು ವಿದೇಶದ ಬಂಡವಾಳ ಹಾಕಿ ಕೈಗಾರಿಕೆಗಳನ್ನು ಉದ್ಧಾರಮಾಡುತ್ತೇವೆಂದು ಮಂತ್ರಿಗಳಿಗೆ ಹೇಳಿ ವಿದೇಶದಲ್ಲಿ ಪ್ರವಾಸ ಮಾಡಿ ಅಲ್ಲಿಂದ ಹಣ ತರುವ ದೃಷ್ಟಿಯಿಂದ ಏಜಂಟರಾಗಿದ್ದಾರೆಯೇ ಹೊರತು ಕೊಲ್ಯಾಬೊರೇಷನ್ನಿನಿಂದ ಕೈಗಾರಿಕೆ ಉದ್ಧಾರವಾಗಿಲ್ಲ. ಇದಕ್ಕೆ ನಿದರ್ಶನವನ್ನು ಕೊಡುವುದಾದರೆ ಮೈಸೂರು ಲ್ಯಾಂಪ್ ವರ್ಕ್ಸ್ ವಿಚಾರ ಆಗಲೇ ಮಾನ್ಯ ಸದಸ್ಯರು ಹೇಳಿದರು, ಅಮೇರಿಕಾದೊಡನೆ ಕೊಲ್ಯಾಬರೇಷನ್ ಆಗದಿದ್ದರೆ ಚೆನ್ನಾಗಿತ್ತು. ಈ ದಿವಸ ಕೊಲ್ಯಾಬೊರೇಷನ್ ಆಗಿ ಅದರ ಗತಿ ಏನಾಗಿದೆಯೆಂದರೆ ಕೇವಲ ಅಧಿಕಾರಿಗಳ ಸಂಬಳ ಹೆಚ್ಚಿಸಿದ್ದಾರೆಯೇ ಹೊರತು ಯಾವುದೇ ವಿಚಾರದಲ್ಲೂ ಕೊಲ್ಯಾಬೊರೇಷನ್ನಿನಿಂದ ಅನುಕೂಲವಾಗಿಲ್ಲ. ಹೀಗೆ ಈ ಸರಕಾರವನ್ನೂ ಕೂಡ ಯಾರಿಗಾದರೂ ಕೊಲ್ಯಾಬೊರೇಷನ್ ಮಾಡಿದರೆ ಅನುಕೂಲವೆಂದು ಕಾಣುತ್ತದೆ, ಹಾಗೆ ಮಾಡಿದ್ದರೆ ಚೆನ್ನಾಗಿತ್ತೋ ಏನೋ, ಒಳ್ಳೆಯದಾಗುತ್ತಿತ್ತೋ ಏನೋ, ಇದೊಂದು ಕೊಲ್ಯಾಬೊರೇಷನ್ ಗವರ್ನ್ಮೆಂಟ್ ಮಾಡಿದರೆ ಅನುಕೂಲವಾಗಬಹುದೇನೋ, ಆ ರೀತಿ ಮಾಡಿ. ವಿದೇಶಿ ಬಂಡವಾಳ ಹಾಕಿ ಕೊಲ್ಯಾಬೊರೇಷನ್ನಿನಿಂದ ನಡೆಯುತ್ತಿರುವ ಯಾವ ಕೈಗಾರಿಕೆಯಾದರೂ ದಕ್ಷತೆಯಿಂದ ನಡೆಯುತ್ತಿದೆಯೇ? ನಮ್ಮಲ್ಲನೇಕರು ಇಂದು ಕೊಲ್ಯಾಬೊರೇಷನ್ ಮಾಡಿಸುವುದು ಮತ್ತು ಇನ್ನೂ ಅನೇಕ ವಿಧವಾಗಿ ಏಜೆಂಟರಾಗಿರುವುದು ಈ ಕೆಲಸ ಮಾಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ನಮ್ಮಲ್ಲಿ ಯಾರೂ ಕೈಗಾರಿಕೆ ಸ್ಥಾಪನೆ ಮಾಡುವವರಿಲ್ಲ ಎಂದು ಭಾವಿಸಿ ನೆರೆ ರಾಜ್ಯದಿಂದ ಅನೇಕರು ಕೈಗಾರಿಕೋದ್ಯಮಿಗಳನ್ನು ಕರೆಸಿ ಅನೇಕ ಸದಸ್ಯರು ಪ್ರತಿಭಟಿಸುತ್ತಿದ್ದಾರೆ. ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದಿರುವುದನ್ನು ಚುನಾವಣೆಗಿಂತ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ಅವರ ಅಕ್ಕಪಕ್ಕದಲ್ಲಿದ್ದಂಥ ಜಯವಿಜಯರಿಬ್ಬರನ್ನು ಕರೆದುಕೊಂಡು ಕಲ್ಕತ್ತಾಕ್ಕೆ ಹೋಗಿ ತಾತ ಬಿರ್ಲಾರವರನ್ನು ನಮ್ಮ ದೇಶದಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪಿಸಲು ಆಹ್ವಾನಿಸಿದರು, ಅದಕ್ಕೆ ಬೇಕಾದ ಜಾಗ, ನೀರು, ವಿದ್ಯುಚ್ಛಕ್ತಿ ಮುಂತಾದ ಸೌಕರ್ಯಗಳನ್ನೊದಗಿಸುವುದಾಗಿ ಅವರಿಗೆ ಹೇಳಿದರು. ಅದಕ್ಕಾಗಿ ತಾತ ಬಿರ್ಲಾರವರಲ್ಲಿ ಮೊರೆಯಿಟ್ಟರು. ಅದೇ ನಮ್ಮ ದೇಶದಲ್ಲಿರುವವರಿಗೆ ಬೇಕಾದ ಸೌಲಭ್ಯಗಳನ್ನು ನೀಡಿದ್ದರೇ ಅವರು ಕೈಗಾರಿಕೆಗಳನ್ನು ಸ್ಥಾಪಿಸುತ್ತಿರಲಿಲ್ಲವೇ? ತಾತ ಬಿರ್ಲಾ ತೇರೇ ನಾಂ ಲೈಸೆನ್ಸ್ ಪರ್ಮಿಟ್ ಕಾಂಗ್ರೆಸ್ ನಾಂ ಎನ್ನುವಂತೆ ಈಗಿನ ಪರಿಸ್ಥಿತಿ ಇದೆ. ಇಲ್ಲಿನವರಿಗೆ ಸರಿಯಾದ ಸೌಲಭ್ಯ ಕೊಡುತ್ತಿಲ್ಲ, ಒಂದು ಸಣ್ಣ ಕೈಗಾರಿಕೆ ಇಲ್ಲಿ ಪಡುವ ಕಷ್ಟ ಹೇಳತೀರದು, ಅದನ್ನು ಕೇಳುವವರೇ ಇಲ್ಲ, ಅದಕ್ಕೆ ನೀರಿಲ್ಲ, ಬೇಕಾದ ಸಾಮಾನುಗಳ ಕೋಟಾ ಇಲ್ಲ, ಅದಕ್ಕೆ ಎಲ್ಲಾ ಕಿರುಕುಳವನ್ನೂ ಕೊಡುತ್ತಿದ್ದಾರೆ. ಆದರೆ ನಮ್ಮ ಸರಕಾರ ಈ ದಿವಸ ವೇದಾಂತ ಹೇಳುತ್ತಿದೆ, ನಮ್ಮಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಯಾರೂ ಮುಂದೆ ಬರುವವರೇ ಇಲ್ಲ, ಬಂದರೆ ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಲಕ್ಷಾಂತರ ಮಂದಿ ಅರ್ಜಿ

(ಶ್ರೀ ವಾಟಾಳ್ ನಾಗರಾಜ್)

ಗಳನ್ನು ಕೊಟ್ಟು ತಾವು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾಗಿಯೂ ಸೌಲಭ್ಯಗಳನ್ನು ಕೊಡಬೇಕೆಂದೂ ಕೇಳಿಕೊಂಡಿದ್ದಾರೆ. ಆದರೆ ಅವರನ್ನೆಲ್ಲಾ ಬಿಟ್ಟು ಬಿರ್ಲಾ ತಾತ ಕರ್ಣಾಟಕಕ್ಕೆ ಬರಬೇಕು ಎಂಬ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಿದರೆ ನಿಜವಾಗಿಯೂ ದೇಶಾಭ್ಯುದಯವಾಗುತ್ತದೆಯೇ ಎಂಬುದನ್ನು ವಿಚಾರಮಾಡಿ ನೋಡಬೇಕು. ಬಿರ್ಲಾ ತಾತಾರವರು ಇಂಡಿಯಾ ದೇಶವೇ ತಮ್ಮ ಕೈಲಿದೆ, ಪ್ರಧಾನ ಮಂತ್ರಿಗಳನ್ನು ಬೇಕಾದರೆ ನಾವೇ ಚುನಾಯಿಸುತ್ತೇವೆ ಎಂಬ ಧೋರಣೆಯುಳ್ಳವರಾಗಿದ್ದಾರೆ. ಇದರಿಂದ ನಿಜಲಿಂಗಪ್ಪನವರಿಗೆ ಬೆಂಬಲ ದೊರೆಯುತ್ತದೆ ಎಂದು ಭಾವಿಸಿ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅವರು ಸಾವಿರಾರಾಗಿ ಈ ರಾಜ್ಯವನ್ನು ಬಲಿ ಕೊಡಬಾರದು, ಅನ್ಯಾಯ ಮಾಡಬಾರದು. ರಾಜ್ಯದಲ್ಲಿ ಪ್ರಗತಿಯಾಗಬೇಕು ಎಂಬ ದೃಷ್ಟಿ, ಆದರ್ಶ, ಅಭಿಪ್ರಾಯ ಇರುವುದಾದರೆ ಇಲ್ಲಿರುವ ಜನರನ್ನೇ ಆಹ್ವಾನಿಸಿ, ನಮ್ಮ ರಾಜ್ಯದಲ್ಲಿ ಮುಂದೆ ಬರುವವರಿಗೇ ಎಲ್ಲ ಸೌಲಭ್ಯಗಳನ್ನೂ ಕೊಟ್ಟು ಎಲ್ಲ ಕೈಗಾರಿಕೆಗಳನ್ನೂ ಸ್ಥಾಪಿಸಬೇಕು. ಇದಲ್ಲದೆ ಮತ್ತೊಂದು ಜಾಡ್ಯವಿದೆ. ನೆರೆ ರಾಜ್ಯದವರು ಇಲ್ಲಿಗೆ ಬಂದು ಅವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಿರುದ್ಯೋಗದ ಪ್ರಶ್ನೆ ಹೆಚ್ಚುತ್ತದೆ, ಹೊರಗಿನವರು ಬಂದರೆ ಅವರಿಗೆ ಬೇಕಾದವರಿಗೆ, ಮಲೆಯಾಳಿಗಳು, ಮದ್ರಾಸಿಗಳು ಮುಂತಾದವರಿಗೆ ಹೆಚ್ಚು ಉದ್ಯೋಗಗಳನ್ನು ಅವರು ಸ್ಥಾಪಿಸುವ ಕೈಗಾರಿಕೆಗಳಲ್ಲಿ ಕೊಡುತ್ತಾರೆ, ಮೈಸೂರಿನವರಿಗೆ ದೊರೆಯುವುದಿಲ್ಲ. ಇಲ್ಲಿ ಸ್ಥಾಪಿಸಲ್ಪಟ್ಟಿರುವ ಯಾವುದೇ ಕೈಗಾರಿಕೆ ತೆಗೆದುಕೊಂಡರೂ ಕೂಡ ಸೇಕಡ 90 ಮಂದಿ ನೌಕರರು ಅದರಲ್ಲಿ ಬೇರೆ ರಾಜ್ಯಗಳವರೇ ಇದ್ದಾರೆ, ಯಾವ ಕನ್ನಡಿಗರಿಗೂ ಕೆಲಸ ಸಿಗವೇ ಎಷ್ಟೋ ಕೈಗಾರಿಕೆಗಳು ಇಲ್ಲಿ ಸ್ಥಾಪನೆಯಾದರೂ ಸಹ ಅವರು ನಿರುದ್ಯೋಗಿಗಳಾಗಿಯೇ ಉಳಿಯುತ್ತಿದ್ದಾರೆ. ಕೆಂಪೇಗೌಡ ಸರ್ಕಲಿನಲ್ಲಿ ನೋಡಿದರೆ ಅನೇಕ ಕನ್ನಡಿಗರು ಕೆಲಸವಿಲ್ಲದೆ ಅಲೆದಾಡುತ್ತಿರುತ್ತಾರೆ. ಅದೇ ನೆರೆ ರಾಜ್ಯದವರಾದರೆ ಇವತ್ತು ಇಲ್ಲಿಗೆ ಬಂದರೆ ಮಾರನೆ ದಿವಸ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿ ಅದಾವ ಕೂಡಲೆ ಕೆಲಸಕ್ಕೆ ಸೇರಿಬಿಡುತ್ತಾರೆ. ಪರಿಸ್ಥಿತಿ ಹೀಗಿದೆ. ಆದರೆ ಬಾಯಲ್ಲಿ ಹೇಳುವ ನೀತಿ ನೋಡಿದರೆ ಕೈಗಾರಿಕೆಗಳನ್ನು ಉದ್ಧಾರ ಮಾಡುತ್ತೇವೆ, ದೇಶೋದ್ಧಾರ ಮಾಡುತ್ತೇವೆ ಎಂದು ಹೇಳುವುದನ್ನು ನೋಡಿ ಜನರು ಮೋಸ ಹೋಗಬೇಕು. ಬರೀ ವೇದಾಂತ ಹೇಳಿಕೊಂಡು ಕಾಲ ಕಳೆಯುತ್ತಿದ್ದಾರೆಯೇ ಹೊರತು ದಕ್ಷತೆಯಿಂದ ಕೆಲಸ ಮಾಡಲು ಯೋಗ್ಯತೆಯಿಲ್ಲ. ಈಗಿನ ಪರಿಸ್ಥಿತಿ ಕೋಣದ ಮುಂದೆ ಕಿಂದರಿ ಬಾರಿಸಿದ ಹಾಗಾಗಿದೆ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಕೋಣ ಇದ್ದ ಕಡೆಯೇ ಇವೆ, ಕಿಂದರಿ ಬಾರಿಸಿ ಬಾರಿಸಿ ಮುರಿಯಿತು. ಈ ರೀತಿ ಇದೆ ಸರಕಾರದ ನೀತಿ. ಅವರು ಅನುಸರಿಸುವ ನೀತಿ ಯಾವುದು ಎಂಬುದನ್ನು ಹೇಳಲಿ. ಅವರಿಗೆ ಕೊಲಾಬೊರೇಷನ್ ಬೇಕಾಗಿಥೆ, ದಕ್ಷತೆ ಇಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಬೇಕಾಗಿತ್ತು; ವಿದೇಶಿ ತಜ್ಞರು ಅಲ್ಲಿ ಆಗಬೇಕಾದ್ದು ಸೂಕ್ತವೆಂದು ಹೇಳಿಧಾಗ ನಮ್ಮ ಸರಕಾರದವರು ಅದಕ್ಕಾಗಿ ಹೊಡೆದಾಡಲಿಲ್ಲ, ಅದನ್ನು ಮದ್ರಾಸು ರಾಜ್ಯದಲ್ಲಿ ಸ್ಥಾಪಿಸಬೇಕೆಂದು ಅಲ್ಲಿನವರೂ ಮತ್ತು ಆಂಧ್ರ ದೇಶದಲ್ಲಿ ಮಾಡಬೇಕೆಂದು ಆ ದೇಶದವರೂ ಒತ್ತಾಯ ಮಾಡುತ್ತಿದ್ದರೆ ನಮ್ಮವರು ಸುಮ್ಮನಿದ್ದಾರೆ. ಸೇಲಂನಲ್ಲಿ ಸ್ಥಾಪಿಸದಿದ್ದರೆ ರಾಜೀನಾಮೆ ಕೊಡಲು ಸಿದ್ಧವೆಂದು ಅಲ್ಲಿನವರೂ, ವಿಶಾಖಪಟ್ಟಣದಲ್ಲಿ ಮಾಡದಿದ್ದರೆ ಆತ್ಮಾರ್ಪಣೆ-ಮಾಡಿಕೊಳ್ಳುವುದಾಗಿ ಅಲ್ಲಿನವರೂ ಹೇಳುತ್ತಿದ್ದಾರೆ. ಆದರೆ ಕರ್ಣಾಟಕದಲ್ಲಾಗದಿದ್ದರೆ ರಾಜೀನಾಮೆ ಕೊಡುವವರಾಗಲೀ ಅಥವಾ ಆತ್ಮಾರ್ಪಣೆ ಮಾಡಿಕೊಳ್ಳುವವರಾಗಲಿ ಯಾರಿದ್ದಾರೆ? ನಾನು ಇಂದು ಮುಖ್ಯ ಮಂತ್ರಿಯಾಗಿದ್ದಿದ್ದರೆ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯಾಗದಿದ್ದರೆ ರಾಜೀನಾಮೆ ಕೊಡುತ್ತಿದ್ದೆ. ಕೈಗಾರಿಕಾ ನೀತಿಯು ಇಷ್ಟು ಅಧ್ವಾನ್ನವಾಗಿದೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರ. ಇದರಲ್ಲೇನಾಗಿದೆಯೆಂಬುದನ್ನು ಹೇಳುತ್ತೇನೆ. ಹಿಂದೆ ಒಬ್ಬ ರಾಜನಿದ್ದ. ಅವನ ರಾಜ್ಯದಲ್ಲಿ ಕಾಲಕ್ಕೆ ಸರಿಯಾಗಿ ಎಲ್ಲರಿಗೂ ನ್ಯಾಯ ದೊರೆಯುತ್ತಿತ್ತು. ಆ ರಾಜ ಊರಬಾಗಿಲಿಗೆ ಒಂದು ಗಂಟೆ ಕಟ್ಟಿಸಿದ್ದ, ಯಾರಿಗಾದರೂ ಅನ್ಯಾಯವಾದರೆ, ನ್ಯಾಯ ದೊರೆಯದಿದ್ದರೆ ಆ ಗಂಟೆಯನ್ನು ಅವರು ಬಾರಿಸಿದರೆ ರಾಜನು ತಕ್ಷಣ ಬಂದು ವಿಚಾರಿಸುತ್ತಿದ್ದ. ಒಂದು ದಿನ ಒಂದು ಬಡ ಕುದುರೆ ಪ್ರಾಣ ಬಿಡುವ ಸ್ಥಿತಿಯಲ್ಲಿತ್ತು, ಅದು ಒಂದು ಗಂಟೆಯನ್ನೆಳೆಯಿತು, ರಾಜ ಬಂದು ನೋಡಿದ, ಬಡಕಲು ಕುದುರೆಯೊಂದು ಮೇವಿಲ್ಲದೆ ಪ್ರಾಣ ಬಿಡುವ ಸ್ಥಿತಿಯಲ್ಲಿದ್ದುದನ್ನು ನೋಡಿ ಅದಕ್ಕೆ ಮೇವು ಹಾಕಿಸಿ ಅದು ಬದುಕಿರುವವರೆಗೂ ಮೇವು ಹಾಕಿಸಿ ಸಾಕಿದ. ಹಿಂದೆ ಆ ರೀತಿ ನ್ಯಾಯ ದೊರಕುತ್ತಿತ್ತು. ಅದೇ ಈಗ ಆಡಳಿತ ನಡೆಸುವವರು 4 ರೂಪಾಯಿಗಳಿಂದ ಹಿಡಿದು 4,000 ರೂಪಾಯಿಗಳವರೆಗೂ ಲಂಚ ತೆಗೆದುಕೊಳ್ಳುತ್ತಿದ್ದಾರೆ.

ನಾಲ್ಕಾಣೆಯಿಂದ ಹಿಡಿದು 40 ಸಾವಿರ ರೂಪಾಯಿಗಳವರೆಗೂ ಲಂಚದ ಮಾಯೆ, ಲಂಚಾವತಾರ, ಇದು ಎಲ್ಲಾ ವರ್ಗದಲ್ಲೂ ನಡೆದಿದೆ. ಇವತ್ತು ಹೇಳುತ್ತಾ ಇದ್ದೇನೆ, ಅವರ ಆಡಳಿತ ಯಾವ ಮಟ್ಟದಲ್ಲಿದೆ ಎಂದರೆ, ಇದು ಒಂದು ಲಂಚಾವತಾರದ ಸರ್ಕಾರವಾಗಿದೆ, ಲಂಚಾವತಾರವಾಗಿದೆ, ಯಾವ ಆಫೀಸಿನಲ್ಲಿ ಹೋಗಲಿ ಲಂಚವಿಲ್ಲದೇ ಕೆಲಸವಾಗುವುದಿಲ್ಲ, ಕೆಲವು ಜನ ಮಂತ್ರಿಗಳೂ ಕೂಡ ಅವರ ಕೆಲಸವಾಗಬೇಕಾದರೆ ಲಂಚ ಕೊಡುತ್ತಾರೆಯೋ ಏನೋ ಗೊತ್ತಿಲ್ಲ. ಸ್ವಾಮಿ, ಈ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಜನರಿಗೆ ನ್ಯಾಯ ನೀಡಬೇಕೆಂದಿದ್ದರೆ ಈ ರೀತಿಯ ಲಂಚಮಯವಾದರೆ ಜನರಿಗೆ ಹೇಗೆ ನ್ಯಾಯ ದೊರಕುತ್ತದೆ ? ಹೇಗೆ ಅನುಕೂಲವಾಗುತ್ತದೆ ? ಹತ್ತು ಜನರ ಮೇಲೆ ಇರತಕ್ಕವನ ಸೀನಿಯಾರಿಟಿಯನ್ನು ತುಳಿದು ಯಾವನೋ ಕೊನೆಯಲ್ಲಿರತಕ್ಕ ಹನ್ನೊಂದನೆಯವನಿಗೆ ಅವನು ತಮಗೆ ಬೇಕಾದವನು ಎಂದು ಪ್ರಮೋಷನ್ ಕೊಟ್ಟುಕೊಳ್ಳುತ್ತೀರಿ. ಮೈಸೂರಿನಲ್ಲಿರುವವನನ್ನು ಗುಲ್ಬರ್ಗಾಕ್ಕೆ ವರ್ಗಾಮಾಡುತ್ತೀರಿ, ಗುಲ್ಬರ್ಗಾದಲ್ಲಿರುವವನು ಸಿಕಂದರಾಬಾದಿಗೆ ವರ್ಗಾ ಮಾಡುತ್ತೀರಿ, ಇದು ಏನಾಗಿದೆ ಎಂದರೆ ಆಡಳಿತದಲ್ಲಿ ತಾರತಮ್ಯ ಇಲ್ಲ, ಸಣ್ಣ ಗುಮಾಸ್ತನಿಂದ ಹಿಡಿದು, ಮೇಲ್ಮಟ್ಟದ ಅಧಿಕಾರಿಗಳು, ಐ.ಎ.ಎಸ್. ಅಧಿಕಾರಿಗಳು, ಮಂತ್ರಿಗಳು ಎಲ್ಲರೂ ಒಂದೇ ಆಗಿದ್ದಾರೆ. ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂದು ಅನ್ನುವ ಹಾಗೆ ತೀರ ಸಾಮಾನ್ಯ ಮನುಷ್ಯ ಬಡ ನೌಕರನ ಸ್ಥಿತಿ ಏನಾಗಿದೆ ಎಂದರೆ ಅವನು ಬಹಳ ಕಷ್ಟದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಬಂದಿದೆ, ಅವನ ಕೈಯಿಂದ ಕೆಲಸ ತೆಗೆದುಕೊಳ್ಳಬೇಕು, ಆಡಳಿತ ಸುಭದ್ರವಾಗಿರಬೇಕೆಂದರೆ ಅವನಿಗೆ ಸಂಬಳ ಜಾಸ್ತಿ ಮಾಡಿ ಎಂದರೆ ಸಂಬಳ ಜಾಸ್ತಿ ಮಾಡುವುದಿಲ್ಲ. ಪೋಲೀಸ್‌ನವರನ್ನು ಬಿಟ್ಟು ಲಾಠಿಚಾರ್ಜ್ ಮಾಡಿಸುತ್ತೀರಿ. ಸಂಬಳ ಜಾಸ್ತಿ ಮಾಡಿ ಎಂದು ಸ್ಟ್ರೈಕ್ ಮಾಡಿದರು, 3 ದಿವಸ ರಜ ಹಾಕಿದರು ಎಂದು ಹೇಳಿ ಅವರಿಗೆ ಸಂಬಳ ಕೊಡುವುದಿಲ್ಲ ಎನ್ನುತ್ತೀರಿ, ಸೀನಿಯಾರಿಟಿ ಕಟ್ ಮಾಡುತ್ತೇವೆ ಎಂದು ಅನ್ನುತ್ತೀರಿ. ನಿಮ್ಮ ಮೇಲೆ ನಿಮ್ಮ ನೌಕರರಿಗೆ ಎಷ್ಟು ಗೌರವ ಎಷ್ಟು ಸೌಜನ್ಯತೆ ಸಿಕ್ಕುತ್ತದೆ ಎಂಬುದನ್ನು ನೀವೇ ಅರ್ಥಮಾಡಿಕೊಳ್ಳಿ. ಇವತ್ತಿನ ದಿವಸ ಹೇಳುತ್ತೇನೆ, ನಿಮ್ಮಲ್ಲಿ ಎಲ್ಲಾ ರೀತಿಯಲ್ಲಿ ಅಕ್ರಮ, ಅನ್ಯಾಯ ನಡೆದಿದೆ. ಆ ರೀತಿ ಏನೂ ನಡೆದಿಲ್ಲ ಎಂದು ನೀವು ಹೇಳುವುದಾದರೆ ನಿಮ್ಮ ಆಡಳಿತದ ಬಗ್ಗೆ ಒಂದು ರೀತಿಯಾದ ಸತ್ಯಾಂಶವನ್ನು ಹೊರಪಡಿಸುವುದಕ್ಕೋಸ್ಕರ ಒಂದು ಜ್ಯುಡೀಷಿಯಲ್ ಎನ್‌ಕ್ವೈರಿ ಮಾಡಿ ನಿಮ್ಮ ಆಡಳಿತ ಚೆನ್ನಾಗಿದೆ, ಬಹಳ ದಕ್ಷತೆಯಿಂದ ನಡೆಸಿದ್ದೇವೆ, ಯಾವ ಮೂಲೆಯಲ್ಲೂ ಏನೇನೂ ಅನ್ಯಾಯವಾಗಿಲ್ಲ ಲಂಚರುಷುವತ್ತು ಆಗಿಲ್ಲ ಎಂಬುದನ್ನು ಧೃಡಪಡಿಸಿ. ನಮ್ಮ ಅಧಿಕಾರದಲ್ಲಿ ಯಾವ ವಿಧವಾದ ಅನ್ಯಾಯವಾಗಲಿ ಆಗಿಲ್ಲ, ನಮ್ಮದು ಧರ್ಮರಾಯನ ರಾಜ್ಯ, ಹರಿಶ್ಚಂದ್ರನ ರಾಜ್ಯ ಅಂತ ಹೇಳಿ ಧೃಡಪಡಿಸಲು ಒಂದು ಜ್ಯುಡೀಷಿಯಲ್ ಎನ್‌ಕ್ವೈರಿ ಮಾಡಿ, ಇಲ್ಲದೇ ಇದ್ದರೆ ನಮ್ಮದು ರಾವಣನ ರಾಜ್ಯ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೇ ಹೇಳುತ್ತೇನೆ ನಿಮ್ಮಲ್ಲಿ ಒಂದು ನಿಷ್ಠೆ ಇರಬೇಕು, ನಿಮ್ಮಲ್ಲಿರತಕ್ಕ ಜನಗಳಿಗೆ ಈಗಾಗಲೇ ನಿಮ್ಮಲ್ಲಿ ನಂಬಿಕೆ ಇಲ್ಲ, ನಿಮ್ಮಲ್ಲಿರತಕ್ಕ ಈ ಸಭೆಯ ಸದಸ್ಯರಿಗೆ ನಿಮ್ಮಲ್ಲಿ ನಂಬಿಕೆ ಇಲ್ಲ. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಸ್ವಾಮಿಯವರು ಮೊನ್ನೆ ದಿವಸ ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ರೀತಿ ನಿಮ್ಮ ಪಾರ್ಟಿಯಲ್ಲಿ 3-4 ಜನ ಇದ್ದಾರೆ, ನಿಮ್ಮ ದುರ್ವ್ಯವಹಾರ, ಭ್ರಷ್ಟಾಚಾರ ಹೊರಪಡಿಸುವುದಕ್ಕೆ ಸಿದ್ಧವಾಗಿದ್ದಾರೆ. ಅಂತಹವರು ಇನ್ನೂ 25 ಜನ ನಮ್ಮ ಕಡೆಗೆ ಬನ್ನಿ, ನಾವು ಸರ್ಕಾರ ರಚನೆ ಮಾಡೋಣ, ನಿಮಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿ ಘಂಟಾಘೋಷವಾಗಿ ಈ ಸಭೆಯಲ್ಲಿ ನಾನು ಅವರನ್ನು ಕರೆಯುತ್ತೇನೆ. ಅವರು ಧೈರ್ಯ ಮಾಡಿ ಈ ಕಡೆಗೆ ಬರಬೇಕು, ನಾವು ದಕ್ಷತೆಯಿಂದ ಆಡಳಿತವನ್ನು ನಡೆಸುತ್ತೇವೆ ಎಂದು ಹೇಳುತ್ತೇನೆ.

† ಶ್ರೀಮತಿ ಶಾರದವ್ವ ಎಂ. ಪಟ್ಟಣ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ, ರಾಮದುರ್ಗ-ಕಟಕೋಳ-ಸುರೇಬಾನ-ಮನಿಹಾಳ-ಹಲಗತ್ತಿ ಇವು ಕೈಮಗ್ಗದ ಶೀರೆ, ಖಣ, ಧೋತರಗಳ ಉತ್ಪತ್ತಿಯ ಕೇಂದ್ರವಿದ್ದು ಅಲ್ಲಿಯ ದೇವಾಂಗದ ಸಮಾಜದ ಈ ಉದ್ಯೋಗದ ಜನರಿಗೆ ಭೂಮಿಗಳೇ ಇಲ್ಲ. ಈಗಿನ ಪರಿಸ್ಥಿತಿಯಲ್ಲಿ ತುಟ್ಟಿಯ ನೂಲು, ಬಣ್ಣ, ಆಹಾರ ಧಾನ್ಯದ ಹೆಚ್ಚಳದಿಂದ ಜೀವಿಸುವುದು ಕಷ್ಟವಾಗಿದ್ದು ಸರಕಾರದವರು ಈ ಜನರಿಗೆ ಯೋಗ್ಯ ಬೆಲೆಯ ನೂಲು ಬಣ್ಣ ಒದಗಿಸಬೇಕು. ಇವರು ಉತ್ಪತ್ತಿ ಮಾಡಿದ ಮಾಲಿಗೆ ಸಬ್‌ಸಿಡಿ ಕೊಡಬೇಕು. ಇಲ್ಲವಾದಲ್ಲಿ ಗಿರಣಿ ಬಟ್ಟೆಗಳ ಕಾಂಪಿಟೀಶನ್ ಮುಂದೆ ಇವರ ಮಗ್ಗಗಳು ನಡೆಯುವುದು ಕಷ್ಟವಾಗಿ ಸಾವಿರಾರು ಜನರು ನಿರುದ್ಯೋಗಿಗಳಾಗುವರು.

ಭೂಮಿಗಳಿಲ್ಲದ ಈ ಜನರಿಗೆ ಹೊಟ್ಟೆಗೆ ತೊಂದರೆಯಾಗದಂತೆ ಜೋಳಾ ಇನ್ನಿತರ ಆಹಾರ ಧಾನ್ಯಗಳು ಸೊಸೈಟಿ ಮುಖಾಂತರ ಪೋಲಾಗದಂತೆ ದಕ್ಷತೆ ವಹಿಸಿ ಯೋಗ್ಯ ಬೆಲೆಗೆ ಹಂಚಿಕೆ ಯಾಗುವಂತೆ ಆಜ್ಞೆ ಮಾಡಬೇಕು.

(ಶ್ರೀಮತಿ ಶಾರದವ್ವ ಎಂ. ಪಟ್ಟಣ)

ನಮ್ಮ ತಾಲ್ಲೂಕಿನಲ್ಲಿ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುವ ಬಟಕುರ್ಕಿ-ಆನೆಗುದಿ-ಭಾಗದಲ್ಲಿ ಚಿಕ್ಕ ನೀರಾವರಿ ಯೋಜನೆ ಕೈಗೊಳ್ಳುವದು ಅಗತ್ಯವಿದೆ. ಈ ವಳಗಾಗಿ ಸರಕಾರದವರು ಈ ಭಾಗದಲ್ಲಿ—ರಾಜನಾಳ-ಆನೆಗುದಿ ಟ್ಯಾಂಕ್ ಕಟ್ಟುವ ಯೋಜನೆಯು ಎಸ್ಟಿಮೇಟ್ ಮಾಡಿದ್ದು ತೀವ್ರ ಈ ಯರಡೂ ಕೆಲಸಗಳನ್ನು ಕಾರ್ಯಗತ ಮಾಡಿ ಆ ಭಾಗದ ಬರಗಾಲ ಸಮಸ್ಯೆಯನ್ನು ಪರಿಹರಿಸಬೇಕು.

ನಮ್ಮ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳಲ್ಲಾದ 10-20 ಲಕ್ಷ ರೂಪಾಯಿಗಳ ರಸ್ತೆಗಳೆಲ್ಲ ದುರಸ್ತಿ ಆಗದೆ ವಾಹನಗಳು ಓಡಾಡದಂತಾಗಿವೆ. ಅವುಗಳನ್ನು ದುರಸ್ತಿಪಡಿಸಬೇಕು.

ಕೊಳಚೆ-ವೇ ಅರ್ ಕಾಲುವೆಯು ಜವಳು ನೀರಿನಿಂದ ಶಿವಪೇಟೆ ಇಡೀ ಗ್ರಾಮವೇ ನಾಶವಾಗಿದ್ದು ಅಲ್ಲಿಯ ಬಡಜನರ ಗೋಳನ್ನು ತಪ್ಪಿಸಲು ಸರಕಾರವು ಸಾಧ್ಯವಿದ್ದಷ್ಟು ತೀವ್ರ ಹೊಸ ಗ್ರಾಮ ನಿರ್ಮಿಸುವ ಕ್ರಮ ಕೈಕೊಳ್ಳುವದು ಅಗತ್ಯವೆಂದು ತಿಳಿಸುತ್ತೇನೆ.

ಕೊಳಚಿ-ವೇ ಆರ್ ಕಾಲುವೆಯು ಹಾಯ್ದು ಹೊಲಗಳಲ್ಲಿಯ ಸಂಗಳ ಗ್ರಾಮದ ರೈತರಿಗೆ ಕಾಲುವೆಯಿಂದ ನಷ್ಟವಾದ ಭೂಮಿಯು ಪರಿಹಾರ ಇನ್ನೂವರೆಗೂ ಕೊಡದೇ ಇರಲು ಕಾರಣವೇನು ? ಅಂಥ ಇನ್ನೂ ಕೆಲವು ಹಳ್ಳಿಯ ಜನರಿಗೂ ಕೊಡತಕ್ಕ ಪರಹಾರ ತೀವ್ರ ಕೊಡಬೇಕೆಂದು ಸೂಚಿಸುತ್ತೇನೆ.

ಗೊಣ್ಣಾಗರ ಗ್ರಾಮವು ಮಲಪ್ರಭಾ ಹೊಳೆಯ ಮಹಾಪೂರದಿಂದ ಕೊಚ್ಚಿ ಹೋಗುವ ಪರಿಸ್ಥಿತಿಯಲ್ಲಿ ಇದ್ದದ್ದರಿಂದ ಸರಕಾರದವರು ಈಗಾಗಲೆ ಸದರೀ ಗ್ರಾಮವನ್ನು ಹೊಸದಾಗಿ ನಿರ್ಮಿಸಲು ಭೂಮಿಗಳನ್ನು ಸುದ್ದಾ ಕೊಂಡು ಪ್ಲಾಟುಗಳನ್ನು ಮಾಡಿದ್ದು ಕೆಲವು ಪ್ಲಾಟುಗಳ ಹಣಾ ತುಂಬಿದ್ದು ಕೆಲವು ಬಡ ರೈತರು ಹಣ ತುಂಬದೇ ಆಗದ್ದಕ್ಕೆ ಇಡೀ ಗ್ರಾಮದ ಜನರಿಗೆ ಸರಕಾರದವರು ಇನ್ನೂವರೆಗೂ ಪ್ಲಾಟುಗಳನ್ನು ಅವರವರ ಸ್ವಾಧೀನ ಕೊಡದೇ ಇದ್ದದ್ದು ಸರಕಾರದ ಲಕ್ಷಕ್ಕೆ ಬಂದಿಲ್ಲವೇ ? ತೀವ್ರ ಮಹಾಪೂರಿನ ವಿಪತ್ತಿಗೆ ಗುರಿಯಾಗುವ ಮುಂಚಿತ ಅಲ್ಲಿಯ ರೈತರನ್ನು ಪ್ಲಾಟುಕೊಟ್ಟು ಹಳೆ ಊರಿನಿಂದ ಹೊರಗೆ ಹಾಕುವುದು ಉಚಿತವೆಂದು ತಿಳಿಯಪಡಿಸುತ್ತೇನೆ.

ಈ ಸಭೆಯಲ್ಲಿ ನನಗೆ ನಾಲ್ಕು ಮಾತುಗಳನ್ನಾಡಲು ಸಮಯ ಒದಗಿಸಿ ಕೊಟ್ಟದ್ದಕ್ಕಾಗಿ ತಮಗೆ ತುಂಬಾ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Smt. WINNIFRED F. FERNANDES (Coondapur).—Hon'ble Speaker, Sir, speaking on Agriculture, at the outset I should like to say that foremost attention should be given to agriculture. Of course, in the Fourth Plan, the Government has assured that top priority will be given to agriculture. I just inform the Chief Minister that such assurances should not be only in speeches or paper or books, but it should be done in action. I also request the Hon'ble members of this House to take keen interest to produce more foodgrains in their constituencies and see that more land is brought under cultivation so that we can solve the food problem to a great extent. In the rural areas there are thousands of acres of Government waste lands where there is only wild growth. Some such land should be given to the cultivators at the rate of four or five acres each either for cultivation or for horticulture. If there are wet lands, cultivation can be done and on dry land horticulture can be done. I also suggest that non-cultivable private lands should be acquired by the Government for Government buildings or any other such purposes. In my own constituency there is a private cultivable land, and I understand that the Telephone Exchange wants to acquire it to build some quarters. Of course, Government have framed rules and have said that no cultivable land should be taken by anybody for

buildings or for private use or by the Government for other purposes. But, in this case, I believe the Government itself is breaking the rules as they have agreed to give this land to the Telephone Exchange and all formalities and procedures have been completed. The owner of this private land has represented to the Revenue Minister. I hope the Revenue Minister will look into this matter and see that this land will not be acquired.

I request the Chief Minister to give some Bulldozers, Tractors and Power Tillers to the Districts so that the wild growth on Government lands can be cleared, and the land levelled. I have requested the Chief Minister to spare Bulldozers and Power Tillers to our District on hire basis. I hope he will give his attention to it. Regarding supply of fertilizers, seeds and pumpsets, the poor people generally do not derive any benefit. Regarding the pumpsets, there are many instances where ryots have installed pumpsets and the electricity is not supplied and they are put to lot of inconveniences. Lame excuses are given by the Departmental people. They say there is shortage of wires, poles, etc. Many people have applied for pumpsets on loan basis. The applications have to pass through so many people. The ryot has to approach the Shanbhogue, Patel and he has to approach so many officers concerned. He has to spend a lot to observe all these formalities and procedures. He has to pay something to the clerk and get the work done, otherwise his application will go to waste paper basket. Rules and formalities have been observed in the case of poor people only. I am sorry to say this. The officers say it will be done according to the priority list. It is very necessary to supply as many pumpsets as required in South Kanara, because it will be helpful for so many rural villages to grow more. The water will be available in plenty and that should be made use of for this purpose. Therefore, if you supply the required number of pumpsets, of course the food problem could be solved to a great extent within two or three years. Regarding the supply of fertilizers and seeds, the same old story repeats. There are Co-operative Marketing Societies to deal with it. If a poor man applies for fertilizers and seeds, he will simply be ignored and he will be told the materials are out of stock. If a well-to-do or influential person goes, he will be decently enquired into and will be given whatever he wants. Even if he wants 4 Kgs. of fertilizers, he will be served immediately. Why this kind of discrimination is there I cannot understand. The Government should kindly look into and see that all are treated equally and the required quantity of fertilizers and seeds are supplied. They simply say that no distinction is made. But practically the distinction exists. Such things should go. There are many instances where loans have not been sanctioned by Taluk Land Development Bank. There will be no response if anybody applies for loan. A lady friend of mine who is an agriculturist had applied for a loan on 26th March 67 for constructing an irrigation tank. Her application is not found and no action is taken. Such is the state of affairs that is existing. My constituency is a coastal belt area During the monsoon period,

(SMT. WINNIFRED F. FERNANDES)

when the full tide is there, the salt water gets into the field and most of the crops will be destroyed. If salt water exclusion dam is constructed, the salt water may not get in and destroy the crops. Therefore, these essential dams may be constructed to protect the crops.

Then rural communications: In most of the rural belt villages there are no proper roads at all. The villagers have to take their produce to the nearby market. They are finding it very difficult to transport their produce because of the absence of proper roads. Therefore rural communications should be taken up at an early date. I ask the Minister concerned to attend to it immediately. In my constituency where fishermen have inhabited mostly, I am sorry to say that no facilities are given to these fishermen so far. There are about 6 to 7 thousand fishermen. They ought to have been given all the facilities. But facilities given are very meagre. So far two or three mechanised boats have been given to them. Some of them have applied for housing grants. But no housing grants and no subsidy are given to them. The Hon'ble Minister concerned will kindly see that these facilities are given. There are two fishery roads. *i.e.*, Hanglukodi Road and Gopadi-Bijadi Road in Coondapur. About 4 or 5 years back these roads have been granted and they are incomplete. Black top has not been put. It is impossible for a pedestrian to go on these roads. If you travel on these roads, you will understand how the road is and what is the difficulty. Heaps of granite are dumped there and even pedestrians cannot walk. It is impossible for vehicles to move about. I ask the Minister to look into it and see that the roads are repaired immediately because the monsoon ends now. Then some culverts and two bridges have to be constructed. There are two wooden bridges and they are rickety. The fishermen are finding it difficult to cross these wooden bridges with their head loads. I think estimates have been prepared and sent for sanction. Therefore, the concerned Minister will kindly see that the work is taken up and completed. Then about water supply, I want to speak a few words. The coastal area is a very backward area. The filaria is prevailing and is spreading day by day. Water supply schemes to some of the villages and towns are pending to be executed. Investigation has been done and estimates have been prepared for water supply to Coondapur. I am urging as Chairman of the Coondapur Municipality for execution of this work since last 3 years. I ask the Minister concerned to look into it and see that water supply is sanctioned at an early date. About foodgrains I want to say one or two words. The Food Minister is not here. The Chief Minister is here. Fair Price shops will have to be opened. The people are not getting wheat and milo in South Kanara. 150 grams of sugar is being given to an adult per month. It is not sufficient for anything. It is better to stop not giving sugar at all. Of course there is shortage of sugar. At least 500 grams per head per month will have to be given. 5 Kgs of wheat and milo should be given. There are 6 to 7

tile factories there. These Factories will be closed during the rainy season and there will be no work at all. The workers have no work and the fishermen do not go to their fishing. Therefore, I ask the Minister concerned to consider the plight of these poor people and see that uniform distribution of food grains is made.

[MR. DEPUTY SPEAKER in the Chair]

Then the last of it, it is a well-known fact that no paper moves in the Government offices unless you talk with the Government officer or the concerned clerks. The old age pension papers are tossed from office to office and some times get lost in the bargain. I know two or three instances personally because they had come to me for certificate. They were coming again and again saying that the applications are not to be seen. Just imagine how these old poor people aged 75 should manage ? How can they go from office to office and push their papers ? If the Government really wants to help them, they must make arrangements to dispose of these applications within at least two months after the receipt of the applications. Those elderly people do deserve your kindness.

6-00 P.M.

The N.G.Os. also deserve some small mercy from the Government to treat the three days of absence in January as special leave and to withdraw the prosecutions which are pending against the President and two others. They are after all part and parcel of the Government. They are the members and you are the head of the family—All of them are minor members of that family. Every golden rule has an exception and I request you to make an exception in this case and you will have earned their good-will and co-operation in one stroke. I do hope that the Chief Minister will consider this case very sympathetically.

It is high time that elections to local bodies, should be made whether they are panchayets or local boards. Elections are very much delayed and all the local bodies are lifeless. General elections have taken place and there is no excuse for saying that it is postponted on account of emergency. These elections must take place very soon. Emergency or no emergency, these elections must take place.

Regarding stamp papers and court-fee stamps, they are not available at Coondapur or elsewhere. This has resulted in black-marketing of the available stock. In some cases people have to use higher denomination stmps if they want to file petitions or register documents. I had written to the Deputy Commissiner, South Kanara and they say we must try with the people in the upper level, that is Government. I cannot understand how long the people have to put up with this kind of difficulty. Copies of registered documents take two months and more to be delivered to the parties. This state of affairs is enough to shame anybody. And I ask the Hon'ble Minister concerned to look into this matter at once.

(SMT. WINNIFRED F. FERNANDES)

I am not a seasoned politician or a learned advocate. But I can say this much: people do not understand your five-year plans or any other schemes of a complicated nature. What the masses understand is how they can live from day to day; how they get treatment when they fall sick, whether their sons and daughters have proper schools for education and after that, whether they get proper employment to enable them to earn their living.

I thank the Chair for giving me this opportunity.

Sri D. M. SIDDAIYA.—Before we proceed further, I propose that the House may sit till 7 o'clock today. I further request that the time restriction may be enforced strictly.

Mr. DEPUTY SPEAKER.—Yes.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ ಸಾಮಾನ್ಯ ಆಡಳಿತ, ವ್ಯವಸಾಯ ಹಾಗೂ ಕೈಗಾರಿಕೆ ಬೇಡಿಕೆಗಳಿಗೆ ನಾನು ಅನುಮೋದನೆ ನೀಡುತ್ತಾ ಕೆಲವು ಸೂಚನೆಗಳನ್ನು ಹೇಳಬಯಸುತ್ತೇನೆ. ನಿಜವಾಗಿಯೂ ಹಳ್ಳಿಯ ಜನತೆಗೆ ಉಪಯೋಗವಾದಂಥ ಯಾವುದಾದರೂ ಖಾತೆ ಇದೆಯೇ ಅಂದರೆ ಅದು ಒಕ್ಕಲುತನ ಖಾತೆ. ಇದರಿಂದೊಂದರಿಂದಲೇ ಜನಗಳಿಗೆ ಸಾಕಷ್ಟು ಪರಿಹಾರ ದೊರಕುತ್ತದೆ. ಹಿಂದೆ ಈ ದೇಶದಲ್ಲಿ ಒಕ್ಕಲುತನಕ್ಕೆ ವಿಶೇಷ ಪ್ರೋತ್ಸಾಹವಿತ್ತು. ಇಂದಿನ ಪರಿಸ್ಥಿತಿಯಲ್ಲಿ ಇದಕ್ಕೆ ವಿಶೇಷ ಮಹತ್ವವಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಮಹಾ ಖಾತೆಯನ್ನು ತಮ್ಮ ಕಡೆ ಇಟ್ಟುಕೊಂಡು ದೇಶದ ಜನತೆಗೆ ಹೆಚ್ಚಿನ ಉಪಕಾರವನ್ನು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ. ಏಕೆಂದರೆ ಈ ಖಾತೆಯಲ್ಲಿ ವಿಶೇಷವಾಗಿ ಲಕ್ಷ್ಯ ಕೊಡಬೇಕಾದುದು ಹಾಗೂ ಪೂರೈಸಬೇಕಾದುದು ಬಹಳ ಇದೆ. ಈ ವರ್ಷದಲ್ಲಿ 9 ಕೋಟಿ ರೂಪಾಯಿಗಳನ್ನು ಒಕ್ಕಲುತನಕ್ಕಾಗಿ ಸೇರಿಸಿರುವುದು ಅಭಿನಂದನೀಯ ವಾಗಿದೆ. ಇಂತಹ ಒಂದು ಉಪಯುಕ್ತ ಖಾತೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಉತ್ತಮ ರೀತಿಯಲ್ಲಿ ಜನರಿಗೆ ಸಹಾಯವಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳುವರೆಂದು ನಾನು ತಿಳಿಯುತ್ತೇನೆ. ಈಗ ನಿಜವಾಗಿ ಜನರಿಗೆ ಒಕ್ಕಲುತನದಿಂದ ಸಾಕಷ್ಟು ಉಪಯೋಗವಾಗುತ್ತಿದ್ದರೂ ಅದು ಸಾಕಷ್ಟು ಉಪಯೋಗವಾಗದಿರುವ ರೀತಿಯಲ್ಲಿದೆ. ಅದಕ್ಕೆ ಬೇಕಾಗುವಂತಹ ಕೆಲವು ಕಾರ್ಯಕ್ರಮಗಳನ್ನು ಕೂಡಲೇ ಹಾಕಿಕೊಳ್ಳಬೇಕು. ಆ ಕಡೆಗೆ ವಿಶೇಷವಾಗಿ ಲಕ್ಷ್ಯ ಪೂರೈಸಿದರೆ ಈ ಖಾತೆಯಲ್ಲಿ ಸಾಕಷ್ಟು ಸುಧಾರಣೆಯಾಗುತ್ತದೆಂದು ನನಗನ್ನಿಸುತ್ತದೆ. ಏಕೆಂದರೆ, ಈಗ ರೈತರು ಅನೇಕ ಹೊಸ ಹೊಸ ಪ್ರಯೋಗಗಳನ್ನು ಕೈಗೊಳ್ಳಲು ತಯಾರಿದ್ದಾರೆ. ಆದರೆ ಸರ್ಕಾರದಿಂದ ಅವಕ್ಕೆ ತಕ್ಕಂತೆ ಅವರಿಗೆ ಸಹಾಯ, ಸೌಲಭ್ಯ ಮತ್ತು ಇತರೇ ಉಪಯುಕ್ತ ಸೂಚನೆಗಳು ಕಾಲಕ್ಕೆ ಸರಿಯಾಗಿ ದೊರೆಯುವೇ ಇರುವುದು ಒಂದು ವಿಶೇಷ ಆತಂಕವಾಗಿದೆಯೆಂದು ಹೇಳಬಹುದು. ಇನ್ನು ಈ ದೇಶದಲ್ಲಿ ಹೈಬ್ರಿಡ್ ಜೋಳ, ಮುಂತಾದ ಇತರೇ ವಿಧವಾದ ಜೋಳಗಳನ್ನು ಬೆಳೆಸಲು ವಿಶೇಷವಾಗಿ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರಿಂದ ವಿಧವಿಧವಾದ ಬೀಜಗಳನ್ನು ಇಲ್ಲಿಗೆ ಪೂರೈಸಲು ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಅವರು ಇಲ್ಲಿರತಕ್ಕ ರೈತರು ಅವನ್ನು ಯಾವ ರೀತಿಯಲ್ಲಿ ಉಪಯೋಗಿಸಿ ಪೂರೈಸಬೇಕು ಎಂಬ ಬಗ್ಗೆ ಉಪಯುಕ್ತವಾದ ರೀತಿಯಲ್ಲಿ ಸಹಾಯ ಮತ್ತು ಸಲಹೆಗಳನ್ನು ಕೊಡುವುದನ್ನು ನೋಡಿದರೆ ನನಗೆ ಬಹಳ ದುಃಖ ವಾಗುತ್ತದೆ. ಏಕೆಂದರೆ ಅವರು ಕೇವಲ ಒಂದೆರಡು ಸಾರಿ ಮಾತ್ರ ಬಂದು ಈ ಪ್ರಕಾರ ಬೀಜ ಬಿತ್ತಿ, ಈ ಪ್ರಕಾರ ಗೊಬ್ಬರ ಹಾಕಿ, ಈ ಪ್ರಕಾರ ಮಾಡಿದರೆ ಬೆಳೆ ಚೆನ್ನಾಗಿ ಬರುತ್ತದೆಂಬುದಾಗಿ ಉಪದೇಶ ಮಾಡಿ ಹೋಗುತ್ತಾರೆ. ಅದು ಏನೇನೂ ಸಾಲದು. ಅದಕ್ಕಾಗಿ ಇವರಿಗೆ ವಿಶೇಷವಾಗಿ ಸಿಬ್ಬಂದಿ ಬೇಕೆಂದು ನನಗನ್ನಿಸುತ್ತದೆ. ಈ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ಇಲ್ಲಿಗೆ ಪೀಕ್ ಬರುವ ಹೊತ್ತಿಗೆ ಕೇವಲ ಒಂದೆರಡು ಸಾರಿ ಮಾತ್ರ ಬರುತ್ತಾರೆ. ಅದರಿಂದ ವಿಶೇಷವಾಗಿ ರೈತರಿಗೆ ಫಾಯಿದೆ ಆಗುವುದಿಲ್ಲ. ಈ ಸಂದರ್ಭದಲ್ಲಿ ನನ್ನ ಒಂದು ಉದಾಹರಣೆಯನ್ನು ಹೇಳುವುದಾದರೆ, ನಾನೇ ಹಿಂದಿನ ವರ್ಷ ಆಗಸ್ಟ್‌ನಲ್ಲಿ 4 ಎಕರೆ ಜಮೀನಿನಲ್ಲಿ ಆ ಕಾರ್ಪೊರೇಷನ್ನಿನವರೇ ಕೊಟ್ಟಂಥ ಹಾಯ್‌ಬ್ರಿಡ್ ಫೌಂಡೇಶನ್ ಗೋವಿನ ಜೋಳವನ್ನು ಅದು ಮಾರ್ಕೆಟ್ಟಿಗೆ

ಬಂದಿದ್ದರಿಂದ ಅದನ್ನು ತಂದು ಬಿತ್ತಿದೆ. 8-10 ಕಡೆಗಳಲ್ಲಿ ಹಾಕಿದ್ದೆ. ಅದಕ್ಕಾಗಿ ಪ್ರಪ್ರಥಮವಾಗಿ ಸುಮಾರು 2 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ. ಗೊಬ್ಬರ ಸಾಕಷ್ಟು ಹಾಕಿದೆ. ಸಲ್ಫೇಟು ಹಾಕಿದೆ, ಸೂಪರ್ ಫಾಸ್ಫೇಟ್ ಹಾಕಿದೆ. ಭೂಮಿ ಹದ ಮಾಡಿದ್ದಾಯಿತು, ನೀರು ಹಾಕಿದ್ದಾಯಿತು. ಆದರೆ ಏನೂ ಫಲಕಾರಿಯಾಗಲಿಲ್ಲ. ಅಷ್ಟು ಹೊತ್ತಿಗೆ ಬೀಜ ಹಾಕಿ 8-10 ದಿವಸಗಳ ಮೇಲೆ ನನಗೆ ಒಂದು ಪತ್ರ ಆ ಕಾರ್ಪೊರೇಷನ್ನಿನಿಂದ ಬಂತು. ನಿಮಗೆ ಕೊಟ್ಟಿದ್ದಂಥ ಬೀಜಗಳನ್ನು ಹಿಂದಕ್ಕೆ ಕಳುಹಿಸಿ ಕೊಡಿ ಎಂದು. ಹೀಗಾದರೆ ಏನು ಪ್ರಯೋಜನ? ಅವರು ಮೊದಲೇ ನಮಗೆ ಸರಿಯಾಗಿ ಆದೇಶ ಕೊಡದೇ ಹೋದರೆ ಮುಂದೆ ರೈತರಿಗೆ ಎಷ್ಟು ಹಾನಿ ಮತ್ತು ತೊಂದರೆಯಾಗುತ್ತದೆ. ಅವನ್ನು ಪೂರ್ಣ ವಿಚಾರ ಮಾಡಬೇಕು. ಇಂತಹ ಮಹತ್ವದ ಬೀಜಗಳನ್ನು ರೈತರಿಗೆ ಕೊಡುವಾಗ ಅವನ್ನು ಚೆನ್ನಾಗಿ ಪರೀಕ್ಷೆ ಮಾಡಿ ಸರಿಯಾಗಿ ಹಂಚುವ ಕಾರ್ಯ ಒಕ್ಕಲುತನ ಖಾತೆಯಲ್ಲಿ ಬಹಳ ಮುಖ್ಯವಾದುದಾಗಿದೆ. ಜಿಲ್ಲೆಯ ಡೆಪ್ಯುಟಿ ಡೈರೆಕ್ಟರ್ ಇರುತ್ತಾರೆ. ಅವರು ಇದನ್ನು ಗಮನಿಸಬೇಕು. ನಮ್ಮ ಬೆಳಗಾಂ ಜಿಲ್ಲೆಯೊಳಗೆ ನೂರಾರು ಜನರಿಗೆ ಇದೇ ರೀತಿಯಾಗಿ ನಷ್ಟವಾಯಿತು. ಪೀಕ್‌ಗೆ ಬಂದ ಸಮಯದಲ್ಲಿ ಮೊನ್ನೆ ಸುಮಾರು 2 ತಿಂಗಳುಗಳ ತನಕ ಜನ ಬೀಜಕ್ಕಾಗಿ ಕಾಯಬೇಕಾಯಿತು. ಇಂತಹ ಪರಿಸ್ಥಿತಿ ಬಾರದ ಹಾಗೆ ವ್ಯವಸಾಯ ಖಾತೆ ನೋಡಿಕೊಳ್ಳಬೇಕು. ಇನ್ನು ಮುಂದೆ ಹೈಬ್ರಿಡ್ ಜೋಳದ ಬೀಜಗಳನ್ನು ಕೊಡುವಾಗ ಸಾಕಷ್ಟು ಅವನ್ನು ಪರೀಕ್ಷಿಸಿ ಅವು ಸರಿಯಾದ ಸ್ಥಿತಿಯಲ್ಲಿವೆ ಎಂಬುದನ್ನು ಮನಗಂಡು ರೈತರಿಗೆ ಕೊಡಬೇಕು. ಎಲ್ಲಿ ನೀರು ಇದೆಯೋ ಅಲ್ಲಿ ಅದರಿಂದ ಪ್ರಯೋಜನವಾಗಬೇಕು. ಎಲ್ಲಿ ಉತ್ತಮ ರೈತನಾದವನು ಇದ್ದಾನೋ ಅವನಿಗೆ ಎಲ್ಲಾ ತರಹ ಸಬ್ಸಿಡಿ, ಪ್ರೋತ್ಸಾಹಗಳನ್ನು ಒದಗಿಸಬೇಕು. ಟಿ.ಡಿ.ಬಿ. ಮುಖಾಂತರ ರೈತರಿಗೆ ಸಕಾಲದಲ್ಲಿ ಈ ಬೀಜಗಳನ್ನು ಸರಬರಾಯಿ ಮಾಡಬೇಕು. ಅಲ್ಲಿರತಕ್ಕ ಎಸೆನ್ಷಿಯಲ್ ಆಫೀಸರ್ ಆಗಿರತಕ್ಕ ಬಿ.ಡಿ.ಓ. ಏನಿದ್ದಾರೆ ಅವರು ಅಷ್ಟಾಗಿ ಈ ಕಡೆಗೆ ಲಕ್ಷ್ಯ ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ.

ಈ ಪ್ರಕಾರ ಆ ಬೆಳೆ ಹೋಯಿತು, ಅದು ಹುಟ್ಟಲೇ ಇಲ್ಲ. ಇದನ್ನು ತಿಳಿದು ಬೆಳಗಾಂ ಜಿಲ್ಲೆಯ ರೈತರು ಈ ಬಿತ್ತನೆ ಬೀಜವನ್ನು ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ. ಈ ವಿಚಾರವನ್ನು ನಾನು ಬಹಳ ದುಃಖದಿಂದ ತಿಳಿಸಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇತ್ತಕಡೆಗೆ ತಮ್ಮ ಲಕ್ಷ್ಯ ಕೊಡುತ್ತಿಲ್ಲ. ರೈತರಿಗೆ ಈ ಬೆಳೆಗಳ ವಿಚಾರದಲ್ಲಿ ಸಾಕಷ್ಟು ಶಿಕ್ಷಣವಿಲ್ಲ. ಹೀಗಾಗಿ ಈ ದಿವಸ ಆ ತಾಯಿ ಚುಂಗ್ ಬಿತ್ತವನ್ನು ರೈತರು, ಒಣಭೂಮಿಗೂ ಹಾಕುತ್ತಿದ್ದಾರೆ, ಹಸೀ ಭೂಮಿಗೂ ಹಾಕುತ್ತಿದ್ದಾರೆ, ಒಂದು ಕ್ರಮವರಿತು ಯಾರೂ ಇದರ ಬೇಸಾಯ ಮಾಡುತ್ತಿಲ್ಲ. ಹೀಗಾಗಿ ನಮ್ಮ ಖಾನಾಪುರ ತಾಲ್ಲೂಕಿನಲ್ಲಿ ಈ ವರ್ಷ ಸುಮಾರು 25 ಕ್ವಿಂಟಾಲ್ ಬಿತ್ತನೆ ಮಾಡಿದ್ದ ಬೆಳೆಯಲ್ಲಾ ಹಾಳಾಗಿ ಹೋಯಿತು. ಇದನ್ನು ತಿಳಿದು ಜನರು ಸರ್ಕಾರದವರು ತರಿಸಿರತಕ್ಕ ಬಿತ್ತನೆ ಬೀಜ ಒಳ್ಳೆಯದಲ್ಲ ಎಂಬ ತೀರ್ಮಾನಕ್ಕೆ ಬಂದು ಅದನ್ನು ಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲ. ಆದರೆ ನಾನೂ ಕೂಡ ಈ ಬಿತ್ತವನ್ನೇ ಬಿತ್ತನೆ ಮಾಡಿದ್ದೇನೆ. ಭೂಮಿಗೆ ಸಾಕಷ್ಟು ಗೊಬ್ಬರ, ರಾಸಾಯನಿಕ ಗೊಬ್ಬರಗಳನ್ನೂ ಹಾಕಿ, ಕೆಲವನ್ನು ಬಿತ್ತನೆ ಮಾಡಿದೆ, ಕೆಲವನ್ನು ತಾಳಕೂರಿಗೆಯಲ್ಲಿ ಬಿತ್ತನೆ ಮಾಡಿಸಿದ್ದೇನೆ, ಇನ್ನು ಕೆಲವು ಕಡೆ ನಾಟಿಯನ್ನೂ ಸಹಾ ಮಾಡಿಸಿದ್ದೇವೆ. ಆದರೆ ನನ್ನ ಹಾಗೆ ಉಳಿದ ಜನರಿಗೆ ಇದರ ವಿಚಾರದಲ್ಲಿ ಸಾಕಷ್ಟು ಪರಿಶ್ರಮವಿಲ್ಲ. ಈ ಬಿತ್ತನೆ ಬೀಜವನ್ನು ಬಿತ್ತತಕ್ಕ ವಿಚಾರದಲ್ಲಿ ಸಾಕಷ್ಟು ಪರಿಶ್ರಮವನ್ನು ತಿಳಿದುಕೊಂಡು ಜನರು ಹೆಚ್ಚು ನೀರಾವರಿ ಅನುಕೂಲಗಳಿರತಕ್ಕ ಕಡೆ ಶ್ರಮವಹಿಸಿ ಮಾಡಿದರೆ ಒಳ್ಳೆಯ ಅನುಕೂಲ ಸಿಗುತ್ತದೆ. ಕಾಲಕ್ಕೆ ಸರಿಯಾಗಿ ಪೀಕು ಬರುತ್ತದೆ. ನನಗೆ ಕಾಲಕ್ಕೆ ಸರಿಯಾಗಿ ಒಳ್ಳೆಯ ಪೀಕು ಬಂದಿದೆ. ಆದರೆ ಎಲ್ಲಾ ರೈತರು ನನ್ನ ಹಾಗೆ ಹೆಚ್ಚಿನ ಶ್ರಮವಹಿಸಿ ಕೆಲಸಮಾಡುವುದಕ್ಕೆ ಇಷ್ಟಪಡುವುದಿಲ್ಲ. ಜನರು ಈ ದಿವಸ ಹೆಚ್ಚಿನ ಶ್ರಮವಿಲ್ಲದೆ ಪೀಕು ಕೈಸೇರುವಂಥ ಆಸೆಯನ್ನು ಹೊಂದಿದ್ದಾರೆ. ಆದರೆ ಒಕ್ಕಲುತನದ ಖಾತೆ ಈ ವಿಚಾರದಲ್ಲಿ ಒಂದು ಸರಿಯಾದ ಐ. ಎ. ಪಿ. ಪ್ರೋಗ್ರಾಮನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ. ಅವರಿಗೆ ಈ ಕೆಲಸದಲ್ಲಿ ಅಷ್ಟು ಅಭಿರುಚಿ ಇದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಅವರು ರೈತರಿಗೆ ಬೇಕಾದ ಮಾಹಿತಿಗಳನ್ನು ಕೊಡುವುದಿಲ್ಲ. ಅವರಿಗೆ ಅಗತ್ಯವಾಗಿ ಬೇಕಾಗಿರತಕ್ಕ ಬಿತ್ತನೆ ಬೀಜ, ಗೊಬ್ಬರ, ಔಷಧಿ ಇತ್ಯಾದಿ ಸಾಮಾನುಗಳನ್ನು ಕಾಲಕ್ಕೆ ಸರಿಯಾಗಿ ಅವರಿಗೆ ಸಿಗುವಂತೆ ಮಾಡುತ್ತಿಲ್ಲ. ಬ್ಯಾಂಕುಗಳಲ್ಲಿ ಅವರಿಗೆ ಕಾಲಕ್ಕೆ ಸರಿಯಾಗಿ ಹಣ ದೊರೆಯುವುದಿಲ್ಲ. ಹೀಗಾಗಿ ಈ ವರ್ಷ ಖಾನಾಪುರ ತಾಲ್ಲೂಕಿನಲ್ಲಿ ಸುಮಾರು ಐವತ್ತು ಸಾವಿರ ಚಿಲ್ಲರೆ ಬೆಲೆಬಾಳತಕ್ಕ ಗೊಬ್ಬರ ಔಷಧಿಗಳು ಬೇಕಾಗಿದೆ. ಅದನ್ನು ಒದಗಿಸುವುದಕ್ಕೆ ಐ.ಎ.ಪಿ. ಪ್ರೋಗ್ರಾಂನಲ್ಲಿ ಅವಶ್ಯಕವಾದ ಏರ್ಪಾಡುಗಳನ್ನು ಇಲಾಖೆಯವರು ಕಾಲಕ್ಕೆ ಸರಿಯಾಗಿ ಮಾಡಬೇಕು. ಇವರು ಈ ಪ್ರೋಗ್ರಾ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಮನ್ನು ಜೂನ್ ಜುಲೈಗೆ ಇಟ್ಟುಕೊಳ್ಳದೆ ಅದನ್ನು ಫೆಬ್ರವರಿ ಮತ್ತು ಮಾರ್ಚ್ ತಿಂಗಳಿಂದಲೇ ಪ್ರಾರಂಭಮಾಡಿದರೆ ಅಲ್ಲಿಗೆ ಸರಿಹೋಗಬಹುದು. ಅದರೆ ಈ ದಿವಸ ಹಾಗೆ ಮಾಡುತ್ತಿಲ್ಲ. ಅದುದರಿಂದ ಈ ಐ.ಎ.ಪಿ. ಪ್ರೋಗ್ರಾಂನಲ್ಲಿ ರೈತರಿಗೆ ಬೇಕಾದ ಗೊಬ್ಬರ, ಬಿತ್ತನೆ ಬೀಜ ಮತ್ತು ಔಷಧಿಗಳನ್ನು ಇವರು ಎಂದು ನಡೆಸಬೇಕೆಂದು ಪ್ರೋಗ್ರಾಂ ಮಾಡಿಕೊಂಡಿರುತ್ತಾರೋ ಅದಕ್ಕಿಂತ 2 ತಿಂಗಳು ಮುಂಚಿನಿಂದಲೇ ಪ್ರಾರಂಭಮಾಡಿದರೆ ರೈತರಿಗೆ ಅನುಕೂಲವಾಗುತ್ತದೆಯೇ ವಿನಾ ಇಲ್ಲದಿದ್ದರೆ ಇದರಿಂದ ಅವರಿಗೇನೂ ಸುಖವಾಗುವುದಿಲ್ಲ. ಆದರೆ ಈ ದಿವಸ ಈ ಐ.ಎ.ಪಿ. ಯ ಪ್ರೋಗ್ರಾಂನಲ್ಲಿ ರೈತರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳೇನಿವೆ ಅವುಗಳನ್ನು ಒದಗಿಸತಕ್ಕ ಶಕ್ತಿ ಈ ಕೋ ಅಪರೇಟೀವ್ ಸೊಸೈಟಿಗಳಿಗಿರುವುದಿಲ್ಲ. ಅವರಲ್ಲಿರತಕ್ಕ 2—3 ಲಕ್ಷ ರೂಪಾಯಿಗಳ ಬಂಡವಾಳವೇನಿದೆ ಅದನ್ನೇ ಬುಕ ಅಡ್ಜಸ್ಟ್ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ ಅದುದರಿಂದ ಇನ್ನು ಮುಂದೆ ಈ ಗೊಬ್ಬರ, ಬಿತ್ತನೆ ಬೀಜ ಇವುಗಳನ್ನು ಕ್ಯಾಷ್—ಕ್ರೆಡಿಟ್ ನಮೂನೆಯಲ್ಲಿ ದೊರೆಯತಕ್ಕ ಒಂದು ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಟ್ರ್ಯಾಕ್ಟರ್ ಕೊಡತಕ್ಕ ಪದ್ಧತಿಯೇನೋ ನಮ್ಮಲ್ಲಿ ಈಗ ಬಳಕೆಗೆ ಬಂದಿದೆ. ಅದರೆ ಇವನ್ನು ಎಲ್ಲರೂ ಕೇಳುತ್ತಿದ್ದಾರೆ. ಅವು ನನಗೂ ಬೇಕು, ಇನ್ನೊಬ್ಬನಿಗೂ ಬೇಕು. ಅದುದರಿಂದ ಅವುಗಳನ್ನು ರೈತರಿಗೆ ಹೆಚ್ಚು ತ್ರಾಸಾಗದರೀತಿಯಲ್ಲಿ ಅವರಿಗೆ ಹೆಚ್ಚು ಖರ್ಚಾಗದ ರೀತಿಯಲ್ಲಿ ಒದಗಿಸುವುದಕ್ಕೆ ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವನ್ನು ಕೆಲವರು ಹಂಗಾಮಿಯಾಗಿ ಸೀಜನ್‌ನಲ್ಲಿ ಬೇಡುತ್ತಾರೆ. ಅಂಥವರಿಗೂ ಸಿಗುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವು ರೈತರಿಗೆ ಬೇಡಿದ 2 ತಿಂಗಳಲ್ಲೇ ಸಿಗುವಂತೆ ಮಾಡಬೇಕು. ಇನ್ನು ಪಂಪಸೆಟ್ಟುಗಳ ವಿಚಾರಕ್ಕೆ ಬಂದರೆ—ಇವುಗಳನ್ನು ನಿಜವಾಗಿಯೂ ತೀವ್ರವಾಗಿಯೂ ರೈತರಿಗೆ ಕಂತುಸಾಲದ ರೂಪವಾಗಿಯಾಗಲೀ ಅಥವ ತಗಾವಿ ಸಾಲದ ರೂಪದಲ್ಲಿಯಾಗಲೀ ಒದಗಿಸುವುದಲ್ಲದೆ, ಇದರ ಎಂಜಿನ್ ಅಥವ ಇತರೇ ಪಾರ್ಟುಗಳನ್ನೂ ಕೂಡ ಹೀಗೆ ಒದಗಿಸುವುದಕ್ಕೆ ಸಬ್‌ಸಿಡಿಕೊಟ್ಟು ಇವುಗಳನ್ನು ಕಾಲಕ್ಕೆ ಸರಿಯಾಗಿ ಒದಗುವಂತೆ ಮಾಡಬೇಕು. ಈ ವಿಚಾರಕ್ಕೆ ನಮ್ಮ ಮುಖ್ಯ ಮಂತ್ರಿಗಳು ಹೆಚ್ಚಿನ ಗಮನಕೊಟ್ಟು ರೈತರು ಅರ್ಜಿಕೊಟ್ಟ 15 ದಿನಗಳಲ್ಲೇ ಇವು ಸಿಕ್ಕುವ ಹಾಗೆ ಮಾಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ದೇಶದಲ್ಲಿರತಕ್ಕ ಜನತೆ ಕಾಂಗ್ರೆಸ್ಸಿನಲ್ಲಿ ಇನ್ನೂ ಬಹಳ ವಿಶ್ವಾಸವನ್ನಿಟ್ಟುಕೊಂಡಿದೆ. ಅದರೆ ವಿರೋಧ ಪಕ್ಷದವರು ಟೀಕೆಗಳನ್ನೇನೋ ಮಾಡುತ್ತಾರೆ. ಆದರೆ ಅದು ನಿಜವಿರಬಹುದು, ಇಲ್ಲವೆ ಸುಳ್ಳಾಗಿಯಾದರೂ ಇರಬಹುದು. ಒಟ್ಟಿನಲ್ಲಿ ಹಳ್ಳಿಯ ಜನರಿಗೇನು ಬೇಕಾದ್ದು ಅವರಿಗೆ ಬೇಕಾದುದು ಒಂದು ಬಾವಿ, ಒಂದು ರಸ್ತೆ, ಒಂದು ಕೆರೆ, ಅಥವಾ ಒಂದು ನೀರಾವರಿ ಕಾಂಗಾರಿ ಇಂಥವುಗಳನ್ನು ಮಾತ್ರ ಬೇಡುತ್ತಾರೆ. ಅವುಗಳನ್ನು ಸರ್ಕಾರದವರು ತೀವ್ರವಾಗಿ ಒದಗಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ನಾನು ಕೇವಲ ಒಂದೆರಡು ಅಂಶಗಳನ್ನು ಮಾತ್ರ ವ್ಯವಸಾಯಕ್ಕೆ ಸಂಬಂಧಪಟ್ಟಹಾಗೆ ತಮ್ಮ ಮೂಲಕ ಸರ್ಕಾರದವರ ಗಮನಕ್ಕೆ ತರಲು ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಸರ್ಕಾರದವರು ಆಹಾರದ ವಿಚಾರದಲ್ಲಿ ಸ್ವಪರಿಪೂರ್ಣತೆ ಹೊಂದಲು ನೂರಾರು ಕೋಟಿ ರೂಪಾಯಿಗಳನ್ನು ವ್ಯವಸಾಯಕ್ಕಾಗಿ ಖರ್ಚುಮಾಡಿದ್ದಾರೆಂದು ತಿಳಿಸುತ್ತಾ ಕೆಲವು ಅಂಕೀ ಅಂಶಗಳನ್ನು ಅವರು ಹೇಳಿದ್ದಾರೆ. ಇರಿಗೇಷನ್ ಬಾಬಿನಲ್ಲಿ ಅವರು 273 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ, ಸಾಯಿಲ್‌ಕನ್‌ಸರ್ವೇಷನ್ನಿಗಾಗಿ 193 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಬೇಕಾದಷ್ಟು ಹಣವನ್ನು ಇರಿಗೇಷನ್, ಸಾಯಿಲ್‌ಕನ್‌ಸರ್ವೇಷನ್ ಮತ್ತು ಲ್ಯಾಂಡ್ ಡೆವಲೆಪ್‌ಮೆಂಟ್ ಬಾಬಿನಲ್ಲಿ ಹಣವನ್ನು ಖರ್ಚುಮಾಡಿದ್ದಾರೆ. ಆದರೆ ಸರ್ಕಾರದವರು ಇಷ್ಟು ಹಣವನ್ನೇನೊ ಖರ್ಚುಮಾಡಿದ್ದಾಯಿತು. ಆದರೆ ಅವರು ಸಾಧಿಸಿರತಕ್ಕ ಫಲಿತಾಂಶವೇನು ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಸರ್ಕಾರದವರು ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿದ್ದರೂ—ಕೋಟಿ ವಿದ್ಯೆಗಳಿಗಿಂತಲೂ ಮೇಟಿ ವಿದ್ಯೆಯೇ ಲೇಸು.—ಎಂಬುದಾಗಿ ಹೇಳುತ್ತಾ, ಇದ್ದರೂ ಇದನ್ನು ದೇಶದಲ್ಲಿರತಕ್ಕ ಬಡರೈತ ಜನರು ಕೇಳಿಕೊಂಡು ನಂಬಿಕೊಂಡು ಲಕ್ಷಾಂತರ ಜನರು ಈ ವ್ಯವಸಾಯದ ಕಸುಬಿನಲ್ಲೇ ತೊಡಗುವಂತೆ ಮಾಡಿವ್ವ ಸಾಮಾನ್ಯರೈತರಿಗೆ ವ್ಯವಸಾಯ ಶಿಕ್ಷಣ ಕೊಟ್ಟಿಲ್ಲ. ಕಾಂಗ್ರೆಸ್ ಜನರು ಕೇವಲ ವೇದಿಕೆಗಳ ಮೇಲೆ ನಿಂತು ಭಾಷಣಮಾಡಿದರೆ ಇದರಿಂದ ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆ ಮಾಡಿದಹಾಗೆ

ಆಯಿತೇ ಎಂಬುದನ್ನೂ ಕೂಡ ನಾವೀಗ ಆಲೋಚನೆಮಾಡಬೇಕಾಗಿದೆ. ವಿಚಾರಮಾಡಬೇಕಾಗಿದೆ. ಈ ದಿವಸ ಸರ್ಕಾರದವರು ಭೂಸುಧಾರಣಾ ಕಾನೂನನ್ನು ರಾಜ್ಯಾದ್ಯಂತ ಜಾರಿಗೆ ತಂದಿದ್ದಾರೆ. ಆದರೆ ಅದರಲ್ಲಿ ಸರ್ಕಾರದವರು ಮಾಡಿರತಕ್ಕದ್ದಾದರೂ ಏನು ? ಓನರ್‌ಷಿಪ್ ಆಧಾರದಮೇಲೆ ಗರಿಷ್ಠಮಿತಿಯನ್ನು ನಿರ್ಧಾರ ಮಾಡಿದ್ದಾರೆ. ಅದು ಸರಿಯಲ್ಲ. ಅದರಲ್ಲಿ ಒಂದು ಯೂನಿಟ್‌ಆಫ್ ಎಕನಾಮಿಕ್ ಕಲ್ಟಿವೇಷನ್ ಎಷ್ಟಿರಬೇಕು ಎಂಬುದನ್ನು ನಿಗದಿಮಾಡಿರುವುದಿಲ್ಲ. ಮೊದಲು ಈ ಕನಿಷ್ಠವ್ಯವಸಾಯದ ಮಿತಿಯನ್ನು ನಿರ್ಧರಿಸಬೇಕು. ನಮ್ಮ ರಾಜ್ಯದಲ್ಲಿ ಬಹು ಜನರು ಸ್ಮಾಲ್ ಹೋಲ್ಡಿಂಗುಗಳನ್ನು ಪಡೆದಿರತಕ್ಕವರೇ ಆಗಿದ್ದಾರೆ. ನನಗೆ ತಿಳಿದಿರುವ ಪ್ರಕಾರ ನಮ್ಮ ರಾಜ್ಯದಲ್ಲಿ 10 ಎಕ್ರೆಗಿಂತ ಕಡಿಮೆ ಹಿಡುವಳಿದಾರರ ಸಂಖ್ಯೆ ಶೇಕಡ :60 ಇದೆಯೆಂದು ತಿಳಿದುಬಂದಿದೆ. ಇಂಥ ಜನರ ಸ್ಟಾಂಡರ್ಡ್ ಆಫ್ ಲಿವಿಂಗ್ ಏನಿರಬೇಕು ಎಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಜಾರಿಗೆ ತಂದಿರತಕ್ಕ ಭೂಸುಧಾರಣೆಯ ಕಾನೂನಿನಿಂದ ರೈತರಿಗೆ ಏನೇನೂ ಪ್ರಯೋಜನವಿಲ್ಲ. ಅದರಿಂದ ವ್ಯವಸಾಯ ಉತ್ಪನ್ನಕೂಡ ಹೆಚ್ಚುವುದಿಲ್ಲ ದೇಶದಲ್ಲಿರತಕ್ಕ ಬಹುಪಾಲು ರೈತರು ತಾವೇನು ಬೆಳೆಯುತ್ತಿದ್ದಾರೆ ಅದು ಅವರಿಗೆ ಒಂದು ವರ್ಷದ ಜೀವನಕ್ಕೇ ಸಾಕಾಗುವುದಿಲ್ಲ. ಅಂದಾಗ ಅವರಿನ್ನು ಹೆಚ್ಚು ದವಸವನ್ನು ಬೆಳೆದು ಮಾರಾಟಮಾಡುವುದೆಲ್ಲಿಂದ ಬಂತು ? ಮಾರಾಟ ಮಾಡತಕ್ಕ ರೈತರ ಸಂಖ್ಯೆ ನಮ್ಮ ರಾಜ್ಯದಲ್ಲಿ ಬಹಳ ಕಡಮೆಯಿದೆ. ಆದುದರಿಂದ ನಮ್ಮ ರೈತರಲ್ಲಿ ಪರ್ಚೇಜಿಂಗ್ ಪವರನ್ನು ಹೆಚ್ಚಿಸುವುದಕ್ಕೆ ಸರ್ಕಾರದವರು ಗ್ರಾಮಾಂತರ ಪ್ರದೇಶದಲ್ಲಿ ಹಂತ ಹಂತವಾಗಿ ಕೈಗಾರಿಕೆಗಳನ್ನು ಪ್ರಾರಂಭಮಾಡಬೇಕು, ಅಲ್ಲಲ್ಲೇ ಡೈರಿ ಫಾರಂಗಳನ್ನು ತೆರೆಯಬೇಕು. ಹೀಗೆಮಾಡಿ ರೈತರಿಗೇನಾದರೂ ಒಂದೊಂದು ಉಪಕಸುಬು ಇರುವಂತೆ ಮಾಡಿದರೆ ಅವರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಸರ್ಕಾರದವರು ಇತ್ತಕಡೆಗೆ ಅವರ ಗಮನವನ್ನೇ ಹರಿಸಿಲ್ಲ. ಅವರೇನಿದ್ದರೂ ನಗರಗಳಲ್ಲಿರತಕ್ಕ ಜನರ ಹಾಗೂ ಸರ್ಕಾರಿ ನೌಕರಿಗಳಲ್ಲಿರತಕ್ಕ ಜನರಕ್ಷೇಮ ಲಾಭಗಳನ್ನು ಅವರ ಅಭಿವೃದ್ಧಿಯನ್ನು ಮಾತ್ರಸಾಧಿಸುವುದರಲ್ಲಿದ್ದಾರೆ. ಅವರು ರೈತಬಾಂಧವರ ಅಭಿವೃದ್ಧಿಯನ್ನು ಸಾಧಿಸಲು ಏನೇನೂ ಕೆಲಸಮಾಡುತ್ತಿಲ್ಲ. ಸರ್ಕಾರಿ ನೌಕರರು ಕೈಗಾರಿಕಾ ಶ್ರಮ ಜೀವಿಗಳು ಸಂಬಳ ಅಥವಾ ಕೂಲಿಯನ್ನು ಹೆಚ್ಚಿಸಲು ಒತ್ತಾಯ ಮಾಡಿದರೆ ''ಪೇ ಕಮೀಷನ್'' ಅಥವಾ ವೇಜ್ ಬೋರ್ಡ್‌ಗಳನ್ನು ನೇಮಿಸುತ್ತೀರಿ. ಆ ಕಮೀಷನ್ ನೌಕರರ ಜೀವನ ಮಟ್ಟ—ಬೆಲೆಗಳ ಏರಿಳಿತ ಮುಂತಾದುವುಗಳನ್ನು ವಿಮರ್ಶಿಸಿ ಒಂದು ಮಟ್ಟದ ಜೀವನವನ್ನು ನಡೆಸಲು ಎಷ್ಟು ಸಂಬಳ ಬೇಕು ಎಂಬುದನ್ನು ಅರಿತು ಸಂಬಳಸಾರಿಗೆಗಳನ್ನು ನಿಗದಿ ಮಾಡುತ್ತಾರೆ. ಆದರೆ ವ್ಯವಸಾಯಗಾರನ ಜೀವನ ಮಟ್ಟವನ್ನು ಯಾರೂ ನಿಗದಿ ಮಾಡಿಲ್ಲ. ಆ ಕಡೆ ಗಮನವನ್ನು ಹರಿಸಿಲ್ಲ. ಹಿಂದೆ ಎಂದಾದರೂ........ರೈತನ ಸ್ಟಾಂಡರ್ಡ್ ಆಫ್ ಲಿವಿಂಗ್ ಕಂಡುಹಿಡಿಯುವುದಕ್ಕೆ ಒಂದು ಕಮಿಷನ್ ನೇಮಕ ಮಾಡಿದ್ದೀರಾ ? ನೋಡಿ ವ್ಯವಸಾಯಗಾರನ ಜೀವನ ಚಿತ್ರವನ್ನು ಬಹು ಹೃದಯ ವಿದ್ರಾವಕವಾಗಿ ಈ ರೀತಿ ವರ್ಣಿಸಿದ್ದಾರೆ:

"His house is a small hut without windows In the corner intended to serve as kitchen, earthen pots are seen arranged with the smaller pots on top of the bigger ones. There are generally two such piles of pots........ On entering the cultivator's house one or two empty gunny bags are spread on the floor to receive guests. On the gunny cloth, the members of the cultivator's family repose at night. Every house has one or two thin quilts made of torn clothes. These quilts protect the cultivator's family against winter.

"The clothing of the cultivator consists of one good shirt, one torn shirt, one dhoti in good condition, one torn dhoti and a turban. The same is the case with women's clothing. When there are two women in the house. there is only one sari in good condition, while there are two torn saries, one for each. Both men and women use some kind of footwear, but it is used sparingly."

(From Indian Journal of Agricultural Economics—1940-1964—Selected Readings)

(ಶ್ರೀ ಎನ್. ಎ. ಚನ್ನೇಗೌಡ)

ಈ ಮಟ್ಟದಲ್ಲಿ ಜೀವನ ನಡೆಸತಕ್ಕಂಥ ವ್ಯವಸಾಯಗಾರ ನಮ್ಮ ರಾಜ್ಯಕ್ಕೆ ಬೇಕಾದಂಥ 56 ದಶ ಲಕ್ಷ ಟನ್ ಆಹಾರ ಧಾನ್ಯವನ್ನು ಹೇಗೆ ಬೆಳೆಯುವುದಕ್ಕೆ ಆಗುತ್ತದೆ ? ವ್ಯವಸಾಯಗಾರರ ಕಷ್ಟವನ್ನು ಅರಿತುಕೊಂಡು ಅದರ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ವಿನಂತಿಮಾಡಿ ಕೊಳ್ಳುತ್ತೇನೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ವಿಚಾರದಲ್ಲಿ ಎಸ್ಟಿಮೇಟ್ಸ್ ಕಮಿಟಿಯ ವರದಿಯಲ್ಲಿ 193 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ. ಅದನ್ನು ಓದಿದರೆ ಸಾಧನೆ ಸ್ವಯಂ ವೇದ್ಯವಾಗುತ್ತದೆ.

The Committee on Estimates observe in their 9th Report, as follows :—

" The Committee observe that for an expenditure of Rs. 154 lakhs on soil conservation done during Third Plan, an expenditure of Rs. 33 lakhs per year was incurred on staff alone. During the year 1965-66 as against an expenditure of Rs. 47.165 lakhs on the soil conservation works, the expenditure on staff is Rs. 33 lakhs which works out to over 80 per cent. The distribution of staff among sub-divisions is also not uniform. There are places where field staff is lacking and the supervisory staff have no sufficient workload."

ಅಂದರೆ ಸಾಯಿಲ್ ಕನ್‌ಸರ್ವೇಷನ್ ಕಾರ್ಯಕ್ರಮದಲ್ಲಿ ಕೆಲವರಿಗೆ ಕೆಲಸ ಕೊಡುವುದಕ್ಕೆ ಈ ಯೋಜನೆ ಯನ್ನು ಮಾಡುತ್ತಿದ್ದೀರಿ. ಆದರೆ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾತ್ರ ಆಗುತ್ತಿಲ್ಲ. ಇನ್ನು ರಾಸಾಯನಿಕ ಗೊಬ್ಬರ ನಮ್ಮ ರಾಜ್ಯಕ್ಕೆ ಎಷ್ಟು ಬೇಕು ಎಷ್ಟು ದೊರೆತಿದೆ ಎನ್ನುವುದನ್ನು ಹೇಳುತ್ತೇನೆ. 1956-57ರಲ್ಲಿ 31,250 ಟನ್ ನಮಗೆ ಬೇಕಾಗಿತ್ತು. ಇದರಲ್ಲಿ 19,922 ಟನ್ ಮಾತ್ರ ನಮಗೆ ಸಿಕ್ಕಿದೆ. ಅದೇ ರೀತಿ 1965-66 ರಲ್ಲಿ 2,79,766 ಟನ್ ಪಡೆಯಬೇಕಾಗಿತ್ತು. ಆದರೆ 1,18,212 ಟನ್ ಮಾತ್ರ ಬಂದಿದೆ. ಅಂದರೆ ಒಂದೂವರೆ ಲಕ್ಷ ಟನ್ ಮೇಲೆ ಕಡಿಮೆ ಸಿಕ್ಕಿದೆ. ಸಾಕಷ್ಟು ಗೊಬ್ಬರ ನಮಗೆ ದೊರೆತಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಇದಲ್ಲದೆ ದೊರೆತಿರತಕ್ಕಂಥ ಗೊಬ್ಬರ ಸಹ ಸರಿಯಾಗಿ ವಿತರಣೆಯಾಗಿಲ್ಲ, ಈ ಬಗ್ಗೆ ಆಡಿಟ್ ರಿಪೋರ್ಟಿನಲ್ಲಿ ಒಂದು ಅಂಶ ಹೇಳಿದೆ. ಕೇಂದ್ರ ಸರಕಾರದಿಂದ ಶಾರ್ಟ್ ಟರ್ಮ್ ಲೋನ್ ತಂದು ಇದಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬ ಗುರಿ ಇತ್ತು, ಆದರೆ ಒಂದು ಕೋಟಿ ಸಾಲತಂದು, ಉಪಯೋಗಿಸದೆ ಬಡ್ಡಿ ಸಹಿತ ವಾಪಸ್ ಮಾಡಲಾಗಿದೆ. ಸರಕಾರ ಎಷ್ಟರ ಮಟ್ಟಿಗೆ ರೈತರಿಗೆ ಸಕಾಲದಲ್ಲಿ ಗೊಬ್ಬರ, ಸಾಲ ಒದಗಿಸುತ್ತದೆ ಎಂಬ ಅಂಶ ಇದರಿಂದ ಗೊತ್ತಾಗುತ್ತದೆ.

Audit Report on the Accounts for 1965-66 :—

" (ii) Non-utilisation of loan and avoidable payment of interest. Except a sum of Rs. 2 lakhs, the entire short term loan of 1 crore received by the State Government from the Government of India in June 1965, for the purchase and distribution of nitrogenous fertilisers on credit among cultivators during 1965-66, remained unutilised and was refunded in March 1966. An interest of Rs. 2.97 lakhs was paid on this unutilised amount.

"Even out of Rs. 2 lakhs which the State Government allotted to the Deputy Commissioner, Shimoga, only a sum of Rs. 0. 17 lakh was spent. The balance of Rs. 1.83 lakhs was refunded to the Government of India in September 1966, together with an interest of Rs. 0.10 lakh."

ಇದನ್ನು ನೋಡಿದರೆ ಸರಕಾರದ ನೀತಿ ಏನು ಇದೆ ಎಂಬುದು ಅರ್ಥವಾಗುತ್ತದೆ. ಈ ರೀತಿ ಮಾಡಿ ವ್ಯವಸಾಯಗಾರರನ್ನು ಉದ್ಧಾರ ಮಾಡುತ್ತಾರೆಯೇ? ಆಹಾರ ಉತ್ಪತ್ತಿ ಹೆಚ್ಚು ಮಾಡಲು ತಂದಂಥ ಸಾಲವನ್ನು ರೈತರಿಗೆ ಸಕಾಲದಲ್ಲಿ ವಿತರಣೆ ಮಾಡದೆ ಹಾಳು ಮಾಡುತ್ತಿದ್ದಾರೆ. ಇದೇ ಸರಕಾರದ ಗುರಿ ಇರಬಹುದು.

ಇನ್ನು ಮಿಶ್ರ ಗೊಬ್ಬರ ಉಪಯೋಗಿಸಿದರೆ ಹೆಚ್ಚು ಬೆಳೆ ಬರುತ್ತದೆ ಎಂಬುದು ಕಂಡುಬಂದಿದೆ. ಫರ್ಟಿಲೈಜರ್ಸ್ ವಿತರಣೆ ಮಾಡುವುದಕ್ಕೆ ಕೋ-ಅಪರೇಟಿವ್ ಸೊಸೈಟಿ ಮೂಲಕ ಏರ್ಪಾಡು ಮಾಡುತ್ತಾರೆ. ಅಲ್ಲಿ ಬಹಳಷ್ಟು ಅನ್ಯಾಯ ನಡೆಯುತ್ತಿದೆ. ತಜ್ಞರು ಭತ್ತ ಕಬ್ಬು ಮುಂತಾದ ಬೆಳೆಗಳಿಗೆ ಮಿಕ್ಸಚರ್ ಹಾಕಿದರೆ ಭೂಸಾರ ಹಾಳಾಗುವುದಿಲ್ಲ ಎಂದು ಹೇಳುತ್ತಾರೆ. ಮಿಶ್ರಣ ಗಳನ್ನು ಒದಗಿಸುವುದನ್ನು ಪ್ರೈವೇಟ್ ಫರ್ಮುಗಳಿಗೆ ಕೊಟ್ಟು ಹೆಚ್ಚು ಲಾಭ ಪಡೆಯುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಸರಕಾರದವರೇ ಈ ರಾಸಾಯನಿಕ ಗೊಬ್ಬರ ಮಿಶ್ರಣ ಮಾಡಿ ರೈತರಿಗೆ ಒದಗಿಸಬೇಕು ಎಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ಕಬ್ಬು, ಭತ್ತ ಹತ್ತಿ ಮುಂತಾದ ಬೆಳೆಗಳ ಬಗ್ಗೆ ಸಂಶೋಧನೆ ನಡೆಸಲು 45 ಅಗ್ರಿಕಲ್ಚರಲ್ ರಿಸರ್ಚ ಇನ್‌ಸ್ಟಿಟ್ಯೂಟ್ ಇವೆ. ಇವುಗಳ ಪೈಕಿ ಯಾವ ಇನ್‌ಸ್ಟಿಟ್ಯೂಷನ್ ಫಂಡಮೆಂಟಲ್ ರಿಸರ್ಚ ಮಾಡಿದೆ? ಎಂದು ಕೇಳುತ್ತೇನೆ. ಇದುವರೆಗೆ ತಾಯಿಚುಂಗ ಭತ್ತ, ಮೈಜು ತಳಿಗಳು ಹೊರಗಡೆಯಿಂದ ಬಂದಿವೆ. ಇದಕ್ಕಾಗಿ ಬಹಳ ಹಣ ಖರ್ಚಾಗುತ್ತಿದೆ. ಒಂದು ಕೇಂದ್ರೀಕೃತವಾದ ರಿಸರ್ಚ ಇನ್‌ಸ್ಟಿಟ್ಯೂಟ್ ಇದ್ದು ಹೈಲೀ ಸ್ಕಿಲ್ಡ್ ಸ್ಟಾಫನ್ನು ನೇಮಕ ಮಾಡಿದರೆ ರಿಸರ್ಚ್ ಕೆಲಸ ಸರಿಯಾಗಿ ಆಗುತ್ತದೆ. ಆದುದರಿಂದ ಈ ಅಂಶದ ಕಡೆಗೆ ನಮ್ಮ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಅಗ್ರಿಕಲ್ಚರಲ್ ಯುನಿವರ್ಸಿಟಿಯವರು ಗಮನ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೈಗಾರಿಕೆ ಬಗ್ಗೆ ಹೇಳುತ್ತೇನೆ. ನಾನು ಮಂಡ್ಯ ಜಿಲ್ಲೆಯಿಂದ ಬಂದಿದ್ದೇನೆ ಮಂಡ್ಯ ಜಿಲ್ಲೆಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಸರ್. ಎಂ. ವಿಶ್ವೇಶ್ವರಯ್ಯ ಅವರು ಬಹು ದೂರ ದೃಷ್ಟಿಯನ್ನು ಇಟ್ಟುಕೊಂಡು ಮಾಡಿರತಕ್ಕಂಥ ಯೋಜನೆಗಳ ಪ್ರಕಾರ ಮಂಡ್ಯ ಜಿಲ್ಲೆಗೆ ವರಪ್ರದವಾಗಿ ಕೃಷ್ಣರಾಜ ಸಾಗರ ಕಟ್ಟೆಯನ್ನು ಕಟ್ಟಿದರು. ಈ ನೀರಾವರಿ ಯೋಜನೆಯ ಅನುಕೂಲತೆಯಿಂದ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಪಾಂಡವಪುರದಲ್ಲಿ ಸಕ್ಕರೆ ಕಾರ್ಖಾನೆ ಬೆಳಗೊಳದಲ್ಲಿ ಮೈಸೂರ ಕೆಮಿಕಲ್ ಫ್ಯಾಕ್ಟರಿ ಇವು ಪ್ರಾರಂಭವಾಗಿವೆ. ಆದರೆ ಸರಕಾರದ ದುರಾಡಳಿತದ ಪರಿಣಾಮವಾಗಿ ಮಂಡ್ಯ ಜನತೆಯನ್ನು ರಾಜಕೀಯವಾಗಿ ಬಗ್ಗು ಬಡಿಯಲು ಜಿಲ್ಲೆಯ ಆರ್ಥಿಕ ಪ್ರಗತಿಯನ್ನು ಹತ್ತಿಕ್ಕಲು ಎಕಾನಮಿ ಸ್ಕ್ವೀಜ್ ಮಾಡಿ ಕೈಗಾರಿಕೆಗಳು ಮುಂದುವರಿಯದ ನೀತಿಯನ್ನು ಮಂಡ್ಯ ಜಿಲ್ಲೆಯಲ್ಲಿ ಅನುಸರಿಸುತ್ತಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಮಂಡ್ಯ ಸಕ್ಕರೆ ಕಂಪನಿಯ ಒಂದು ಷೇರು 85.95 ರೂಪಾಯಿ ಬೆಲೆ ಇದ್ದುದು ಈ ದಿವಸ ಎಂಟೂವರೆ ರೂಪಾಯಿಗೆ ಮಾರುತ್ತಿದ್ದಾರೆ. ಇಂಡಸ್ಟ್ರೀಜ ಡಿಪಾರ್ಟಮೆಂಟಿನ ನಾಲ್ಕೈದು ಅಧಿಕಾರಿಗಳು ಸೇರಿಕೊಂಡು ತಮಗೆ ಬೇಕು ಬೇಕಾದ ಹಾಗೆ ಮಾಡಿ ಸ್ವಂತಲಾಭಪಡೆಯಲು ಸ್ವಜನಪಕ್ಷಪಾತದಿಂದ ಈ ಕೈಗಾರಿಕೆಯನ್ನು ಮುರಿದು ಹಾಕಲು ಹಾಳುಮಾಡಲು ಹೊರಟಿದ್ದಾರೆ. ಮಂಡ್ಯ ಸಕ್ಕರೆ ಕಂಪೆನಿಯಲ್ಲಿದ ಒಬ್ಬ ಐ.ಎ.ಎಸ್. ಮ್ಯಾನೇಜಿಂಗ್ ಡೈರೆಕ್ಟರ್ ಅವರು ಐದಾರು ಲಕ್ಷ ರೂಪಾಯಿ ಕಂಟ್ರಾಕ್ಟನ್ನು ರಾತ್ರಿ ಹನ್ನೆರಡು ಗಂಟೆ ನಡುರಾತ್ರಿಯಲ್ಲಿ ತಾವು ಚಾರ್ಜ್ ಕೊಡುವುದರಲ್ಲಿ ಇದ್ದಾಗ್ಗೆ M/s ಕುಸುಮು ಪ್ರಾಡಕ್ಟ್ ಅವರಿಗೆ ಕಂಟ್ರಾಕ್ಟ್ ಕೊಟ್ಟಿರುತ್ತಾರೆ. ಇದರ ರಹಸ್ಯವೇನು? ಇದನ್ನು ನೋಡಿದರೆ ಸರಕಾರ ಕಣ್ಣು ಮುಚ್ಚಿ ಕುಳಿತಿದೆಯೋ ಎಂದು ಕೇಳಬೇಕಾಗುತ್ತದೆ. ಈ ಬಗ್ಗೆ ಸರ್ಕಾರದವರು ಒಂದು ವಿಚಾರಣಾ ಸಮಿತಿ ನೇಮಿಸಬೇಕು ಸರಕಾರ ಇದಕ್ಕೆ ಗಮನ ಕೊಡದೇ ಹೋದರೆ ಮಂಡ್ಯ ಸಕ್ಕರೆ ಕಾರ್ಖಾನೆ ಹಾಳಾಗಿ ಹೋಗುತ್ತದೆ. ಜೊತೆಗೆ ಐದು ಕೋಟಿ, ಆರು ಕೋಟಿ ರೂಪಾಯಿ ಖರ್ಚು ಮಾಡಿ ಪ್ರಾರಂಭಿಸಿದ ಅಸಿಟೇಟ ಮತ್ತು ಕೆಮಿಕಲ್ಸ್ ಫ್ಯಾಕ್ಟರಿಯೂ ಹಾಳಾಗಿ ಹೋಗುತ್ತದೆ. ಮಂಡ್ಯ ಪೇಪರ್ ಮಿಲ್ಸ್ ಮೇಲೆ ಸಹ ಮಂಡ್ಯದ ಜನರು ಲಕ್ಷಾಂತರ ರೂಪಾಯಿ ಹಾಕಿದ್ದಾರೆ. ಅದು ಕೂಡ ಮುಳುಗಿ ಹೋಗಿದೆ. ಜನರಿಗೆ ಮೋಸವಾಗಿದೆ. ಅದುದರಿಂದ ಈ ಜಿಲ್ಲೆಯ ಕೈಗಾರಿಕೆ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸರಕಾರ ತಿಳಿದುಕೊಳ್ಳಬೇಕು. ಇದಕ್ಕೆಲ್ಲಾ ದುರಾಶಾಪೀಡಿತರಾದ ಐ. ಎ. ಎಸ್. ಆಫೀಸರರು ತುಂಬಾ ಕಾರಣರಾಗಿದ್ದಾರೆ.

ಸರಕಾರದ ಈ ನೀತಿ ಎಂದಾದರೂ ತಿರುಗುಬಾಣವಾದೀತು ನಿಜವಾಗಿಯೂ ಬಹುಮಂದಿ ಐ.ಎ.ಎಸ್. ಆಫೀಸರ್ಸುಗಳು ಬುದ್ಧಿವಂತರು ದಕ್ಷರು. ಆದರೆ ಚಿಕ್ಕ ವಯಸ್ಸಿನವರು ಬರುತ್ತಾರೆ.

(ಶ್ರೀ ಎನ್. ಎ. ಚನ್ನೇಗೌಡ)

ನಾಲ್ಕೈದು ವರ್ಷದಲ್ಲಿ ಅವರಿಗೆ ಸೀನಿಯರ್ ಕೇಡರ್ ಕೊಟ್ಟು ಜಿಲ್ಲೆಗೆ ಹಾಕುತ್ತಾರೆ. ಇವರಿಗೆ ಅನುಭವ ಕಡಿಮೆ ಇರುತ್ತದೆ. ಪರಿಣಾಮವಾಗಿ ಆಡಳಿತ ಬಿಗಿ ತಪ್ಪುತ್ತದೆ. ಈ ಐ. ಎ. ಎಸ್. ಅಧಿಕಾರಿಗಳ ನೇಮಕದ ಮೂಲಕ ಎಂ. ಎ. ಎಸ್. ಅಧಿಕಾರಿಗಳಿಗೆ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ಐ. ಎ. ಎಸ್. ಅಧಿಕಾರಿಗಳ ಬದಲು ಎಂ. ಎ. ಎಸ್. ಅಧಿಕಾರಿಗಳು ಮುಂದೆ ಬರುವುದಕ್ಕೆ ಕಾಲ ಮಿತಿ ಮತ್ತು ಪ್ರಮಾಣ ಜಾಸ್ತಿ ಮಾಡಿ ಅವರಿಗೆ ಅವಕಾಶ ಮಾಡಿ ಕೊಡಬೇಕು. ಇದಲ್ಲದೆ ಕೇಂದ್ರ ಆಡಳಿತದಲ್ಲಿ ಇರತಕ್ಕಂಥ ರೈಲ್ವೆ ಪಿ ಅಂಡ್ ಟಿ ಮುಂತಾದ ಕೇಂದ್ರ ಸೇವೆಗಳಲ್ಲಿ ಮೈಸೂರಿನವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರಕುವಂತೆಯೂ ಅವರ ಸೇವೆಸ್ಥಿತಿಗಳನ್ನು ಗಮನಿಸಿ ಅವರ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಂಡು ಬರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

6-30 P.M.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತಿನವರೆಗೆ ಮಾನ್ಯ ಸದಸ್ಯರು ವ್ಯವಸಾಯದ ಮೇಲೆ ಹೆಚ್ಚು ಮಾತನಾಡಿದ್ದಾರೆ. ನಾನಾದರೂ ಕೂಡ ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಮಾತನಾಡೋಣ ಎಂದು ಇದ್ದೇನೆ. 1947 ರಲ್ಲಿ ಜಿಲ್ಲಾಬೋರ್ಡ್ ಉಪಾಧ್ಯಕ್ಷನಾದವನಾಗಿದ್ದು ಆಡಳಿತದ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಯಾವ ರೀತಿಯಿಂದ ನಡೆಸಬೇಕು ಎಂದು ನನಗೆ ತೋಚದೆ ಇದ್ದು ಅನೇಕ ಸಲ ಸರ್ಕಾರದವರಿಗೆ ಕಾಗದ ಪತ್ರಗಳನ್ನು ಬರೆಯತಕ್ಕ ಅವಕಾಶ ದೊರೆತಿತ್ತು. ಈಗ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ. ಗೆಜೆಟೆಡ್ ಅಧಿಕಾರಿಗಳ ಸಂಖ್ಯೆ 1962 ರಿಂದ 1964 ನೇ ಇಸವಿಗೆ 639 ಜಾಸ್ತಿಯಾಗಿದೆ. ಆದರಿಂದ ಈಚೆಗೆ ಇನ್ನೆಷ್ಟು ಆಗಿದೆಯೋ. ಆದರೆ ಆಡಳಿತದ ಮಟ್ಟಿಗೆ ಹೆಚ್ಚಿಗೆ ಸುಧಾರಣೆಯಾಗುವುದಕ್ಕೆ ಅವಕಾಶವಾಗಿಲ್ಲ. ನಮ್ಮ ಮಾನ್ಯ ಸ್ನೇಹಿತರನೇಕರು, ವಿರೋಧಪಕ್ಷದವರು ಮಾತನಾಡುವಾಗ ಸರ್ಕಾರದ ಕಡೆಗೆ ನೇರವಾಗಿ ಕೈ ತೋರಿಸುತ್ತಾರೆಯೇ ವಿನಾ ಅಧಿಕಾರಿಗಳು ಮಾಡತಕ್ಕ ತಪ್ಪನ್ನು ಸ್ವಲ್ಪಮಟ್ಟಿಗೆ ಎದುರಿಸುವುದಕ್ಕೆ, ಸರಿಪಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಅವರ ಮುಂದೆ ಹೋಗಿ ಇಂಥ ಕೆಲಸಗಳನ್ನು ಮಾಡಬಾರದು ಎಂದು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ ಎಂದು ಹೇಳಿಲ್ಲ. ಅವರನ್ನು ಸ್ವಲ್ಪಮಟ್ಟಿಗೆ ಎತ್ತಿ ಮಾತನಾಡುತ್ತಾರೆ ಮತ್ತು ಸರ್ಕಾರದ ಮೇಲೆಯೇ ಎಲ್ಲ ತಪ್ಪನ್ನೂ ಹೊರಿಸುತ್ತಾರೆ. ವಿರೋಧ ಪಕ್ಷದವರು ಅಧಿಕಾರಿಗಳನ್ನು ಎತ್ತಿಕಟ್ಟಿದರೆ ಈ ಸರ್ಕಾರವನ್ನು ಉರುಳಿಸಬಹುದೆಂಬ ಪ್ರಯತ್ನದಲ್ಲಿ ಇದ್ದಂತೆ ತೋರುತ್ತೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮಾತನಾಡುವಾಗ ರಾಜ್ಯದಲ್ಲಿ ನಾಲ್ಕಾಣೆಯಿಂದ 40 ಸಾವಿರ ರೂಪಾಯಿವರೆಗೂ ಲಂಚವಿದೆ ಎಂದು ಹೇಳಿದರು. ಕೆಳಮಟ್ಟದಿಂದ ಮೇಲ್ಮಟ್ಟದವರೆಗೂ ಲಂಚವಿದೆ ಎಂದು ಹೇಳಿದರು. ಅಧಿಕಾರಿಗಳು ಸರಿಯಾಗಿದ್ದರೆ ಎಲ್ಲ ಸರಿಹೋಗುತ್ತದೆ. ಅನೇಕ ಕಡೆ ಚುನಾವಣೆಗಳಾದ ಮೇಲೆ ನನ್ನನ್ನು ಕರೆದಾಗ ನನ್ನ ಭಾಷಣದಲ್ಲಿ ಕೂಡ ಹೇಳಿದ್ದೇನೆ, ಒಂದು ಲಕ್ಷ 76 ಸಾವಿರ ಚಿಲ್ಲರೆ ಇರುವ ಅಧಿಕಾರಿಗಳನ್ನು 2 ಕೋಟಿ 35 ಲಕ್ಷ ಜನ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿಯನ್ನು ಇಲ್ಲಿ ನಾವು ಹೇಳುವುದು ಸರಿಯಲ್ಲ. ಪ್ರತಿಯೊಂದಕ್ಕೂ ಸರ್ಕಾರದ ಮೇಲೆ ಹೇಳದೆ ತಾವೂ ತಮ್ಮ ಪ್ರಯತ್ನ ಮಾಡಬೇಕು. ಅನೇಕರು ನಮ್ಮ ನಮ್ಮ ಜಾತಿ ನೆಂಟರಿಷ್ಟರು ಎಂದು ಹೇಳುವವರೂ ಇದ್ದಾರೆ. ಅವರಿಗೆ ಬುದ್ಧಿ ಹೇಳುವ ಮಟ್ಟಕ್ಕೆ ಯಾರೂ ಹೋಗುತ್ತಿಲ್ಲ ಎಂದು ನಾನು ವಿರೋಧ ಪಕ್ಷದ ಸ್ನೇಹಿತರಿಗೆ ಹೇಳಬೇಕಾಗಿದೆ. ದೇಶದ ಹಿತದೃಷ್ಟಿಯಿಂದ ಒಳ್ಳೆಯ ವಾತಾವರಣ ಬೆಳೆಸಬೇಕು ಎನ್ನುವ ದೃಷ್ಟಿಯಿಂದ ನಾನ್ ಗೆಜೆಟೆಡ್ ಆಫೀಸರುಗಳು, ಯಾರೇ ಆಗಲೀ, ಸ್ವಲ್ಪ ಮಟ್ಟಿಗೆ ಒಳ್ಳೆಯ ಮನೋಭಾವ ತೋರಿಸುವುದಕ್ಕೆ, ದೇಶಾಭಿಮಾನ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣ. ಇದರಿಂದ ಪ್ರಯೋಜನವಾದೀತು. ಅನಾವಶ್ಯಕವಾಗಿ ಎಲ್ಲ ಸರ್ಕಾರದಿಂದ ತೊಂದರೆಯಾಗುತ್ತಿದೆ, ಸರ್ಕಾರ ಇಂಟರ್‌ಫೀಯರ್ ಮಾಡುತ್ತಿದೆ, ಅವರಿಂದ ಅನ್ಯಾಯವಾಗುತ್ತಿದೆ ಎಂದು ಹೇಳತಕ್ಕುದು ಎಷ್ಟರಮಟ್ಟಿಗೂ ಸರಿಯಾದುದಲ್ಲ. ವಿರೋಧ ಪಕ್ಷದಿಂದ ಬಂದಿರತಕ್ಕ ಅನೇಕ ಸದಸ್ಯರು ಆಫೀಸುಗಳಲ್ಲಿ ಹೋಗಿ ಜಾತಿಯ ವಿಷಯ ಮಾತನಾಡುವುದು, ನಮ್ಮನ್ನೆಲ್ಲಾ ಯಾರು ಕೇಳಬೇಕು ಎಂದು ಹೇಳಿ ರಾಜಕೀಯ ಮಾಡುವುದು, ಬಾಯಿಗೆ ಬಂದಹಾಗೆ ಮಾತನಾಡುವುದನ್ನು ಕೇಳಿದ್ದೇನೆ. ನೀವು ಯಾವಾಗಲೂ ಇಷ್ಟೊಂದು ದೊಡ್ಡ ಸಭೆಯಲ್ಲಿ ಬಂದು ಕುಳಿತುಕೊಂಡು ದೇಶದ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಬೇಕು ಮತ್ತು ಇರುವ ತೊಂದರೆಗಳನ್ನು

ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರೂ ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಕೆಲವು ಸರ್ಕ್ಯುಲರ್‌ಗಳನ್ನು ಶೀಘ್ರವಾಗಿ ಕೊಡುತ್ತಾರೆ. ಆ ಪ್ರಕಾರ ಕೆಲಸಗಳು ಆಗುತ್ತಿವೆಯೇ ಇಲ್ಲವೇ ಎಂದು ನಿರೀಕ್ಷೆ ಮಾಡುವುದಿಲ್ಲ. ಅದಕ್ಕೆ ಏನಾದರೂ ಕಾರ್ಯಕ್ರಮ ಕಂಡುಹಿಡಿಯಬೇಕು. ಯಾವುದಾದರೂ ಕಾಗದ ಪತ್ರ ಒಂದು ಆಫೀಸಿಗೆ ಬರುವುದಾದರೆ ಇಷ್ಟು ದಿವಸಗಳಲ್ಲಿ ಅದು ಫೈಸಲಾಗಬೇಕು ಎಂದೂ ಆ ಕಾಯಿದೆಯಲ್ಲ. ಅದನ್ನು ಯಾರು ಫೈಸಲ್ಮಾಡಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದೂ ಹೇಳುತ್ತೇವೆ. ಒಂದು ಸಣ್ಣ ಕ್ರಮ ಅಧಿಕಾರಿಗಳ ಮೇಲೆ ತೆಗೆದುಕೊಂಡರೂ ಕೂಡ ಬಹಳ ಜಾಗ್ರತೆಯಾಗಿ ಹೈಕೋರ್ಟಿಗೆ ಹೋಗಿ ಅಫಿಷಿಯಲ್ಸ್ ಮೇಲೆ ಏನೂ ಮಾಡದೆ ಇರುವ ಹಾಗೆ ಸ್ಟೇ ಆರ್ಡರ್ ಬರುತ್ತದೆ. ಇದಕ್ಕೆ ಏನಾದರೂ ಮಾರ್ಗವನ್ನು ಕಂಡುಹಿಡಿದು ತಪ್ಪಿತಸ್ಥರ ಮೇಲೆ ಸರ್ಕಾರಕ್ಕೆ ಸಂಪೂರ್ಣಚಡದ ಅಧಿಕಾರ ಇರುವ ಹಾಗೆ ಕಾನೂನು, ರೂಲ್ಸ್ ಬದಲಾವಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಅನೇಕ ಕಾಗದ ಪತ್ರಗಳನ್ನು ಅಫಿಷಿಯಲ್ಸ್ ತಪ್ಪು ಮಾಡಿರುವಾಗ ಅವರ ಮೇಲೆ ಬರೆದಾಗ ವಿಚಾರಣೆ ಆಗುತ್ತಿಲ್ಲಾ. ನಾನು ಬರೆಯುತ್ತೇನೆ, ಅವರಲ್ಲಿ ತಪ್ಪಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ನಾನು ಏನಾದರೂ ತಪ್ಪು ಬರೆದಿದ್ದರೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ, ನಾನು ಅದಕ್ಕೆ ಸಿದ್ಧನಾಗಿದ್ದೇನೆ ಎಂದು ಬರೆಯುತ್ತೇನೆ. ಈ ರೀತಿ ತರ್ಲೆ ಬರೆಯುವವರ ಮೇಲೂ ಕ್ರಮವಿರಬೇಕು. ಇಂಥವನ್ನೇ ವಿಚಾರಣೆ ಮಾಡುವುದಕ್ಕೆ ಪ್ರತ್ಯೇಕ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡರೆ ಆಗಬಹುದೋ ಏನೋ ಅನ್ನಿಸುತ್ತದೆ. ಆಂಟಿ ಕರಪ್‌ಷನ್ ಇಲಾಖೆ ಇದೆ, ಅವರಿಗೆ ಬರೆದರೆ ಎಷ್ಟೋ ತಿಂಗಳುಗಳ ದಿವಸಗಳ ಮೇಲೆ ಅವರು ಬಂದರೆ ಕಂಡುಹಿಡಿಯುವುದಕ್ಕಾಗುವುದಿಲ್ಲ. ಅಂಕಿ ಅಂಶಗಳ ಸಮೇತ ಬರೆದಾಗ, ಎಂಟು ದಿವಸಗಳೊಳಗಾಗಿ ಅಥವಾ ಒಂದು ತಿಂಗಳೊಳಗಾಗಿ ಆ ಕಾಗದದ ಮೇಲೆ ಪರಿಶೀಲನೆ ಮಾಡುವುದಕ್ಕೆ ಅವಕಾಶವಿರಬೇಕು. ಅದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು.

ನಾನು ಹೇಳಿದ ಹಾಗೆ ಕಾಂಗ್ರೆಸ್ಸಿಗೆ ಹೆಚ್ಚಿನ ಸೋಲು ಎಲ್ಲಿಯಾದರೂ ಆಗಿದ್ದರೆ ಅದಕ್ಕೆ ಸರ್ಕಾರ ಯಾವ ರಸ್ತೆ ಮಾಡಿಸಿಕೊಟ್ಟಿಲ್ಲ, ಬಾವಿ ಮಾಡಿಸಿಕೊಟ್ಟಿಲ್ಲ, ಸೇತುವೆ ಆಗಿಲ್ಲ ಎಂದಲ್ಲ. ಪ್ರತಿಯೊಬ್ಬ ರೈತನೂ ಪ್ರಜೆಗಳೂ ಸಣ್ಣ ಕೆಲವು ಅಧಿಕಾರಿಗಳಿಂದ ಆಗತಕ್ಕ ಕಿರುಕುಳದಿಂದ ಬೇಸತ್ತು ಸಾಧ್ಯವಿಲ್ಲವಲ್ಲಾ ಎನ್ನುವ ಮನೋಭಾವವನ್ನು ಕಾಂಗ್ರೆಸ್ ಸಂಸ್ಥೆ ಮೇಲೆ ವ್ಯಕ್ತಪಡಿಸಿದ್ದಾರೆ. ಯಾವ ಕಾಗದ ಪತ್ರ ಯಾವ ಕಸದ ಬುಟ್ಟಿಗೆ ಹೋಗಿರುತ್ತದೆಯೋ ಗೊತ್ತಿಲ್ಲ. ರೈತರು ಹೋಗಿ ಅಲ್ಲಿಂದ ಹೊರಡಿಸಿದ ಹೊರತು ಕಾಗದಪತ್ರ ಈಚೆಗೇ ಬರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳಬೇಕಾಗಿದೆ. ಜಿಲ್ಲಾಧಿಕಾರಿಗಳು ಇನ್‌ಸ್ಪೆಕ್ಷನ್‌ಗೆ ಇಬ್ಬರು ಮೂವರು ಗುಮಾಸ್ತರನ್ನು ಒಂದು ದಿನ ಮುಂಚೆ ಕಳಿಸುತ್ತಾರೆ. ಅವರು ಎಲ್ಲ ನೋಟ್ ಹಾಕಿಕೊಂಡು ಕೊಡುತ್ತಾರೆ. ಆ ನೋಟ್ಸ್ ಆಧಾರದ ಮೇಲೆ ಅವರು ಏನಾಗಿದೆ, ಏನಾಗಿಲ್ಲ ಎಂದು ಇನ್‌ಸ್ಪೆಕ್ಷನ್ ನೋಟ್ಸ್ ಎಂದು ಬರೆದು ಕಳಿಸುತ್ತಾರೆ. ನಿಜವಾಗಿ ಪಿಜನ್‌ಹೋಲ್ ಹತ್ತಿರ ಹೋಗಿ ಏನೇನು ಕಾಗದಪತ್ರಗಳು ಉಳಿದಿವೆ, ಎಂದು ರಿಜಿಸ್ಟರ್ ನೋಡತಕ್ಕ ಅಭ್ಯಾಸವೇ ಇಲ್ಲ. ಅಲ್ಲಿರುವವರೂ ಗುಮಾಸ್ತರು, ಇಲ್ಲಿಂದ ಹೋಗಿರುವವರೂ ಗುಮಾಸ್ತರು. ಒಂದು ದಿವಸವಾಗಲೀ, ಮೂರು ದಿವಸವಾಗಲೀ ಒಂದು ತಾಲ್ಲೂಕು ಆಫೀಸಿಗೆ ಹೋದರೆ ಪೂರ್ತಿಯಾಗಿ ನೋಡತಕ್ಕ ಅವಕಾಶವಿರಬೇಕು. ಒಂದು ತಿಂಗಳು, ಮೂರು ತಿಂಗಳು ಎಂದು ಒಂದು ಕಾಲಮಿತಿಯನ್ನು ಗೊತ್ತುಮಾಡಿ ಇಷ್ಟು ದಿವಸದ ಮೇಲೆ ಯಾವ ಕಾಗದ ಪತ್ರವೂ ಬಾಕಿ ಉಳಿದಿರಬಾರದು ಎಂದು ಕಡ್ಡಾಯ ಮಾಡಿ, ಅದರಂತೆ ನಡೆಯದೆ ಕಾಗದಪತ್ರಗಳನ್ನು ಇಟ್ಟುಕೊಂಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕು. ಮಾನ್ಯ ಮಂತ್ರಿಗಳು ಕೂಡ ಪ್ರವಾಸ ಹೋದಾಗ ಅನಿರೀಕ್ಷಿತವಾಗಿ ಆಫೀಸುಗಳಿಗೆ ಹೋಗತಕ್ಕ ಪದ್ಧತಿಯನ್ನು ಇಟ್ಟುಕೊಂಡರೆ, ಇತ್ಯರ್ಥವಾಗದೆ ಇರುವ ಕಾಗದ ಪತ್ರಗಳನ್ನು ನೋಡತಕ್ಕ ಪದ್ಧತಿಯನ್ನು ಇಟ್ಟುಕೊಂಡರೆ ಅನುಕೂಲವಾಗಬಹುದು ಎಂದು ಹೇಳುತ್ತಿದ್ದೇನೆ.

ನಮ್ಮ ಸ್ನೇಹಿತರು ಮಾತನಾಡಬೇಕಾದರೆ ಹೇಳಿದರು ರೂರಲ್ ಇಂಡಸ್ಟ್ರಿಯಲ್ ಬ್ಯಾಂಕಿನವರು ನೇರವಾಗಿ ಸಾಲಕೊಡುವಂತಿರಬೇಕು ಎಂತ ನಾನು ಈ ಮೊದಲು ಮಾತನಾಡಿದಾಗ ಎಲ್ಲ ತೆಗೆದು ಹಾಕಿ ಸೆಂಟ್ರಲ್ ಕೋ-ಅಪರೇಟಿವ್ ಬ್ಯಾಂಕಿಗೆ ಅಟಾಚ್‌ಮಾಡಿ, ಈ ರೀತಿ ವಿಪರೀತವಾಗಿರತಕ್ಕ ಆಡಳಿತದ ಖರ್ಚು ವೆಚ್ಚಗಳನ್ನು ಜಾಸ್ತಿ ಮಾಡುವುದು ಬೇಡ ಎಂದು. ನಮ್ಮ ರೂರಲ್ ಇಂಡಸ್ಟ್ರಿಯಲ್ ಡಿಸ್ಟ್ರಿಕ್ಟ್ ಬ್ಯಾಂಕ್ ವಿಷಯ ತೆಗೆದುಕೊಂಡು ಮಾತನಾಡುವುದಾದರೆ ಏನಿದೆಯೋ,

(ಶ್ರೀ ಕೆ. ಎನ್. ವೀರಪ್ಪಗೌಡ)

ಏನಿಲ್ಲವೋ ಯಾವುದನ್ನೂ ನೋಡದೆ 10-15 ಸಾವಿರ ರೂಪಾಯಿ ಓವರ್‌ಡ್ರಾಫ್ಟ್ ದೊಡ್ಡ ಬ್ಯಾಂಕುಗಳಲ್ಲಿ ಕೊಡುವಂತೆ ಕೊಡುತ್ತಾರೆ. ಬತ್ತವನ್ನು ಆಧಾರವಾಗಿಟ್ಟುಕೊಂಡು ಹಣ ಕೊಡುತ್ತಾರೆ. ಈ ಬ್ಯಾಂಕುಗಳಿಂದ ನೇರವಾಗಿ ಹಣ ಕೊಡುವುದನ್ನು ನಾನು ಖಂಡಿತವಾಗಿ ಒಪ್ಪುವುದಿಲ್ಲ. ಈ ಬ್ಯಾಂಕುಗಳಿಂದ ಹಣ ಕೊಡುವುದು ಇರಲೇ ಕೂಡದು ಸೊಸೈಟಿಗಳ ಮೂಲಕವೇ ಕೊಡಬೇಕು. ಇದು ಸುಲಭವಾಗಿರುತ್ತದೆ. ಸೊಸೈಟಿಗಳವರು ಅವಶ್ಯಕತೆ ನೋಡಿಕೊಂಡು ಎಷ್ಟು ಬೇಕಾಗಬಹುದೋ ಅಷ್ಟನ್ನು ಮಾತ್ರ ಕೊಡುತ್ತಾರೆ. ಲಕ್ಷಗಟ್ಟಲೆ ಅವರು ಕೊಡುವುದಿಲ್ಲ. ಬ್ಯಾಂಕಿನವರು ಲಕ್ಷಗಟ್ಟಲೆ ಎಷ್ಟುಬೇಕಾದರೂ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ನಮ್ಮ ಬ್ಯಾಂಕಿನಲ್ಲಿ ಎಷ್ಟರ ಮಟ್ಟಿಗೆ ನಡೆದಿದೆ ಎಂದು ಈಗ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮೀಟಿಂಗ್‌ನಲ್ಲಿ ಡೈರೆಕ್ಟರುಗಳ ಜೊತೆ ಚರ್ಚೆ ಮಾಡಿ ಎಲ್ಲವನ್ನೂ ಸಹ ಹೇಳಿದ್ದೇನೆ.

ಖಾದಿ ಬೋರ್ಡಿನಲ್ಲಿ ಅನೇಕ ಜನ ಆಡಳಿತ ನಡೆಸಿದ್ದಾರೆ. ಇವತ್ತು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವವರೂ ಕೂಡ ಆಡಳಿತ ನಡೆಸಿದ್ದಾರೆ. ಮೂರು ವರ್ಷದಲ್ಲಿ ನಾನೂ ಒಬ್ಬ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ನಡೆಯಿರತಕ್ಕದ್ದು, ಮಾನ್ಯ ಸಿದ್ಧವೀರಪ್ಪನವರು ಹೇಳಿರತಕ್ಕುದು ನಿಜ. ನಾವು ಮೂರು ವರ್ಷ ಇದ್ದು ಅಲ್ಲಿ ಏನು ಮಾಡಬೇಕು ಎಂದು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಸರ್ಕಾರದ ಕಾನೂನು ಪ್ರಕಾರ ಅಧಿಕಾರ ಬೋರ್ಡಿಗೆ ಕೊಟ್ಟಿದ್ದಾರೆ. ಆ ಪ್ರಕಾರ ಮಾಡಿದ್ದೇವೆ. ಆಕ್ಟ್ ಪ್ರಕಾರ ಸರ್ಕಾರವನ್ನು ಕೇಳಬೇಕಾಗಿಲ್ಲ. ಬದನವಾಳ, ಐಮಂಗಲ ಖಾದಿ ಕೇಂದ್ರದಲ್ಲಿ 30-35 ಜನರಿರುವ ಕಡೆ 100-150 ಜನರನ್ನು ನೇಮಕ ಮಾಡಿ ಬಹಳ ಲುಕ್ಸಾನಾಗುವುದಕ್ಕೆ ಅವಕಾಶ ಹಿಂದಿನವರು ಮಾಡಿದ್ದರು ನಾವು ಅದನ್ನೆಲ್ಲಾ ಕಡಿಮೆಮಾಡಿ ಸರಿಪಡಿಸಿದೆವು. ಯಾರೋ ಅಫಿಷಿಯಲ್ಸ್ ಅನ್ನು ನೇಮಕ ಮಾಡಿ ಕಳಿಸಿದಾಗ ಅಲ್ಲಿಯ ಮ್ಯಾನೇಜರ್ ನಮಗೆ ಅವಶ್ಯಕತೆ ಇಲ್ಲ ಎಂದು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಅದಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಿದರು. ನಾವು ಬಂದನಂತರ ಸಸ್ಪೆಂಡ್ ತೆಗೆದು ಹಾಕಿದೆವು. ಜರಗನಹಳ್ಳಿ ಕೇಂದ್ರಕ್ಕೆ 36,000 ರೂಪಾಯಿಗಳನ್ನು ಒಂದೇ ಕಂತಿನಲ್ಲಿ ಚೆಕ್ ಮೂಲಕ ಕೊಟ್ಟಿದ್ದಾರೆ. ಕಂತುಗಳ ಮೂಲಕ ಕೊಡಬೇಕು ಎಂದು ಇದೆ. ಮಾನ್ಯ ಸಿದ್ಧವೀರಪ್ಪನವರು ಇನ್‌ಸ್ಪೆಕ್ಷನ್ ಮಾಡಿಕೊಂಡು ಬಂದು ಎರಡು ವರ್ಷವಾದರೂ ಕೂಡ ಏನೂ ಕ್ರಮ ತೆಗೆದುಕೊಂಡಿರಲಿಲ್ಲ.

Sri H. SIDDAVEERAPPA.—If I may interfere since he is making a personal allegation— I want him to give in writing what he has got to say against me. I do not want him to proceed further like this. Whatever charge is to be made against me, let him make. I will answer. If I am found guilty of it, I am asking the Minister in charge to hold an enquiry. If anything is against me, I am prepared to take any punishment.

ಶ್ರೀ ಕೆ. ಎನ್. ವೀರಪ್ಪಗೌಡ.—ನಾನು ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಮಾತನಾಡಿದ್ದು. ನೀವು ಅಲ್ಲಿಗೆ ಹೋದಾಗ ಯಾವ ರೀತಿ ನಡೆದಿದೆ ಎಂದು ಹೇಳಿವೆ. ಅವರು ಅಲ್ಲಿ ಇಲ್ಲದೇ ಇದ್ದಾಗ ಪರ್ಸನಲ್ ಆಗಿ ಏನು ಮಾಡಿದರು ಎಂತ ಹೇಳಿಲ್ಲಾ ಅಲ್ಲಿ ಇದ್ದಾಗ..........

Sri H. SIDDAVEERAPPA.—In fact I did not take notice of it. The other day he made some charges against me and today he is again raking it up. Like a gentleman I want the Hon'ble member to say specifically and categorically what the charge against me is. If I am found guilty, I am prepared to take punishment.

† ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ (ಬ್ರಹ್ಮಾವರ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿದ ಕೃಷಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ತಾತ್ವಿಕವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ನಮ್ಮ ಸರಕಾರವು ಕೃಷಿಯ ಅಭಿವೃದ್ಧಿಗೆ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಪ್ರಾಧಾನ್ಯತೆ ಕೊಡದೆ ಕೇವಲ ನಷ್ಟವನ್ನು ಮಾತ್ರ ತರುವ ಸಾರ್ವಜನಿಕ ವಿಭಾಗದ ಭಾರಿ ಉದ್ಯಮಗಳಲ್ಲಿ ಹೇರಳ ಹಣವನ್ನು ತೊಡಗಿಸಿದ ಪರಿಣಾಮದಿಂದಾಗಿ ಇಂದು ನಮ್ಮ ರಾಜ್ಯವು ತೀವ್ರ

ಆರ್ಥಿಕ ಮುಗ್ಗಟ್ಟನ್ನು ಎದುರಿಸುವಂತಾಗಿದೆ. ಕೃಷಿ ಕ್ಷೇತ್ರಕ್ಕೆ ಹಣವನ್ನು ಒದಗಿಸಲು ನಮ್ಮ ಬೊಕ್ಕಸ ಬರಿದಾಗಿದೆ. ಆಹಾರ ಧಾನ್ಯಗಳನ್ನು ಇತರ ರಾಜ್ಯಗಳಿಂದ ಆಯಾತ ಮಾಡಿಕೊಳ್ಳುವ ದುಸ್ಥಿತಿಗೆ ನಾವು ಬಂದಿದ್ದೇವೆ.

ಸರ್ಕಾರವೇನೋ ತನ್ನ ಧೋರಣೆಗಳನ್ನು ಸಮರ್ಥಿಸಿಕೊಳ್ಳುತ್ತಾ ಇಂದಿನ ದುಸ್ಥಿತಿಗೆ (1) ಪ್ರಕೃತಿಯ ವಿಕೋಪ, (2) ಏರುತ್ತಿರುವ ಜನಸಂಖ್ಯೆ (3) ಚೀನಾ, ಪಾಕೀಸ್ತಾನಗಳೊಂದಿಗೆ ಘಟಿಸಿದ ಯುದ್ಧ — ಮೊದಲಾದ ಕಾರಣಗಳನ್ನು ಕೊಡುತ್ತಿದ್ದರೂ ಇವೆಲ್ಲಕ್ಕೂ ಮಿಗಿಲಾಗಿ ಸರ್ಕಾರವೇ ನಿರ್ಮಿಸಿದ ಕಾರಣಗಳು ಬೇರೆಯೇ ಇವೆ.

(1) ಪ್ರಥಮದಲ್ಲಿ ನಮ್ಮ ದೋಷಪೂರಿತ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳು. (2) ಅದಕ್ಕನುಸರಿಸಿ ಬಂದ ಅತಿ ಪ್ರಸರಣಯುಕ್ತವಾದ ಅಸ್ಥಿರ ಆರ್ಥಿಕ ಧೋರಣೆ. (3) ಇದರಿಂದ ಏರುತ್ತಿರುವ ಬೆಲೆಗಳನ್ನು ತಡೆಯಲು ಹಾಕಿದ ಕಂಟ್ರೋಲುಗಳು. (4) ಅದನ್ನು ಹಿಂಬಾಲಿಸಿ ಕೊಂಡಿರುವ ಬ್ಲಾಕ್ ಮಾರ್ಕೆಟ್, ಹೋರ್ಡಿಂಗ್ ಇತ್ಯಾದಿ. (5) ಇದಲ್ಲದೆ ಕೃಷಿಕ್ಷೇತ್ರದಲ್ಲಿ ಗೊಂದಲವನ್ನುಂಟುಮಾಡುವ ಭೂಸಂಬಂಧದ ಕಾನೂನುಗಳು. (6) ಅಲ್ಲದೆ ಭೂರಹಿತರಿಗೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ಹಂಚಲು ಸರ್ಕಾರದ ಅಸಡ್ಡೆ. (7) ರೈತನ ಹಿತವನ್ನು ಸಾಧಿಸಲು ಬಯಸಿ ನಿರ್ಮಿಸಿದ ಸಹಕಾರಿ ರಂಗದ ಅಸಮರ್ಪಕ ಸೇವೆ. (8) ಕೃಷಿಯ ಬಗ್ಗೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ಉಂಟಾಗುವ ವಿಳಂಬ. (9) ಕೃಷಿಕನಿಗೆ ಬೇಕಾದ ಸಾಮಾಗ್ರಿಗಳ ಉತ್ಪಾದನೆಯ ಕಡೆಗೆ ಸಾಕಷ್ಟು ಗಮನ ಈ ಹಿಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಕೊಡದೆ ಇರುವಿಕೆ. (10) ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೆಲೆ ನಿಂತಿರುವ ಜಡತ್ವನ್ನು ಹೋಗಲಾಡಿಸು ವಲ್ಲಿ ಮಂತ್ರಿಸಂಪುಟದ ವಿಫಲತೆ. ಇವುಗಳು ಮಾನವ ನಿರ್ಮಿತ ಸಮಸ್ಯೆಗಳಾಗಿದ್ದು ಇವಕ್ಕೆ ಸರ್ಕಾರವೇ ಹೊಣೆಯಾಗಿದ್ದು ಇವುಗಳ ಪರಿಣಾಮವನ್ನು ವಿವರವಾಗಿ ಹೇಳಲು ಈಗ ಸಮಯಾವ ಕಾಶವಿಲ್ಲ.

ನಾಲ್ಕನೆಯ ಯೋಜನಾವಧಿಯಲ್ಲಿ ರಾಜ್ಯ ಸರ್ಕಾರವು ರೈತನಿಗೆ ಕೊಡಬಯಸಿದ ವಿವಿಧ ಸವಲತ್ತು ಹೇಗೆ ಕನ್ನಡಿ ಒಳಗಿನ ಗಂಟಾಗಿ ಉಳಿದು ಕೃಷಿಕನಿಗೆ ಸಾಕಷ್ಟು ಪ್ರಮಾಣದಲ್ಲಿ ಮುಟ್ಟು ವುದಿಲ್ಲ ಎಂಬುದನ್ನು ಸ್ವತಃ ಕೃಷಿ ಕಟುಂಬದಲ್ಲಿ ಜನಿಸಿದ. ನನಗೆ ಒದಗಿದ ಕಹಿ ಅನುಭವದಿಂದ ಹೇಳಬಯಸುತ್ತೇನೆ.

ಈಗ ಎರಡು ವರ್ಷಗಳ ಕೆಳಗೆ ನಮಗೆ ಒಂದು ಕುಬೇಟಾ ಪವರ್ ಟಿಲ್ಲರ್ ನಮ್ಮ ಒಬ್ಬ ಕಾಂಗ್ರೆಸ್ ಸಂಬಂಧಿಗರ ದಯಿಯಿಂದ ಅಲಾಟ್ ಆಗಿತ್ತು. ಇದನ್ನು ಪಡೆಯಲು ನನ್ನ ಹಿರಿಯರು ಕಡಿಮೆ ಪಕ್ಷ ನಮ್ಮ ಹಳ್ಳಿಯಿಂದ 40 ಮೈಲು ದೂರದಲ್ಲಿರುವ ಮಂಗಳೂರು ಶಹರಕ್ಕೆ 3 ಬಾರಿ ಯಾತ್ರೆಮಾಡಿ ವಿಫಲರಾದರು. ಕೊನೆಗೆ ಒಬ್ಬರು ಪುಣ್ಯಾತ್ಮರ ಸಲಹೆಯ ಮೇರೆಗೆ ಒಬ್ಬ ಗಣ್ಯ ಕಾಂಗ್ರೆಸ್ ಪ್ರಭೃತಿಗಳನ್ನು ಈ ವಿಚಾರದಲ್ಲಿ ನೋಡಬೇಕಾಯ್ತು. ನಮ್ಮ ಹಿರಿಯರ ಸಹಪಾಠಿ ಗಳಾಗಿದ್ದ ಸದ್ರಿ ವ್ಯಕ್ತಿ "ಓಹೋ, ಈಗ ನಾನ್ಯಾರೆಂದು ಗೊತ್ತಾಯಿತೆ!" ಎಂದು ತನ್ನ ದೊಡ್ಡಸ್ತಿಕೆಯನ್ನು ಪ್ರದರ್ಶಿಸಿದ. ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಆಫೀಸರರಿಗೆ ತಮ್ಮ ದಿವ್ಯ ಹಸ್ತದಿಂದ ಒಂದು ಕಾಗದ ಕೊಟ್ಟರು. ದುರದೃಷ್ಟವಶಾತ್ ಆ ಪತ್ರದ ಉಪಯೋಗ ಪಡೆಯುವ ಮೊದಲೇ ಇನ್ನೊಬ್ಬ ಪುಢಾರಿಗಳ ದೆಸೆಯಿಂದ ಅತಿ ಪ್ರಯಾಸದಲ್ಲಾದರೂ ಪವರ್ ಟಿಲ್ಲರ್ ನಮಗೆ ಸಿಕ್ಕಿತು. ಆಗ ಸರ್ಕಾರದಿಂದ ಸಿಗುವ ಸವಲತ್ತನ್ನು ಪಡೆಯಲು ಈ ರಾಜಕೀಯ ವ್ಯಕ್ತಿಗಳ ಅಗತ್ಯ ಎಷ್ಟೆಂಬುದು ನಮಗೆ ಮನವರಿಕೆಯಾಯ್ತು.

ಪವರ್ ಟಿಲ್ಲರ್ ಹೇಗೂ ಸಿಕ್ಕಿತು. ಆದರೆ ಅದಕ್ಕೆ ಉಪಯೋಗಿಸುವ ಬ್ಲೇಡು ಸೆಟ್ಟುಗಳ ಪೈಕಿ 100ರಲ್ಲಿ ಕೇವಲ 80 ಬ್ಲೇಡುಗಳನ್ನು ಮಾತ್ರ ಪಾವತಿ ಮಾಡಲಾಯ್ತು. ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಎಷ್ಟು ಹೇಳಿಕೊಂಡರೂ ಪ್ರಯೋಜನವಾಗಿಲ್ಲ. ನೀವು ಎಲ್ಲಾ ಸಾಮಾಗ್ರಿ ಗಳು ಬಂತು ಎಂದು ಸಹಿ ಹಾಕಿಯಾಗಿದೆ, ಆದ್ದರಿಂದ ನಿಮಗೆ ಕಾನೂನು ಪ್ರಕಾರ ಹಕ್ಕಿಲ್ಲ ಎಂದು ಹೇಳಿದರು ನಮಗೆ ತಿರುಪತಿ ನಾಮವಾಯ್ತು.

ಅಂತೂ ಟಿಲ್ಲರ್ ನಮ್ಮ ಗದ್ದೆಗೆ ಬಂದು ಮುಟ್ಟಿತು. ಆದರೆ ಅದು ನಡೆಯಬೇಕಾದರೆ ಸೀಮೆ ಎಣ್ಣೆಯ ಅವಶ್ಯಕತೆ ಇತ್ತು. ಪಾಕೀಸ್ಥಾನಯುದ್ಧ ಮುಕ್ತಾಯದ ವೇಳೆಯಲ್ಲಿ ಸೀಮೆ ಎಣ್ಣೆ ಬಹಳ ತುಟ್ಟಿ ಇತ್ತು. ಕೃಷಿಯ ಬಗ್ಗೆ ಸೀಮೆ ಎಣ್ಣೆ ಬೇಕೆಂದು ಅರ್ಜಿಯ ಮೇಲೆ ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಬರೆದುದಾಯಿತು. ಅರ್ಜಿಗೆ ಉತ್ತರವೂ ಇಲ್ಲ, ಎಣ್ಣೆ ಬರಲೇ ಇಲ್ಲ. ಹಾಗೂ, ಹೀಗೂ, ಅಲ್ಲಿಷ್ಟು ಇಲ್ಲಿಷ್ಟು ಎಣ್ಣೆ ಒಟ್ಟು ಮಾಡಿ ಸಾಗುವಳಿ ಮುಗಿಸುವಾಗ ಒಬ್ಬರು ಫುಡ್

(ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ)

ಏನ್ಸ್‌ಪೆಕ್ಟರ್‌ವರು ಬಂದು, ಏನಯ್ಯ, ಇಷ್ಟು ಎಣ್ಣೆ ನಿಮಗೆ ಎಲ್ಲಿಂದ ಬಂತಯ್ಯಾ, ನಿಮ್ಮ ಮೇಲೆ ಏಕೆ, ಡಿ.ಐ.ಆರ್. ಜಾರಿ ಮಾಡಬಾರದು ಎಂದು ಗದರಿಸಿದರು, ಇದು ಕೃಷಿಗೆ ಸಿಗುತ್ತಿರುವ ಪ್ರೋತ್ಸಾಹ.

ಟಿಲ್ಲರಿನ ಕತೆ ಇಲ್ಲಿಗೆ ಮುಗಿಯಲಿಲ್ಲ. ಎರಡನೇ ಸಾಗುವಳಿಯ ಸಮಯದಲ್ಲಿ ಏನೋ ಸಣ್ಣ ಪಾರ್ಟು ಕೆಟ್ಟುಹೋಯಿತು. ಟಿಲ್ಲರ್ ಜಪಾನಿನಿಂದ ಆಯಾತಮಾಡಿದ ಸರ್ಕಾರಕ್ಕೆ ಸ್ಪೇರ್ ಪಾರ್ಟುಗಳನ್ನು ಆಯಾತಮಾಡಬೇಕೆಂದು ಜ್ಞಾನವಿಲ್ಲ. ಸ್ಪೇರ್ ಪಾರ್ಟ್ಸ್‌ಗಳಿಗೆ ಕೃಷಿ ಇಲಾಖೆಗೆ ಬರೆದರೆ ಪ್ರಯೋಜನವಾಗಿಲ್ಲ. ನಮ್ಮ ಟಿಲ್ಲರ್ ವಿಶ್ರಾಂತಿ ಪಡೆಯಿತು. ನಮಗಾದ ನಷ್ಟಕ್ಕೆ ಯಾರು ಹೊಣೆ ಸ್ವಾಮಿ ?

ನಮ್ಮ ಗ್ರಾಮದಲ್ಲಿ ಹೇರಳ ಹಣ ಖರ್ಚುಮಾಡಿ ಒಂದು ಸಾಲ್ಟ್ ವಾಟರ್ ಡ್ಯಾಮ್ ಆಗಿದ್ದು ಅದರಲ್ಲಿ ಉಪ್ಪು ನೀರು ನಿರಾತಂಕವಾಗಿ ಮೇಲಕ್ಕೆ ಹರಿಯುತ್ತದೆ. ಆದಿರಲಿ ಸಬ್ಸಿಡಿ ರೇಟಿನಲ್ಲಿ ಪಂಪುಸೆಟ್ಟು ಸಿಗುತ್ತದೆಂದು ಕೇಳಿ ನಮ್ಮ ಊರಿನ ಕೋ-ಆಪರೇಟಿವ್ ಸೊಸೈಟಿಯವರು ಸಂಬಂಧ ಪಟ್ಟ ಬಿ.ಡಿ.ಒ.ರವರನ್ನು ವಿನಂತಿಸಿಕೊಂಡರು. ಈ ಮಧ್ಯೆ ರೈತರೆಲ್ಲಾ ಉತ್ಸಾಹದಿಂದ ತಮ್ಮ ಗದ್ದೆಗಳನ್ನು ಮೂರನೇ ಬೆಳೆಯ ಬಗ್ಗೆ ಉತ್ತಿದ್ದೇ ಉತ್ತಿದ್ದು, ನಮ್ಮ ಸೊಸೈಟಿಗೆ ತೆಗೆದಿರಿಸಿದ ಪಂಪು ಸೆಟ್ಟು ವರ್ಕ್ ಆಗುವುದಿಲ್ಲ ಎಂದು ಬಿ.ಡಿ.ಒ. ವಿಷಾದದಿಂದ ಬಹು ತಡವಾಗಿ ಆದರೂ ತಿಳಿಸಿದರು. ಯಾವುದೋ ಮಂತ್ರಿವರ್ಯರ ಕೃಪೆಗೆ ಪಾತ್ರನಾದ ಡೀಲರ್‌ನಿಂದ ಸರ್ಕಾರಕ್ಕೆಂದು ಸ್ಪೆಷಲ್ ಆಗಿ ಸರಬರಾಜು ಆಗಿರಬೇಕು, ಈ ಪಂಪು ಸೆಟ್ಟು.

ನಮ್ಮ ಗ್ರಾಮಕ್ಕೆ ಇಲೆಕ್ಟ್ರಿಸಿಟಿ ಬಂದಿದ್ದು ನಮ್ಮ ಪರಿಸರಕ್ಕೆ ಬರಬೇಕಾದರೆ ಒಂದುವರೆ ಮೈಲು ದೂರ ಆಗುತ್ತದೆ. ಈ ಬಗ್ಗೆ ಬೇಕಾದ 50 ಹಾರ್ಸ್‌ಪವರುಗಳ ಬೇಡಿಕೆಯನ್ನು ಸಂಗ್ರಹಿಸಿ ಐದು ವರ್ಷಗಳ ಕೆಳಗೆ ಅರ್ಜಿಯ ಫೀಜು ಸಮೇತ ಕಳಿಸಿದ್ದಾಯಿತು. ಐದು ವರ್ಷದ ಸತತ ಪ್ರಯತ್ನದ ನಂತರ ಅದು ಈಗ ಶಿವಮೊಗ್ಗ ಡಿವಿಜನಿನ ಆಫೀಸಿನಲ್ಲಿ ಕೊಳತು ನಾರುತ್ತಿದೆ ಎಂದು ತಿಳಿದುಬಂತು. ಯಾರೋ ಸ್ನೇಹಿತರು ಹೇಳಿದರು, ಒಂದು ಸಾವಿರ ರೂಪಾಯಿ ಖರ್ಚು ಮಾಡಲು ಸಾಧ್ಯ ಇದ್ದರೆ, ನಾಳೆ ಬೆಳಗ್ಗೆ ಇಲೆಕ್ಟ್ರಿಸಿಟಿ ತರಿಸುತ್ತಾರಂತೆ ಎಂದು. ಆದರೆ ನಮ್ಮ ಜನ ದಕ್ಷಿಣೆ ಕೊಡುವುದರಲ್ಲಿ ನಿಧಾನ. ಆ ಕಾರಣದಿಂದ ನಮಗೆ ಈವರೆಗೆ ಇಲೆಕ್ಟ್ರಿಸಿಟಿ ಸೊನ್ನೆ.

ಇನ್ನು ನಮ್ಮಲ್ಲಿ ನೂರಕ್ಕೆ ಎಂಬತ್ತು ಮಂದಿ ಚಾಲಗೇಣಿ ಸಾಗುವಳಿಯವರಿದ್ದಾರೆ. ಸರ್ಕಾರದ ಸುಲಭ ಕಂತಿನ ಸಾಲದ ಮುಖಾಂತರ ಸಿಗುವ ಈ ಪಂಪುಸೆಟ್ಟು ಚಾಲಗೇಣಿ ಒಕ್ಕಲುಗಳಿಗೆ ಭದ್ರತೆ ಸಾಲದೆಂಬ ಕಾರಣದಿಂದ ಕೊಡುತ್ತಿಲ್ಲ. ಉಳುವವನಿಗೆ ಹೊಲವನ್ನು ಕೊಡುವೆವು ಎಂದು ಹೇಳಿ ಕೊಳ್ಳುವ ಸರ್ಕಾರಕ್ಕೆ ಚಾಲಗೇಣಿ ಒಕ್ಕಲುಗಳಿಗೆ ಪಂಪುಸೆಟ್ಟುಗಳನ್ನು ಒದಗಿಸಲು ಇರುವ ಕಾನೂನಿನ ಅಡಚಣೆಗಳನ್ನು ನಿವಾರಿಸಲು ಆಗಿಲ್ಲ. ಹಾಗಾದರೆ, ಈ ಯೋಜನೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಹುದು ?

ನಾನು ಈಗಾಗಲೇ ಹೇಳಿದ ಕೆಲವು ವಿಚಾರಗಳು ಕೇವಲ ನಮ್ಮ ಹಳ್ಳಿಗೆ ಸಂಬಂಧಿಸಿದ ವಿಚಾರಗಳಾಗಿದ್ದರೂ ಇದು ನಮ್ಮ ರಾಜ್ಯದ ಲಕ್ಷಗಟ್ಟಲೆ ರೈತರ ನಿತ್ಯದ ಸಮಸ್ಯೆಯಾಗಿದೆ. ಇದನ್ನು ಹೇಳುತ್ತಾ ಹೋದರೆ ದೊಡ್ಡ ಪುಸ್ತಕವಾಗಬಹುದು. ಇದನ್ನು ದಕ್ಷ ಆಡಳಿತೆ ತಕ್ಕ ಮಟ್ಟಿಗೆ ನಿವಾರಿಸಲು ಸರ್ಕಾರದ ಧೋರಣೆಯಲ್ಲಿ ಮೂಲ ಭೂತಹಾಗೂ ವ್ಯಾಪಕ ಬದಲಾವಣೆಯಾಗ ಬೇಕಾಗಿದೆ.

ಇಂದು ಸರ್ಕಾರ ರೈತನಿಗೆ ಪ್ರೇರಕ ಶಕ್ತಿಯಾಗಿಲ್ಲ ಬದಲಿಗೆ ಮಾರಕ ಶಕ್ತಿಯಾಗಿದೆ. ಲೇವಿ, ಡಿಕ್ಲರೇಶನ್ ಮುಂತಾದುವುದಕ್ಕೆ ಸಂಬಂಧಪಟ್ಟ ಕಾನೂನುಗಳು ರೈತನನ್ನು ಅನುದಿನವೂ ಕಾಡುತ್ತವೆ. ಆತನನ್ನು ಶಾಂತಿಯಲ್ಲಿ ಜೀವಿಸದಂತೆ ಮಾಡಿವೆ.

1. ಇವುಗಳನ್ನು ಹೇಗೆ ನಿವಾರಿಸಬಹುದು ? ರೈತನ ದೈನಂದಿನ ಜೀವನದಲ್ಲಿ ಸರ್ಕಾರ ಪ್ರವೇಶಿಸುವ ಎಲ್ಲಾ ಧೋರಣೆಗಳನ್ನು ಸರ್ಕಾರ ಹಂತ ಹಂತವಾಗಿ ಕೈಬಿಡಬೇಕು (2) ಆಧುನಿಕ ಕೃಷಿ ಕ್ರಮಗಳನ್ನು ಮಾದರಿಗಾಗಿ ಗ್ರಾಮಾಂತರಗಳಲ್ಲಿ ಪ್ರಚಾರ ಮಾಡಬೇಕು (3) ಉತ್ತಮ ಬೀಜ ಗಳನ್ನು ಕೃತಕ ಗೊಬ್ಬರಗಳನ್ನೂ ಬೇಡಿಕೆಗೆ ಸರಿಯಾಗಿ ಪೂರೈಕೆ ಮಾಡಬೇಕೆಂದು, (4) ತಕ್ಕ ಕಾಲದಲ್ಲಿ ಬೀಜಗಳ ಮತ್ತು ಕೃತಕ ಗೊಬ್ಬರಗಳ ರೂಪದಲ್ಲಿ ರೈತನಿಗೆ ಸಹಕಾರಿ ಸಂಘಗಳು ಸುಲಭ ಕಂತುಗಳ ಪಾವತಿಯ ಶರ್ತದಲ್ಲಿ ಸಾಲವನ್ನು ಕೊಡಬೇಕು. (5) ರೈತನ ಉಪಯೋಗ

ಸರ್ವಸಾಮಗ್ರಿಗಳ ಉತ್ಪಾದನೆಗೆ ಖಾಸಗೀ ಅಥವಾ ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. (6) ಸಾಧ್ಯವಿದ್ದಷ್ಟು ಸಣ್ಣ ನೀರಾವರಿ ಯೋಜನೆಗಳನ್ನು ರಾಜಕೀಯ ಒತ್ತಡಕ್ಕೆ ಬಲಿಯಾಗದೆ ಅವಶ್ಯಕತೆ ಮತ್ತು ಸಾಧ್ಯತೆಗೆ ಅನುಗುಣವಾಗಿ ಹೆಚ್ಚಿನ ಮಟ್ಟದಲ್ಲಿ ಕೈಕೊಳ್ಳಬೇಕು. (7) ಕೊನೆಯದಾಗಿ ಎಲ್ಲಾ ರೀತಿಯ ವಲಯ ಪದ್ಧತಿ ಕಂಟ್ರೋಲುಗಳನ್ನು ಹಂತ ಹಂತವಾಗಿ ತೆಗೆದುಹಾಕಬೇಕು. (8) ಸಾಮಾನ್ಯ ರೈತನಲ್ಲಿ ದೇಶಕ್ಕಾಗಿ ಹೆಚ್ಚು ಬೆಳೆಯಬೇಕೆಂಬ ಆದರ್ಶವನ್ನು ನಿರೀಕ್ಷಿಸುವುದು ಅವ್ಯವಹಾರವಾಗುತ್ತದೆ. ಆತ ತನ್ನ ಲಾಭಕ್ಕಾಗಿ ಮಾತ್ರ ಬೆಳೆಯುತ್ತಾನೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕಾಗಿ ಸರ್ಕಾರದ ಆಯಾತ ನಿರ್ಯಾತ ಧೋರಣೆಯು ರೈತನಿಗೆ ಆದಷ್ಟು ಉತ್ತಮ ಲಾಭವನ್ನು ಗಳಿಸುವ ನಿಟ್ಟಿನಲ್ಲಿರಬೇಕು. ರೈತನಿಗೆ ಯೋಗ್ಯ ಪ್ರತಿಫಲ ಸಿಗುವಂತಿದ್ದರೆ ಮಾತ್ರ ಆತ ಬೆಳೆದಾನು ನಮ್ಮ ದೇಶ ಸುಭಿಕ್ಷ ಕಂಡೀತು.

ಈ ಎರಡು ಮಾತುಗಳನ್ನು ಈ ಘನ ಸಭೆಯಲ್ಲಿ ಆಡಲು ನನಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಪೂಜ್ಯರಾದ ಮತ್ತು ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಪ್ಪನವರು ತಂದಿರುವ ಡಿಮ್ಯಾಂಡ್ ಗಳನ್ನು ಸ್ವಾಗತಿಸಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇವತ್ತಿನ ದಿವಸ ನಮ್ಮ ಇಂಡಿಯಾ ದೇಶಕ್ಕೆ ಶತೃಗಳು ಮೂರು ಜನ ಇದ್ದಾರೆ. ಒಂದನೆಯ ಶತ್ರು ಚೈನಾ ದೇಶದವರು, ಎರಡನೆಯ ಶತೃ ಪಾಕಿಸ್ತಾನದವರು, ಮೂರನೆಯ ಶತೃ ಪ್ರತಿಯೊಂದು ಮನೆಯಲ್ಲೂ ಹಸಿವಿನಿಂದ ಕಾಡುತ್ತಿರುವ ಆಹಾರ. ಈ ಮೂರು ಶತ್ರುಗಳನ್ನು ಸೆದೆಬಡಿಯಬೇಕಾದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಖಾತೆ ತೆಗೆದುಕೊಂಡಿರುವುದು ನಮ್ಮ ಭಾಗ್ಯವೆಂದು ಹೇಳಬೇಕು. ಚೀನಾ ಮತ್ತು ಪಾಕಿಸ್ತಾನಗಳನ್ನು ಸದೆಬಡಿಯಲು ಶ್ರೀ ಚವಾಣ್ ಅವರು ಮಿಲಿಟರಿ ಉಪಯೋಗಿಸುತ್ತಾರೆ. ನಮ್ಮ ರಾಜ್ಯದಲ್ಲಿ 40 ಲಕ್ಷ ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. 20 ಲಕ್ಷ ಜನರು ವ್ಯವಸಾಯದಲ್ಲಿ ಕೂಲಿ ಮಾಡುವವರು ಇದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮೈಸೂರಿನ ಶ್ರೀ ಚವಾಣ್‌ರಂತೆ ಇದ್ದಾರೆಂದು ಹೇಳಬಹುದು. ಎಲ್ಲಾ ರೈತರಿಗೂ ಜಮೀನಿನಲ್ಲಿ ಯುದ್ಧ ಮಾಡುವ ಸಲಕರಣೆಗಳನ್ನು ಒದಗಿಸುವುದು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಕೆಲಸವಾಗಿದೆ. ನಮಗೆ ಬೇಕಾಗಿರುವುದು ಅಧುನಿಕವಾದ ಬೀಜ, ಗೊಬ್ಬರ ಮತ್ತು ನೀರಾವರಿ. ನಾನು ಹೇಳಿದ 40 ಲಕ್ಷ ಮತ್ತು 20 ಲಕ್ಷ ಜನರೇನಿದ್ದಾರೆ, ಅವರಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸಿಕೊಟ್ಟರೆ ಅವರು ಭೂಮಿಯ ಮೇಲೆ ಯುದ್ಧಮಾಡಿ ಪ್ರತಿಯೊಂದು ಮನೆಯಲ್ಲಿರುವ ಹಸಿವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಪಡುತ್ತಾರೆ. ನಂತರ ನಾವು ನಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ಅನ್ನದಾನಕ್ಕಿಂತ ಬೇರೆ ದಾನವಿಲ್ಲವೆಂದು ಬಲ್ಲವರು ಹೇಳಿದ್ದಾರೆ. ಹಸಿದವರಿಗೆ ಅನ್ನ ಕೊಡುವ ವಿಚಾರವನ್ನು ಪಾರ್ಟಿ ವೈಷಮ್ಯದಿಂದ ನೋಡಬಾರದು. ದೇಶದ ಹಿತವನ್ನು ಎಲ್ಲರೂ ನೋಡಬೇಕು. ನಮ್ಮ ಶ್ರೀ ಸಿದ್ಧವೀರಪ್ಪನವರು ನಿನ್ನೆ ಮಾತನಾಡುತ್ತಾ ಹೇಳಿದರು, ನಮ್ಮ ಮುಖ್ಯ ಮಂತ್ರಿಗಳು ಆದಿಶೇಷನಂತೆ ಎಲ್ಲಾ ಪ್ರಮುಖ ಖಾತೆಗಳನ್ನು ಹೊತ್ತುಕೊಂಡಿದ್ದಾರೆಂದು. ಈ ಕಾರಣದಿಂದ ವ್ಯವಸಾಯದ ಇಲಾಖೆಗೆ ಹೆಚ್ಚು ಗಮನ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಈ ಪ್ರಪಂಚದಲ್ಲಿ ಭೂಮಿ ಎಂಬುದು ದೊಡ್ಡದು ಎಂದು ನಾನು ಹೇಳುತ್ತೇನೆ. ಅದನ್ನು ಆದಿಶೇಷನು ಹೊತ್ತಿದ್ದಾನೆ. ಆದಿಶೇಷನಿಗಿಂತ ದೊಡ್ಡವನು ಎಂದರೆ ಈಶ್ವರ. ಈಶ್ವರನಿಗಿಂತ ದೊಡ್ಡದು ಎಂದರೆ ಕೈಲಾಸ. ಕೈಲಾಸಕ್ಕಿಂತಲೂ ರಾವಣ ದೊಡ್ಡವನು, ರಾವಣನಿಗಿಂತ ವಾಲಿ ದೊಡ್ಡವನು, ಈ ವಾಲಿಗಿಂತ ದೊಡ್ಡವನು ಎಂದರೆ ಶ್ರೀರಾಮನ ಬಾಣ. ಶ್ರೀರಾಮನ ಬಾಣಕ್ಕಿಂತ ಶ್ರೀರಾಮ ದೊಡ್ಡವನು, ಶ್ರೀರಾಮನಿಗಿಂತ ದೊಡ್ಡವನು ಯಾರು ಅನ್ನದಾನ ಮಾಡುತ್ತಾರೋ ಅಂಥವರು ನನ್ನ ಹೃದಯದಲ್ಲಿರುತ್ತಾರೆಂದು ದಶಾವತಾರಗಳಲ್ಲಿ ಒಂದು ಅವತಾರ ಪುರುಷನಾದ ಶ್ರೀರಾಮನು ಹೇಳಿದ್ದಾನೆ. ಹಿಂದಿನ ಕಾಲದಲ್ಲಿ ಅನ್ನದಾನ ಮಾಡುವುದಕ್ಕೆ ನಮ್ಮ ಇಂಡಿಯಾ ದೇಶ ಹೆಸರುವಾಸಿಯಾಗಿತ್ತು. ಈ ವ್ಯವಸಾಯ ಇಲಾಖೆಯನ್ನು ನಮ್ಮ ಮುಖ್ಯ ಮಂತ್ರಿಗಳು ವಹಿಸಿಕೊಂಡಿರುವುದು ನಮ್ಮ ಕರ್ನಾಟಕ ದೇಶಕ್ಕೆ ಒಂದು ಶುಭ ಶಕುನವೆಂದು ಹೇಳಬಹುದು. ಈ ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುವುದಾಗಲೀ, ವಿಲೇ ಮಾಡುವುದಾಗಲೀ, ತುಂಬ ಕಷ್ಟವಿದೆ. ಇದನ್ನು ನೋಡಿಕೊಳ್ಳಲು ಅಧಿಕಾರಿಗಳಿದ್ದಾರೆ. ಅಧಿಕಾರಿಗಳು ಹೇಳುವ ಅಂಕಿಸಂಖ್ಯೆಗಳಿಂದ ಸರ್ಕಾರದವರು ಯಾವುದನ್ನೂ ತೀರ್ಮಾನ ಮಾಡಬಾರದು. ಈ ವಿಚಾರದಲ್ಲಿ ವ್ಯವಸಾಯದಲ್ಲಿ ಪರಿಣತರಾದವರನ್ನು ಕೇಳಿ ತಿಳಿದುಕೊಳ್ಳಬೇಕು. ಅವರ ಸಹಕಾರವನ್ನು ತೆಗೆದುಕೊಳ್ಳಬೇಕು. ಎಕರೆಗೆ ಎಷ್ಟು ಧಾನ್ಯವಾಗುತ್ತದೆ ಯೆಂಬುದು ಇವರಿಗೆ ಚೆನ್ನಾಗಿ ತಿಳಿದಿರುತ್ತದೆ. ಅಧಿಕಾರಿಗಳಿಗೆ ಇವೆಲ್ಲಾ ತಿಳಿದಿರುವುದಿಲ್ಲ. ಬೀಜ, ಗೊಬ್ಬರವನ್ನು ವಿಲೇ ಮಾಡುವಾಗ ಒಕ್ಕಲುತನದಲ್ಲಿ ಅನುಭವವಿರುವವನ್ನು ಕೇಳಿ ಮಾಡಬೇಕು.

(ಶ್ರೀ ಎ. ಮುನಿಯಪ್ಪ)

ಇಲ್ಲದಿದ್ದರೆ ಆಹಾರಧಾನ್ಯಗಳನ್ನು ಖರೀ ಮಾಡುವುದು ಬಹಳ ಕಷ್ಟವಾಗುತ್ತದೆ. ಪಂಚಾಯತ್ ರಾಜ್ಯದ ಆಧಾರದ ಮೇಲೆ ರಾಜ್ಯವನ್ನು ಕಟ್ಟಬೇಕೆಂದು, ಪಂಚಾಯತ್ ರಾಜ್ಯವನ್ನು ಸ್ಥಾಪವೆ ಮಾಡುತ್ತಾ ಇರುವ ನೀವು, ಆಯಾಯ ಪಂಚಾಯಿತಿಗಳಿಗೆ ಎಷ್ಟೆಷ್ಟು ಬೀಜ, ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ ಬೇಕು ಯಾವ ಯಾವ ರೀತಿ ಉಪಕರಣಗಳು ಬೇಕೋ ಅದನ್ನೆಲ್ಲಾ ಒದಗಿಸಬೇಕು. ಎಂದು ಸಲಹೆ ಮಾಡುತ್ತೇನೆ. ಸಾರಂಗಧರ ತನ್ನ ಮಗನಿಗೆ ಹೆಣ್ಣು ನೋಡುವುದಕ್ಕೆ ಪ್ರಯತ್ನ ಪಟ್ಟಾಗ ಎಲ್ಲಾ ಹೆಣ್ಣುಗಳು ತನಗೇ ಬೇಕೆಂದು ತಂದೆ ಹೇಳಿದನಂತೆ. ಅದರಂತೆ ಶ್ರೀ ವಾಟಾಳ್ ನಾಗರಾಜ್ ಅವರು ಮುಖ್ಯಮಂತ್ರಿಗಳ ಸ್ಥಾನವನ್ನು ಆರು ತಿಂಗಳು ಕೊಟ್ಟರೆ ಎಲ್ಲವನ್ನೂ ಸರಿ ಮಾಡುತ್ತೇನೆಂದು ಹೇಳಿದರು. ಅವರು ಕೇಳಿದರೆ ಕೊಡುವುದಕ್ಕಾಗುತ್ತದೆಯೇ? ಅವರು ಆಗುವುದಕ್ಕೆ ಸಾಧ್ಯವಿದೆಯೇ? ಮೊನ್ನೆ ಶ್ರೀ ರಾಮರಾಯರು ಮಾತನಾಡುವಾಗ ಆ ಸದಸ್ಯರು ಪೋಲೀಸ್ ಖಾತೆಯನ್ನು ನನ್ನ ಕೈಗೆ ಕೊಡಿ, ಆರು ತಿಂಗಳೊಳಗೆ ಇಡೀ ದೇಶವನ್ನು ಸುರಕ್ಷಿತವನ್ನಾಗಿ ಮಾಡುತ್ತೇನೆಂದು ಹೇಳಿದರು. ಅವರಿಗೆ ಮಂತ್ರಿಯಾಗಬೇಕೆನ್ನುವ ಒಂದು ಭ್ರಮೆಯಿರಬಹುದು. ಆ ರೀತಿ ಯೇನಾದರೂ ಅವರಿಗೆ ಮುಖ್ಯಮಂತ್ರಿ ಪದವಿ ಸಿಕ್ಕಿದರೆ ಹಿಂದೆ ರಾಜ್ಯವಾಳಿದ ಮಹಮದ್ ಬಿನ್ ತೊಗಲಕ್‌ನಂತೆ ರಾಜ್ಯವಾಳಬಹುದು. ದೆಹಲಿಯಿಂದ ದೇವಗಿರಿಗೆ ಅವನು ರಾಜಧಾನಿಯನ್ನು ಬದಲಾಯಿಸಿದ, ಹಾಗೂ ಜನರಿಗೆ ಬಹಳ ಕಷ್ಟವನ್ನು ಕೊಟ್ಟ. ಆ ರೀತಿ ಇವರ ಕೈಗೆ ರಾಜ್ಯಭಾರ ಸಿಕ್ಕಿದರೆ ಆಗಬಹುದೆಂದು ಕಾಣುತ್ತದೆ. ಇವರಿಗೆ ಮಂತ್ರಿ ಪದವಿ ಬೇಕೇ ಬೇಕಾದರೆ ನಾಗಾರಾಜ್ಯದಲ್ಲಿ ಒಂದು ಪ್ರತ್ಯೇಕವಾದ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ಇದ್ದಾರೆ. ಅಲ್ಲಿಗೆ ಇವರನ್ನು ಕಳುಹಿಸಿದರೆ ಜಾಗ್ರತೆ ಮುಖ್ಯ ಮಂತ್ರಿಯ ಪದವಿ ಸಿಗಬಹುದೆಂದು ಕಾಣುತ್ತದೆ. ಈ ವಿಚಾರದಲ್ಲಿ ಶ್ರೀಮಾನ್ ನಾಗರಾಜರಾಯರನ್ನು ಕಳುಹಿಸಿ ಪಾರ್ಟಿಯ ಹಿತದೃಷ್ಟಿಯಿಂದ ನೋಡಬೇಕೆಂದು ಕೋರುತ್ತೇನೆ.

ಇನ್ನು ಸರ್ಕಾರದವರು ಕೆರೆಗಳನ್ನು ಕಟ್ಟಿಸಲು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಕೆರೆ ಕಟ್ಟಿದ ಮೇಲೆ ಅದರ ಆಡಳಿತವನ್ನು ಒಬ್ಬ ನೀರುಗಂಟಿಯ ವಶಕ್ಕೆ ಬಿಡುತ್ತಾರೆ. ಅವನು ಯಾರು ನಾಲ್ಕಾಣೆ ಎಂಟಾಣೆ ಕೊಡುತ್ತಾರೋ ಅಂತಹವರಿಗೆ ಹೆಚ್ಚು ನೀರು ಬಿಡುತ್ತಾನೆ. ಈ ರೀತಿಯಾದರೆ ಆಹಾರವನ್ನು ಹೆಚ್ಚು ಬೆಳೆಯುವುದು ಕಷ್ಟವಾಗುತ್ತದೆ. ನೀರನ್ನು ಹಂಚುವಾಗ ಜವಾಬ್ದಾರಿಯಿಂದ ಮಾಡಬೇಕು. ಹಿಂದೆ ರಾಮ ಲಕ್ಷ್ಮಣ ಮತ್ತು ಸೀತೆ 14 ವರ್ಷ ವನವಾಸ ಮಾಡುವಾಗ ಅವರಿಗೆ ಯಾರೂ ಭಕ್ಷ ಭೋಜನಗಳನ್ನು ಮಾಡಿ ಕೊಡಲಿಲ್ಲ. ಪಾಂಡವರು 12 ವರ್ಷ ವನವಾಸ ಮಾಡುವಾಗ ಅವರಿಗೂ ಯಾರೂ ಭಕ್ಷ್ಯ ಭೋಜನಗಳನ್ನು ಮಾಡಿ ತೆಗೆದುಕೊಂಡು ಹೋಗಿ ಕೊಡಲಿಲ್ಲ. ಅವರಿಗೆ ಬರೀ ಹಣ್ಣು ಹಂಪಲು ಗೆಡ್ಡೆ ಗೆಣಸುಗಳೇ ಆಹಾರವಾಗಿತ್ತು. ಈಗ ಆಹಾರದ ವಿಚಾರದಲ್ಲಿ ಪರಿವರ್ತನೆಯಾಗಬೇಕು. ಎಲ್ಲರೂ ಸರಿಯಾದ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ; ಅದರ ಉತ್ಪತ್ತಿಯೂ ಸಹ ಹೆಚ್ಚಾಗಬೇಕಾಗಿದೆ. ಒಂದು ಕರೆಯಲ್ಲಿ ಒಂದು ಸಾವಿರ ಎಕರೆಗೆ ಆಗುವಷ್ಟು ನೀರು ಇದ್ದರೆ ಎರಡು ಸಾವಿರ ಎಕರೆಗೆ ನಾಟಿ ಹಾಕುತ್ತಾರೆ ಇನ್ನು 15 ದಿವಸಗಳಲ್ಲಿ ಬೆಳೆ ಬರುತ್ತದೆ ಎನ್ನುವಾಗ, ಸಾಕಾಗುವಷ್ಟು ನೀರು ಸಿಗದೆ ಬೆಳೆಯೆಲ್ಲವೂ ನಿರ್ನಾಮವಾಗುತ್ತದೆ. ಆದ್ದರಿಂದ ರೆವಿನ್ಯೂ ಇಲಾಖೆಯವರು ಮತ್ತು ಪಿ. ಡಬ್ಲ್ಯು. ಡಿ. ಇಲಾಖೆಯವರು ಎಲ್ಲಾ ಕೆರೆಗಳನ್ನು ಸರ್ವೆ ಮಾಡಿಸಿ, ಆ ಕೆರೆಯಲ್ಲಿರುವ ನೀರು ಎಷ್ಟು ಎಕರೆಗೆ ಸಾಕಾಗುತ್ತದೆ ಎಂಬುದನ್ನು ನೋಡಿ, ಅದರ ಪ್ರಕಾರ ನೀರನ್ನು ಹಂಚುವ ವ್ಯವಸ್ಥೆ ಮಾಢಬೇಕು ಮತ್ತು ಬೆಳೆ ಹೋಗದಂತೆ ಮುನ್ನೆಚ್ಚರಿಕೆಯಿಂದ ಮನಗಾಣಬೇಕು. ಈಗಿರುವ ಸಾಮಾನ್ಯ ಆಡಳಿತದಲ್ಲಿ ಲಂಚರುಷುವತ್ತು ಜಾಸ್ತಿಯಾಗಿದೆಯೆಂದು ಎದುರು ಪಕ್ಷದವರೂ ನಮ್ಮ ಪಕ್ಷದವರು ಎಲ್ಲರೂ ಹೇಳಿದ್ದಾರೆ. ಆದುದರಿಂದ ಜಾಗ್ರತೆಯಾಗಿ ಸಾರ್ವಜನಿಕ ಮುಖಂಡರು ಮತ್ತು ಸರಕಾರಿ ಅಧಿಕಾರಿಗಳು (ಸೆಮಿನಾರು) ಸೇರುವಂತೆ ಮಾಡಿ ಒಂದು ಸಮ್ಮೇಳನ ಜರುಗಿಸಿ ಸಾಮಾನ್ಯ ಆಡಳಿತದಲ್ಲಿ ಒಂದು ಬದಲಾವಣೆಯನ್ನು ಮಾಡಲು ಯೋಚನೆ ಮಾಡಬೇಕು. ಈಗಿರುವ ಪದ್ಧತಿಯಿಂದಲೇ ಈ ಅವ್ಯವಸ್ಥೆಗೆ ಕಾರಣವೆಂದು ಹೇಳುತ್ತೇನೆ.

7-00 P. M.

ನಮ್ಮ ಚಿಕ್ಕಬಳ್ಳಾಪುರದ ತಾಲ್ಲೂಕು ಮುದ್ದೇನಹಳ್ಳಿಯ ಸರ್. ಎಂ. ವಿಶ್ವೇಶ್ವರಯ್ಯನವರು ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಟ್ಟು ಅಲ್ಲಲ್ಲಿ ಸ್ಥಾಪಿಸಿದರು. ಅವರ ಜನ್ಮಸ್ಥಳವಾದ ಮುದ್ದೇನಹಳ್ಳಿಯಲ್ಲಿ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಪಾಲಿಟೆಕ್ನಿಕ್ ತೆರೆಯು

ತ್ತೇವೆ, ಒಂದು ಕೈಗಾರಿಕೆ ಸ್ಥಾಪಿಸುತ್ತೇವೆ ಎಂದು ಎಷ್ಟೋ ಸಲ ಶಾಸನಸಭೆಗಳಲ್ಲೂ ಮತ್ತು ಇತರ ಕಡೆಗಳಲ್ಲೂ ಹೇಳಿದ್ದಾರೆ. ಅದರಂತೆ ಮಾಡಿಲ್ಲ. ಖಂಡಿತವಾಗಿ ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಬೇಕು, ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸಬೇಕು, ಎಲ್ಲಾ ಒಂದೇ ಕಡೆ ಕೇಂದ್ರೀಕೃತವಾದರೆ ಕನ್ನಡ ಚಳುವಳಿಗಾರರಾದ ವಾಟಾಳ್ ನಾಗರಾಜ್‌ರವರಂತವರ ಗಲಾಟೆಯನ್ನು ತಡೆಯುವುದಕ್ಕಾಗುವುದಿಲ್ಲ, ಈಗ ಎಲ್ಲಾ ಕೈಗಾರಿಕೆಗಳೂ ಸಾಮಾನ್ಯವಾಗಿ ಬೆಂಗಳೂರಿನಲ್ಲೇ ಇವೆ, ಹುಟ್ಟು ಕಾರ್ಮಿಕರಿರುವ ಕಡೆಯೇ ವಾಟಾಳರ ಜನ್ಮಸ್ಥಾನ. ಆದುದರಿಂದ ವಿಕೇಂದ್ರೀಕರಣಮಾಡಬೇಕು. ಬಾಗೇಪಲ್ಲಿ ತಾಲ್ಲೂಕು ಆಂಧ್ರದ ಸರಹದ್ದಿನಲ್ಲಿದೆ, ಅಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ತಿರುಮಣಿ ಛಾನಲ್, ಪುವಲವಾರಪಲ್ಲಿಯ ಛಾನಲ್ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಹಣದ ಕೊರತೆಯಿಂದ ತೆಗೆದುಕೊಳ್ಳುವುದಕ್ಕಾಗಿಲ್ಲ, ಆ ಛಾನಲ್‌ಗಳಿಗೆ ಒಂದು ಲಕ್ಷದವರಿಗೆ ಖರ್ಚುಮಾಡಿದೆ. ಆಂಧ್ರ ಬಾರ್ಡರಿನಲ್ಲಿರುವ ಪ್ರದೇಶದಲ್ಲಿ ಅವು ಇರುವುದರಿಂದ ಒಂದು ವೇಳೆ ಛಾನಲ್ ಮಾಡಿದರೆ ಆಂಧ್ರ ಪ್ರದೇಶಕ್ಕೆ ಸೇರಿಹೋಗುವುದೇನೋ ಎಂಬ ಅನುಮಾನವಿದೆಯೋ ಏನೋ. ಅದರಿಂದ ಆ ಕೆಲಸ ಮಾಡಿಸಿಲ್ಲದಿರಬಹುದು. ಈಗಲಾದರೂ, ಈ ಕೆಲಸಗಳನ್ನು ಮಾಡಬೇಕಾಗಿ ಕೋರುತ್ತೇನೆ. ಬಾಗೇಪಲ್ಲಿ, ಗುಡಿಬಂಡೆ, ನಗರಗೆರೆ—ಆ ಪ್ರದೇಶದಲ್ಲಿ ಮಳೆಯಿಲ್ಲ, 2—3 ವರ್ಷಗಳಿಂದ ಬಹಳ ತೊಂದರೆಯಾಗಿದೆ. ಇಂಥ ಸನ್ನಿವೇಶದಲ್ಲಿ ಪುವಲವಾರಪಲ್ಲಿ ಛಾನಲ್‌ಗೆ 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ 3 ವರ್ಷಗಳಾಗಿವೆ, ಮಡವಾಯಿ ಕಟ್ಟಲು 2 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಆ ಛಾನಲ್ ಕೆಳಗಿರುವ ವ್ಯವಸಾಯಗಾರರಿಗೆ ನೀರನ್ನೊದಗಿಸಿದರೆ ಬಹಳ ಎಕರೆಗಳಲ್ಲಿ ನೀರಾವರಿ ಸಾಗುವಳಿಯಾಗುತ್ತಿತ್ತು. ಇದನ್ನೆಲ್ಲಾ ಮುಖ್ಯಮಂತ್ರಿಗಳು ಗಮನಿಸಿ ಕರ್ಣಾಟಕ ಜನತೆಗೆ ಆಹಾರವನ್ನೊದಗಿಸಲು ಅನುಕೂಲವಾಗುವಂತೆ ವ್ಯವಸಾಯಗಾರರಿಗೆ ಬೇಕಾದ ಬುಲ್‌ಡೋಜರುಗಳು, ಟ್ರ್ಯಾಕ್ಟರುಗಳು, ಆಧುನಿಕ ಉಪಕರಣಗಳು, ಗೊಬ್ಬರ, ಬೀಜಗಳು ನೀರಾವರಿ ಸೌಕರ್ಯ ಮುಂತಾದುವನ್ನೆಲ್ಲಾ ಒದಗಿಸಿಕೊಟ್ಟು ವ್ಯವಸಾಯದ ಖಾತೆಯನ್ನು ವಹಿಸಿಕೊಂಡಿರುವಾಗ ಅನುಕೂಲಮಾಡಿ, ಶ್ರೀ ನಿಜಲಿಂಗಪ್ಪನವರು ಈ ದೇಶದ ಆಹಾರವನ್ನು ಒದಗಿಸುವ ಬಸವಣ್ಣನವರಾಗಲಿ ಎಂದು ಹಾರೈಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Mr. DEPUTY SPEAKER.—Now the House will adjourn and re-assemble at 9-00 A.M. tomorrow.

The House adjourned at Five Minutes past Seven of the Clock to meet again at Nine of the Clock on Tuesday, the 25th July 1967.